
ಪ್ರಬೋಧನೆ

ಲಂಕೇಶ್

ನವೆಂಬರ್ 10, 2010 ರೂ. 12/-



ಸತ್ಯ ಹೇಳುವುದು ದೇಶದ್ರೋಹವಲ್ಲ!






ರೆಡ್ಡಿ ಯಡ್ಡಿಗೇ ...ಪರೇಷನ್!

...ೀಯರ್ ತಲೆಗೇ ಟೋಪಿ ಇಟ್ಟ ಅಧಿಕಾರಿ



...ಬ್ಬಳ್ಳಿ: ...ಕ್ತಚರಿತ ...ಯ್ಯಂಗ್ ...ರ್


ಸೂತಕದ ಮನೆಯ ನೂತನ ನಾಯಕ!




ಮೈಕ್ರೋ ಫೈನಾನ್ಸ್, ಮ್ಯಾಕ್ರೋ ಪ್ರಾಫಿಟ್! ಬಡವರ ಸುಲಿಗೆ, ಬಲ್ಲಿದರ ಬ್ಯಾಂಕಿಂಗ್!

ಭಾರತದಲ್ಲಿ ಬಡವರ ಹೆಸರಲ್ಲಿ ಜಾರಿಗೆ ಬಂದ ಎಲ್ಲಾ ಯೋಜನೆಗಳೂ ನಿಜಕ್ಕೂ ಬಡವರ ಪರವಾಗಿದ್ದಿದ್ದರೆ ಈ ದೇಶದಲ್ಲಿ ಎಲ್ಲಾ ಬಡವರು ಟಾಟಾ-ಬಿರ್ಲಾಗಳೇ ಆಗಿರುತ್ತಿದ್ದರು. ಆದರೆ ಬಡವರ ಹೆಸರಿನಲ್ಲಿ ಶ್ರೀಮಂತಿಕೆಯ ಬಸಿರು ಬೆಳೆದಿದ್ದರಿಂದಲೇ ಇಂದು ಈ ದೇಶ ಪ್ರಪಂಚದ ಶೇ.50 ಬಡವರ ತವರುಮನೆಯಾಗಿಯೇ ಉಳಿದಿದೆ. ಇದಕ್ಕೆ ಮುಖ್ಯ ಕಾರಣ ಬಡವರ ಹೆಸರಿನಲ್ಲಿ ಜಾರಿಯಾಗುತ್ತಿದ್ದ ಯೋಜನೆಗಳು ಅವರಿಗೆ ಸಿಗದಂತೆ ದಾರಿಮಧ್ಯದಲ್ಲೇ ಕಾಂಟ್ರಾಕ್ಟರುಗಳು, ಶ್ರೀಮಂತರು, ಭೂಮಾಲೀಕರು ನುಂಗಿ ಹಾಕುತ್ತಿದ್ದದ್ದು.

ಈ ದೇಶದ ಸಂಪನ್ಮೂಲಗಳು ಅಂದರೆ ಜಮೀನು, ಇತರ ಆರ್ಥಿಕ ಉತ್ಪತ್ತಿಗಳಲ್ಲಿ ಸರಿಸಮಾನವಾದ ಪಾಲು ಸಿಗುವಂಥಾ ಕಾಯಿದೆಗಳೇ ನಮ್ಮ ಸಂವಿಧಾನದಲ್ಲಿ ಇಲ್ಲ. ಇದೇ ಬಡವರು ಬಡವರಾಗಿಯೇ ಉಳಿಯಲು ಕಾರಣ ಎಂಬ ವಾದವನ್ನು ಸ್ವಾತಂತ್ರ್ಯ ಬರುವ ಹಿಂದಿನಿಂದಲೂ ಅಂಬೇಡ್ಕರ್ ಅವರನ್ನೂ ಒಳಗೊಂಡಂತೆ ಎಲ್ಲಾ ಪ್ರಗತಿಪರ ಮತ್ತು ಎಡಪಂಥೀಯ ಚಿಂತಕರು ವಾದಿಸುತ್ತಾ ಬಂದಿದ್ದಾರೆ. ಅಂಬೇಡ್ಕರ್ ಅವರಂತೂ ಈ ದೇಶದ ಪ್ರಮುಖ ಉತ್ಪಾದನಾ ಸಾಧನವಾದ ಭೂಮಿಯು ಖಾಸಗಿ ವ್ಯಕ್ತಿಗಳಲ್ಲೇ ಕೇಂದ್ರೀಕೃತವಾಗಿರುವುದೇ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗೆ ಪ್ರಮುಖ ಕಾರಣ ಎಂದು ಸ್ಪಷ್ಟವಾಗಿ ಗುರುತಿಸಿದ್ದರು. ಆದ್ದರಿಂದಲೇ ಭೂಮಿಯ ರಾಷ್ಟ್ರೀಕರಣವಾಗಬೇಕೆಂದೂ ತಮ್ಮ "ಸ್ಟೇಟ್ಸ್ ಅಂಡ್ ಮೈನಾರಿಟೀಸ್" ದಸ್ತಾವೇಜಿನಲ್ಲಿ ಪ್ರಬಲವಾಗಿ ವಾದಿಸಿದ್ದರು.




ಅದೇನೇ ಇರಲಿ, 1991ರ ನಂತರ ದೇಶದ ಚಿಂತನೆಯ ಕ್ರಮವೇ ಬದಲಾಯಿತಲ್ಲ, ಈಗ ಸಂಪನ್ಮೂಲದ ಸಮಾನ ವಿತರಣೆ ಇನ್ನಿತ್ಯಾದಿ ಸಮಾಜವಾದಿ ಪರಿಹಾರಗಳಿಗಿಂತ ಮಾರುಕಟ್ಟೆಯೇ ಸರ್ವರೋಗ ನಿವಾರಕವೆಂಬ ತತ್ವವನ್ನು ಸರ್ಕಾರ ಎಲ್ಲಾ ಕ್ಷೇತ್ರಗಳಲ್ಲೂ ಜಾರಿಗೆ ತಂದಿತು. ಅದರ ಪ್ರಕಾರ ಪ್ರತಿಯೊಬ್ಬರೂ ಕೊಳ್ಳುವವರೋ ಅಥವಾ ಮಾರುವವರೋ ಆದರೆ ಎಲ್ಲರ ಸಮಸ್ಯೆಯೂ ಬಗೆಹರಿಯುತ್ತದೆ. ಈ ಸಿದ್ಧಾಂತದ ಪ್ರಕಾರ ಬಡತನಕ್ಕೆ ಪ್ರಮುಖ ಕಾರಣ ಬಡವರು ಮಾರುಕಟ್ಟೆಯಲ್ಲಿ ಕೊಳ್ಳುವವರಾಗಿ ಅಥವಾ ಮಾರುವವರಾಗಿ ಹೆಚ್ಚಾಗಿ ಪ್ರವೇಶಿಸುತ್ತಿಲ್ಲ ಎನ್ನುವುದು. ಬಡವರು ಮಾರುಕಟ್ಟೆ ಪ್ರವೇಶ ಮಾಡಲಾಗದಿರುವುದಕ್ಕೆ ಪ್ರಮುಖ ಕಾರಣ ಅವರ ಬಳಿ ಬಂಡವಾಳ ಇಲ್ಲದಿರುವುದು. ಬಡವರೂ ಕೂಡಾ ಸಣ್ಣಪುಟ್ಟ ಉದ್ಯಮಗಳಲ್ಲಿ ತೊಡಗಿ, ಬುಟ್ಟಿ ಹೆಣೆಯುವುದು, ಹೂವು ಕಟ್ಟುವುದು, ಚಪ್ಪಲಿ ಮಾರುವುದು, ಸಣ್ಣ ಗೂಡಂಗಡಿ ನಡೆಸುವುದು, ಯಾವುದಾದರೂ ಸರಿ, ಉದ್ಯಮದಲ್ಲಿ ತೊಡಗಿ ತಮ್ಮ ಸರಕು ಮಾರಿದರೆ ಅವರ ಬಡತನ ಹೋಗುತ್ತದೆ ಎಂಬುದು ಇದರ ತರ್ಕ. ಆದರೆ ಬಡವರು ಉದ್ಯಮಿಗಳಾಗದೆ ಇರಲು ಅವರ ಬಳಿ ಬಂಡವಾಳವಿಲ್ಲದಿರುವುದೇ ಕಾರಣ ಎಂದು ತರ್ಕಿಸಿದ ಮೊಹಮ್ಮದ್ ಯೂನಸ್ ಎಂಬುವರು ಬಾಂಗ್ಲಾದೇಶದಲ್ಲಿ ಮೊಟ್ಟಮೊದಲಿಗೆ ಬಡವರಿಗೆ ಸಣ್ಣ ಸಾಲ ಕೊಡುವ "ಉದ್ಯಮ" ಪ್ರಾರಂಭಿಸಿದರು.



ಅದರಲ್ಲೂ ಗ್ರಾಮೀಣ ಉದ್ಯಮಶೀಲ ಮಹಿಳೆಯರನ್ನು ಗುಂಪು ಸೇರಿಸಿ ಆ ಗುಂಪಿಗೆ ಸಾಲ ಕೊಟ್ಟು ಆ ಮೂಲಕ ಗ್ರಾಮೀಣ ಮಹಿಳೆಯರನ್ನು ಮಾರುಕಟ್ಟೆಗೆ ಸೆಳೆಯುವ ಉದ್ಯಮ ಪ್ರಾರಂಭವಾಯಿತು. ಇದಕ್ಕೆ ಮೈಕ್ರೋ ಕ್ರೆಡಿಟ್-ಕಿರುಸಾಲ-ಆಂದೋಲನವೆಂದೂ ಕರೆಯಲಾಯಿತು. ಬಾಂಗ್ಲಾ-ಭಾರತದಂಥ ಬಡರಾಷ್ಟ್ರಗಳ ಬಡತನ ನಿವಾರಣೆಯಾಗಲು ಇದೇ ಹೊಸ ಮಂತ್ರದಂಡವೆಂದು ಆ ದೇಶಗಳನ್ನು ಸುಲಿಯುತ್ತಿರುವ ಶ್ರೀಮಂತ ದೇಶಗಳೇ ಹೇಳಲಾರಂಭಿಸಿದವು. ಮಾತ್ರವಲ್ಲ, ಬಡದೇಶಗಳ ಬಡತನಕ್ಕೆ ಕಾರಣವಾದ ತಮ್ಮ ಸುಲಿಗೆಯನ್ನು ಮರೆಮಾಚಲು ಹೊಸ ದಾರಿಯೊಂದನ್ನು ತೋರಿದ ಯೂನಸ್ ಸಾಹೇಬರಿಗೆ 'ನೊಬೆಲ್' ಪ್ರಶಸ್ತಿಯನ್ನೂ ದಯಪಾಲಿಸಿದರು. ಭಾರತವನ್ನು ಒಳಗೊಂಡಂತೆ ಪ್ರಪಂಚದ ಬಹುಪಾಲು ಬಡದೇಶಗಳಲ್ಲಿ ಇವರ ನೇತೃತ್ವದಲ್ಲೇ ಈ ಮೈಕ್ರೋ ಕ್ರೆಡಿಟ್ "ಆಂದೋಲನ" ಪ್ರಾರಂಭವಾಯಿತು. ಭಾರತದಲ್ಲೂ ಪ್ರಾರಂಭವಾದ ಸ್ವ-ಸಹಾಯ ಗುಂಪುಗಳು (SHG) ಈ ಆಂದೋಲನವನ್ನು ಭಾರತದ ಮೂಲೆ ಮೂಲೆ ಮುಟ್ಟಿಸಿತು.

ಈ ಮೈಕ್ರೋ ಕ್ರೆಡಿಟ್ ಆಂದೋಲನದ ಮೂಲಕ ಒಂದು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ನಲುಗುತ್ತಿರುವ ಮಹಿಳೆಯರು ಹೊರಬಂದು ಸ್ವಂತ ಕಾಲ ಮೇಲೆ ನಿಲ್ಲುವಂತಾಗುತ್ತದೆ. ಅವರ ಬಡತನ ನೀಗುತ್ತದೆ. ಅವರ ಮೇಲಿನ ಪುರುಷ ಶೋಷಣೆ ತಪ್ಪುತ್ತದೆ ಎಂದೆಲ್ಲಾ ನಿರೀಕ್ಷಿಸಲಾಗಿತ್ತು. ಭಾರತವನ್ನೂ ಒಳಗೊಂಡಂತೆ ಈ ಸ್ವಸಹಾಯ ಗುಂಪು ಆಂದೋಲನ ಪ್ರಾರಂಭವಾಗಿ ಈಗ ಹತ್ತು ವರ್ಷಗಳಾಗಿವೆ. ಇವುಗಳ ಘೋಷಿತ ಉದ್ದೇಶ ಮತ್ತು ಸಾಧನೆಗಳ ಬಗ್ಗೆ ಈಗ ಸಾಕಷ್ಟು ಅಧ್ಯಯನ ನಡೆದಿದೆ. ಈ ಅಧ್ಯಯನಗಳು ತುಂಬಾ ಸ್ಪಷ್ಟವಾಗಿ ಈ SHG ಆಂದೋಲನವು ಮಹಿಳೆಯರಲ್ಲಿ ಸ್ವಲ್ಪ ಚಲನೆ ಮತ್ತು ತಿಳುವಳಿಕೆಯನ್ನು ನೀಡಿರುವುದು ನಿಜವೇ ಆದರೂ ಅದು ಯಾವ ರೀತಿಯಿಂದಲೂ ಅವರ ಬಡತನವನ್ನಾಗಲೀ, ಕುಟುಂಬದ ಒಳಗಿನ ಅವರ ಶೋಷಣೆಯನ್ನಾಗಲೀ ತಪ್ಪಿಸಿಲ್ಲವೆಂದು ಸ್ಪಷ್ಟ ಮಾತಿನಲ್ಲಿ ತಿಳಿಸಿವೆ. ಈ ಕಿರುಸಾಲ ಆಂದೋಲನವು ಮಹಿಳೆಯ ಶೋಷಣೆ ನಡೆಯುವ ಪುರುಷಾಧಿಪತ್ಯದ ಸಾಮಾಜಿಕ ಹಂದರವನ್ನೇನೂ ಅಲುಗಾಡಿಸುವುದಿಲ್ಲವಾದ್ದರಿಂದ ಇದು ಮಹಿಳೆಯ ಸಂಸಾರಕ್ಕಾಗಿ ತನ್ನ ಎಲ್ಲಾ ಸುಖ ಸಂತೋಷವನ್ನೂ ತ್ಯಾಗ ಮಾಡುವ ಸಾಂಪ್ರದಾಯಿಕ ಪಾತ್ರವನ್ನೇ ಮತ್ತಷ್ಟು ಗಟ್ಟಿಗೊಳಿಸಿದೆ ಎಂದು ಕರ್ನಾಟಕ, ಆಂಧ್ರಗಳಲ್ಲಿ ಇತ್ತೀಚಿಗೆ ನಡೆದ ಮತ್ತೊಂದು ಅಧ್ಯಯನ ಸಾಬೀತುಪಡಿಸಿದೆ.

ಆದರೂ ಈ "ಆಂದೋಲನ"ದಿಂದ ಸಾಕಷ್ಟು ಲಾಭ ಪಡೆದವರು ಮಾತ್ರ ದೊಡ್ಡ ದೊಡ್ಡ ಮೈಕ್ರೋ ಫೈನಾನ್ಸ್ ಕಂಪನಿ(MFI)ಗಳು. ವಾಸ್ತವದಲ್ಲಿ ಆಗುತ್ತಿರುವುದಿಷ್ಟೆ. ಪ್ರಾರಂಭದಲ್ಲಿ ಈ ಸ್ವ-ಸಹಾಯ ಗುಂಪುಗಳಿಗೆ ಬ್ಯಾಂಕುಗಳು ಅವರ ಅರ್ಹತೆ ಇತ್ಯಾದಿಗಳನ್ನು ಗಮನಿಸಿ ಸಾಲ ಕೊಡಲು ಪ್ರಾರಂಭಿಸಿದ್ದವು. ಆದರೆ ಜಾಗತೀಕರಣ-ಉದಾರೀಕರಣದ ಈ ಯುಗದಲ್ಲಿ ಬ್ಯಾಂಕಿಂಗ್ ಕ್ಷೇತ್ರವು ಮೊದಲಿದ್ದ ಸಾಮಾಜಿಕ ಕಾಳಜಿಯ ಮುಖವಾಡವನ್ನೆಲ್ಲಾ ಕಳಚಿಟ್ಟು ಪೂರ್ಣ ಪ್ರಮಾಣದ ಬ್ಯಾಂಕಿಂಗ್ ಉದ್ಯಮಕ್ಕೇ ಇಳಿಯಿತು. ಈ ಕಿರುಸಾಲ ಕ್ಷೇತ್ರದಲ್ಲಿ ಹಣ ನೀಡುವುದು ಮತ್ತು ಅದನ್ನು ವಸೂಲಿ ಮಾಡುವಂಥಾ ಡೆಲಿವರಿ ವೆಚ್ಚಗಳೇ ಅಧಿಕ.



ಆ ಖರ್ಚನ್ನೆಲ್ಲಾ ನಿಭಾಯಿಸಿ ಲಾಭ ಮಾಡಬೇಕೆಂದರೆ ಅಧಿಕ ಬಡ್ಡಿ ದರವನ್ನು ಹೇರಬೇಕು. ಆದರೆ ಈ ಸಂಘಟಿತ ಬ್ಯಾಂಕಿಂಗ್ ಕ್ಷೇತ್ರದ ವಹಿವಾಟನ್ನು ರಿಸರ್ವ್ ಬ್ಯಾಂಕ್ ನಿಯಮಗಳು ನಿರ್ದೇಶಿಸುತ್ತವೆ. ಅದರ ಪ್ರಕಾರ ಅವರು ಸಿಕ್ಕಾಪಟ್ಟೆ ಬಡ್ಡಿ ವಸೂಲಿ ಮಾಡುವಂತಿಲ್ಲ. ಹಾಗಿದ್ದರೂ ಹಲವು ಬ್ಯಾಂಕುಗಳು ಈಗಲೂ SHGಗಳಿಗೆ ಶೇ.24ಕ್ಕೂ ಹೆಚ್ಚು ಬಡ್ಡಿ ದರದನ್ನು ವಿಧಿಸುವುದುಂಟಾದರೂ ಬ್ಯಾಂಕುಗಳು ಕಿರುಸಾಲದ ಕಡೆ ಹೆಚ್ಚು ಗಮನ ನೀಡಲಿಲ್ಲ.

ಆಗ ಈ ಕ್ಷೇತ್ರಕ್ಕೆ ಪ್ರವೇಶಿಸಿದ್ದು ಖಾಸಗಿ MFI-ಮೈಕ್ರೋ ಫೈನಾನ್ಸ್ ಕಂಪನಿಗಳು. ಅರ್ಥಾತ್ ಗ್ರಾಮೀಣ ಮತ್ತು ಪಟ್ಟಣದ ಬಡಜನತೆಯ ಬದುಕನ್ನು ಪ್ಯಾರಾಸೈಟುಗಳಂತೆ ಕಿತ್ತು ತಿನ್ನುತ್ತಿರುವ ಹೊಸ ಬಡ್ಡಿ ವ್ಯಾಪಾರಿಗಳು! ಇವುಗಳ ಕ್ಷೇತ್ರ ಕಿರುಸಾಲವಾದ್ದರಿಂದ ರಿಸರ್ವ್ ಬ್ಯಾಂಕ್ ನಿಯಮಾವಳಿಗಳು ಇದಕ್ಕೆ ಅನ್ವಯಿಸುವುದಿಲ್ಲ. ಹೀಗಾಗಿ ಸಾಲವನ್ನು ಕೊಟ್ಟು ವಸೂಲಿ ಮಾಡುವ ತಾಕತಿದ್ದರೆ ಕಾನೂನುಬದ್ಧವಾಗಿಯೇ ಬಡಜನರನ್ನು ಲೂಟಿ ಹೊಡೆಯುವ ಹೊಸ ಅವಕಾಶವನ್ನು ಕಿರುಸಾಲ ಕ್ಷೇತ್ರ ತೆರೆದಿಟ್ಟಿತು. ಇಂದು ಇವುಗಳ ವಿಸ್ತಾರ ಎಷ್ಟಿದೆಯೆಂದರೆ ಭಾರತದ 2.2 ಕೋಟಿಗೂ ಹೆಚ್ಚು ಜನರನ್ನು ಈ MFI ಗಳು ತಮ್ಮ ಸಾಲದಶೂಲದಲ್ಲಿ ಇರಿಯುತ್ತಿವೆ. SHGಗಳಿಗಿಂತ ಹೆಚ್ಚಿನ ಸದಸ್ಯರನ್ನು ಇವು ಹೊಂದಿವೆ. ಇವುಗಳು ಹಾಕುವ ಬಡ್ಡಿದರವೆಷ್ಟು ಗೊತ್ತೆ? ಶೇ.30-70ರಷ್ಟು! ಹಲವಾರು ಕಡೆ ಸಾಂಪ್ರದಾಯಿಕ ಬಡ್ಡಿ ವ್ಯಾಪಾರಿಗಳೂ ಸಹ ವಿಧಿಸುತ್ತಿರುವ ಬಡ್ಡಿ ಶೇ.50ನ್ನು ದಾಟುವುದಿಲ್ಲ.

ಈ MFI ಗಳು ಸಾಲ ವಸೂಲಿ ಮಾಡಲು ಎಂಥಾ ಕ್ರೂರ ವಿಧಾನಗಳನ್ನು ಬೇಕಾದರೂ ಅನುಸರಿಸುತ್ತವೆ. ಹಾಡು ಹಗಲೇ ಮನೆಗೆ ನುಗ್ಗುವುದು, ಬೀದಿಯಲ್ಲಿ ಹೊಡೆಯುವುದು, ಮಕ್ಕಳನ್ನು ಒತ್ತೆ ಇಟ್ಟುಕೊಳ್ಳುವುದು, ಬಹಿರಂಗವಾಗಿ ಅಪಮಾನ ಮಾಡುವುದು ಇತ್ಯಾದಿ. ಇದರಿಂದಾಗಿ ಕಳೆದ ವರ್ಷ ಕೋಲಾರದಲ್ಲಿ ಒಬ್ಬ ಕೂಲಿ-ಕಾರ್ಮಿಕ ಆತ್ಮಹತ್ಯೆ ಮಾಡಿಕೊಂಡಿದ್ದರೆ, ಆಂಧ್ರವೊಂದರಲ್ಲೇ 30ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರಿಂದ ರೊಚ್ಚಿಗೆದ್ದ ರೈತ ಸಂಘಟನೆಯ ಕಾರ್ಯಕರ್ತರು ಈ MFI ಗಳ ಕಚೇರಿಯನ್ನೇ ಕಳೆದ ವಾರ ವಿಶಾಖಪಟ್ಟಣದಲ್ಲಿ ಧ್ವಂಸ ಮಾಡಿದ್ದಾರೆ.

ಈ ಮೈಕ್ರೋ ಫೈನಾನ್ಸ್ ಯಾವ ಕಾರಣಕ್ಕೂ ರೈತಾಪಿಯ ಬಡತನವನ್ನು ನೀಗುವುದಿಲ್ಲ ಎಂದು ಸ್ವತಃ ರಿಸರ್ವ್ ಬ್ಯಾಂಕೇ ಈಗ ಹೇಳುತ್ತಿದೆ.


"ಒಂದು ಸ್ಥಗಿತಗೊಂಡ ಗ್ರಾಮೀಣ ಆರ್ಥಿಕತೆಯಲ್ಲಿ ಹೆಚ್ಚೆಚ್ಚು ಸಣ್ಣ ವ್ಯಾಪಾರಿಗಳು ಇರಲು ಅಶಕ್ಯ. ಹಳ್ಳಿಯ 2/3 ಭಾಗದಷ್ಟು ಜನ ವಾಣಿಜ್ಯ ಉದ್ದೇಶವಿಲ್ಲದ ಆಹಾರ ಧಾನ್ಯದ ಉತ್ಪಾದನೆಯ ಮೇಲೆ ಆಧಾರಿತರಾಗಿದ್ದರೆ ಉಳಿದ ಶೇ.20ರಷ್ಟು ಜನ ಸಣ್ಣಪುಟ್ಟ ಕುಶಲ ಕೆಲಸಗಾರರಾಗಿರುತ್ತಾರೆ. ಈ ಜನತೆಯ ಆರ್ಥಿಕ ಚಟುವಟಿಕೆಯ ಚಕ್ರ 6 ತಿಂಗಳಿಂದ ಒಂದು ವರ್ಷದಷ್ಟು ಸುದೀರ್ಘವಾಗಿರುತ್ತದೆ. ಈ ಯಾವುದೇ ಆರ್ಥಿಕ ಚಟುವಟಿಕೆಗಳು ಪ್ರತೀವಾರ ಮರುಪಾವತಿ ಮಾಡುವಂಥ ಆದಾಯವನ್ನಾಗಲೀ, ಶೇ.20-40ರಷ್ಟು ಬಡ್ಡಿಯನ್ನು ತೆರಬಲ್ಲಂಥ ಆದಾಯವನ್ನಾಗಲೀ ಹುಟ್ಟುಹಾಕುವುದಿಲ್ಲ. ಹೀಗಾಗಿ ಅವರು ಮೈಕ್ರೋ ಫೈನಾನ್ಸ್‌ಗಳಿಂದ ಈ ಬಗೆಯ ಭಾರೀ ಬಡ್ಡಿ ದರದಲ್ಲಿ ಸಾಲವನ್ನು ಪಡೆದುಕೊಂಡರೆ ಅವರ ಬಡತನವು ಅಳಿಯುವುದಿರಲಿ ಕೆಲವೇ ದಿನಗಳಲ್ಲಿ ಮೊದಲಿಗಿಂತ ಹೆಚ್ಚಿನ ಬಡತನಕ್ಕೆ ಗುರಿಯಾಗುತ್ತಾರೆ" ಎಂದು ನಬಾರ್ಡ್‌ನ ಆರ್ಥಿಕ ತಜ್ಞರೇ ಹೇಳುತ್ತಿದ್ದಾರೆ.

ಆದರೆ ಅದಕ್ಕೆ ಪ್ರತಿಯಾಗಿ "ಮೈಕ್ರೋಫೈನಾನ್ಸ್ ಸಂಸ್ಥೆಗಳ ಗಳಿಕೆ 2002ರಲ್ಲಿ ಶೇ. 18.8ರಷ್ಟು ಮಾತ್ರ ಇದ್ದದ್ದು 2009ರ ವೇಳೆಗೆ ಶೇ.31.4ಕ್ಕೇ ಏರಿದೆ. ಅದೇ ಅವಧಿಯಲ್ಲಿ ಅವರ ನಿರ್ವಹಣಾ ವೆಚ್ಚವು ಶೇ.19.9ರಿಂದ ಶೇ.11.5ಕ್ಕೆ ಇಳಿದಿದೆ. ಹೀಗಾಗಿ ಮೈಕ್ರೋ ಫೈನಾನ್ಸ್ ಕಂಪನಿಗಳ ಸಂಪತ್ತಿನ ಮೇಲಿನ ಗಳಿಕೆಯ ದರವು ವಿಶ್ವದೆಲ್ಲೆಡೆ ಕೇವಲ ಶೇ.1.5ರಷ್ಟಿದ್ದರೂ ಭಾರತದಲ್ಲಿ ಮಾತ್ರ ಈ ಕಂಪನಿಗಳ ಸಂಪತ್ತಿನ ಮೇಲಿನ ಗಳಿಕೆಯ ದರವು 2002ರಲ್ಲಿ -1.5 ಇದ್ದದ್ದು 2009ರಲ್ಲಿ ಶೇ. 4.3ಕ್ಕೆ ಏರಿದೆ. ಹೀಗಾಗಿ ಈ ಕಂಪನಿಗಳು ತಮ್ಮ ಬಡ್ಡಿ ದರವನ್ನು ಕಡಿಮೆ ಮಾಡಿದರೆ ಏನೂ ನಷ್ಟವಿಲ್ಲ" ಎಂಬುದೂ ಸಹ ಇತ್ತೀಚಿನ ನಬಾರ್ಡ್ ವಿಶ್ಲೇಷಣೆ.

ಹೀಗಾಗಿಯೇ ಕೆಲ ವರ್ಷಗಳ ಹಿಂದೆ ಅಡ್ರೆಸ್ ಇಲ್ಲದ ಕಂಪನಿಯಾಗಿದ್ದ SKS ಎಂಬ ಬ್ಲೇಡ್ ಕಂಪನಿ ಈ ಮೈಕ್ರೋಫೈನಾನ್ಸ್ ದಂಧೆಯಲ್ಲಿ ತೊಡಗಿ ಈಗ ದೈತ್ಯನಾಗಿ ಬೆಳೆದಿದೆ. ಇಂದು ಈ ಕಂಪನಿ ಭಾರತದಲ್ಲೇ ಅತಿದೊಡ್ಡ ಮೈಕ್ರೋ ಫೈನಾನ್ಸ್ ಕಂಪನಿಯಾಗಿ ಬೆಳೆದಿದ್ದು ಕರ್ನಾಟಕ, ಆಂಧ್ರ, ಒರಿಸ್ಸಾವನ್ನು ಒಳಗೊಂಡಂತೆ ಹತ್ತು ರಾಜ್ಯಗಳಲ್ಲಿ ಗ್ರಾಮೀಣ ರೈತಾಪಿಯ ರಕ್ತ ಹೀರುತ್ತಿದೆ. ಕರ್ನಾಟಕದಲ್ಲೂ ಇದೇ ಕಂಪನಿಯೇ ಅತಿದೊಡ್ಡ ಕಿರುಸಾಲ ನೀಡುವ ಕಂಪನಿಯಾಗಿದ್ದು ಮೈಸೂರು, ಕೋಲಾರ, ರಾಮನಗರ, ಶಿಡ್ಲಘಟ್ಟ ಇತ್ಯಾದಿ ಕಡೆಗಳಲ್ಲಿ ಇವರಿಂದ ಸಾಲ ಪಡೆದ ರೈತರು ಪಡಬಾರದ ಚಿತ್ರಹಿಂಸೆ ಪಡುತ್ತಿದ್ದಾರೆ. ಆದರೆ ಈ SKS ಕಂಪನಿಯ ಮಾಲೀಕ ವಿಕ್ರಮ್ ಅಕೂಲನ ಆಸ್ತಿ-ಪಾಸ್ತಿ ಮಾತ್ರ ಸಾವಿರ ಕೋಟಿ ರೂ.ಗಳನ್ನು ದಾಟಿದೆ. ಈ ಕಿರುಸಾಲ ಎಂಬುದು ಕೇವಲ ಲಾಭದ ದಂಧೆಯೇ ಹೊರತು ಬಡತನ

▶▶ 8

ನೋ ಕಾಮೆಂಟ್ಸ್



"ಸಾಮೂಹಿಕವಾಗಿ ಜನರನ್ನು ಹತ್ಯೆಗೈ... ಧರ್ಮವನ್ನಾಧರಿಸಿ ಜನರನ್ನು ಕೊಂದವರು, ಹಗರ... ಭಾಗಿಯಾದವರು, ಅತ್ಯಾಚಾರಿಗಳು, ಲೂಟಿಕೋರರು... ಅತಿ ಬಡವರನ್ನು ಸುಲಿಗೆ ಮಾಡುತ್ತಿರುವವರು ಈ ದೇ... ಸ್ವತಂತ್ರವಾಗಿ ಸುತ್ತಾಡುತ್ತಿದ್ದಾರೆ. ಆದರೆ ತಮ್ಮ ... ಭಾವನೆಗಳನ್ನು ಹೇಳಿದ ಲೇಖಕರನ್ನು ಮೌನವಾ... ಮತ್ತು ನ್ಯಾಯ ಕೋರುವವರನ್ನು ಜೈಲಿಗೆ ಹಾಕು... ರಾಷ್ಟ್ರದ ಬಗ್ಗೆ ನನಗೆ ಕನಿಕರ ಮೂಡುತ್ತದೆ. ಕಾ... ಜನರ ಬಾಯಲ್ಲಿ ನಾವು ಭಾರತೀಯರು ... ಬಲಾತ್ಕಾರದಿಂದ ಹೇಳಿಸಲು ಅಲ್ಲಿನ ಮುಗ್ಧ ಜನರ... ಅತ್ಯಾಚಾರ, ದೌರ್ಜನ್ಯಗಳು ನಡೆಯಬಾರದು ಮತ್ತು ... ನ್ಯಾಯಸಮ್ಮತ ಸಮಾಜದಲ್ಲಿ ಎಲ್ಲರೂ ಬದುಕಬ... ಆಶಯಗಳಷ್ಟೇ ನನ್ನ ಮಾತಿನಲ್ಲಿ ಅಡಗಿದೆ."

- ಅರುಂಧತಿ ರಾ...
ಕಾಶ್ಮೀರದ 'ಆಜಾದಿ' ಪ...

ಮಾತನಾಡಿದ್ದಕ್ಕೆ ದೇಶದ್ರೋಹದ ಅಪರಾಧ ಎದುರಿಸುತ್ತಿರುವ ಲೇ...

"ನಾನು ನಕ್ಸಲರ ಪ್ರದೇಶದಲ್ಲಿ ನಿರ್ಭಯ... ಸಂಚರಿಸಿದೆ. ಅಲ್ಲಿ ಯಾವ ನಕ್ಸಲರು ನನ್ನ ಕಡೆ... ತೋರಿಸಿ ಹೆದರಿಸಲಿಲ್ಲ. ಆದರೆ ವಾಪಸ್ ಬಂದ ... ನಮ್ಮದೇ ಪೊಲೀಸರೇ ನನ್ನನ್ನು ಬೆದರಿಸಿದರು. ... ಎಲ್ಲಾ ಬಗೆಯ ಹಿಂಸೆಯನ್ನೂ ವಿರೋಧಿಸು... ಪೊಲೀಸರದ್ದು ಮತ್ತು ನಕ್ಸಲರದ್ದು ಇಬ್ಬರದ್ದೂ. ಅ... ಹಳ್ಳಿಯ ಜನಗಳಿಗೆ ನಕ್ಸಲರ ಭಯಕ್ಕಿಂತ ಪೊಲೀಸರ ಭ... ಹೆಚ್ಚಿದಂತಿದೆ."

- ರಾಜೇಂದ್ರ ಕ...

ಮಹಾರಾಷ್ಟ್ರದ ಗಡ್ಚಿರೋಲಿ ಜಿಲ್ಲೆ... ಉಪ-ಜಿಲ್ಲಾಧಿಕಾರಿ

"ಸೆರೆಯಾನೆಗಳಿಗೆ ಸಾಕಿದ ಆನೆಗಳು ಎಂಬ ಪ... ಬಳಸಲಾಗುತ್ತದೆ. ಆದರೆ ದನ, ಕುರಿ, ಮೇಕೆಗಳಂತೆ ಆನೆ... ಸಾಕಲಾಗದು. ಆನೆ ಮೂಲಭೂತವಾಗಿ ಕಾಡು ... ಸಾಕಾನೆಗಳಿಗೆ ಸೆರೆಯಾನೆ ಎಂಬ ಪದ ಬಳಸು... ಒಳ್ಳೆಯದು."

- ಪ್ರಜ್ಞಾ ಚೌಟ, ...

ನಂಬಿದ್ರೆನಂಬಿ ಬಿಟ್ರೆಬಿಡಿ

"ಪ್ರತಿಪಕ್ಷ ನಾಯಕ ಸಿದ್ಧರಾಮಯ್ಯ ಜೆಡಿ... ಹಿಂತಿರುಗಿ ಬಂದರೆ ಅವರನ್ನು ಮುಖ್ಯಮಂತ್ರಿ ಮಾಡು...

- ಚಿಕ್ಕಮಾದು, ಜೆಡಿಎಸ್ ...

"ಒಬ್ಬ ಭ್ರಷ್ಟ ಅಧಿಕಾರಿಯನ್ನು ಬಂಧಿಸಿದ ... ಆತನನ್ನು ವಿಚಾರಣೆಯ ಹಂತಕ್ಕೆ ತರುವಲ್ಲಿ ಸುಮಾ... ಹತ್ತು ವರ್ಷಗಳು ಸಂದಿರುತ್ತವೆ. ಹಾಗಾಗಿ ಭ್ರಷ್ಟರಿಗೆ ಶಿ... ಭಯವೇ ಇಲ್ಲವಾಗಿದೆ."

- ಸಂತೋಷ್ ಹೆಗ್ಡೆ, ಲೋಕಾ...

"ತುಮಕೂರು ವಿಶ್ವವಿದ್ಯಾಲಯದ ಕುಲಪತಿ ... ಶರ್ಮಾರವರ ಮಾಸಿಕ ಸಂಬಳ ರೂ. 2,76,469! ... ಈ ದೇಶದ ರಾಷ್ಟ್ರಪತಿಯವರ ಸಂಬಳ ರೂ. 1,50,... ಪ್ರಧಾನಿಯ ಸಂಬಳ ರೂ.1,00,000. ರಾಜ್ಯಪಾಲರ ಸ... ರೂ.1,10,000."

"ಒಂದು ಪಕ್ಷದಿಂದ ಆಯ್ಕೆಯಾದ ಶಾಸಕರು ... ತನಕ ಅದೇ ಪಕ್ಷದಲ್ಲಿ ಉಳಿದುಕೊಳ್ಳು... ಪ್ರಜಾಪ್ರಭುತ್ವದ ದೃಷ್ಟಿಯಿಂದ ಒಳ್ಳೆಯದು."

- ಯಡಿಯೂ...

"ನಾನು ಎಂದೂ ಪಕ್ಷದ ವಿರುದ್ಧ ಧ್ವನಿ ಎತ್ತಿಲ್ಲ... ನನ್ನ ತಾಯಿಯಿದ್ದಂತೆ. ಯಡಿಯೂರಪ್ಪನವರು ... ತಂದೆಯಿದ್ದಂತೆ."

- ರೇಣುಕಾಚಾ...

ಕಾಂಗ್ರೆಸ್‌ನ ಸಮಸ್ಯೆಗಳಿಗೆ ಮೂಲಕಾರಣವೇ ಇದು!

"ನಾನು ಅತ್ತ ಎಡವೂ ಅಲ್ಲದ, ಇತ್ತ ಬಲವೂ ಅ... ಮಧ್ಯದ ದಾರಿಯಲ್ಲಿ ಹೋಗುವವನು ಹಾಗೂ ಮ... ಹೊಂದಾಣಿಕೆ ಸ್ವಭಾವದವನು. ಆದ್ದರಿಂದ ಎಲ್ಲ... ಒಗ್ಗಟ್ಟಿನಿಂದ ತೆಗೆದುಕೊಂಡು ಹೋಗಲು ಸಾಧ್ಯವಾಗು..."

- ಜಿ. ಪರಮೇಶ್ವರ್, ಕರ್ನಾ...
ಕಾಂಗ್ರೆಸ್‌ನ ಹೊಸ ಅ...

ತ್ಯ ಹೇಳುವುದು ದೇಶದ್ರೋಹವಲ್ಲ

ಅನಿಸಿಕೆಗಳನ್ನು ವ್ಯಕ್ತಪಡಿಸುವ ಬರಹಗಾರರನ್ನೇ ುವ ರಾಷ್ಟ್ರದ ಬಗ್ಗೆ ಕನಿಕರ ಮೂಡುತ್ತಿದೆ. ದವರನ್ನು ಜೈಲಿಗೆ ದೂಡುವ ಆದರೆ ಕೋಮು ಗಿಗಡುಕರನ್ನು, ಸಾಮೂಹಿಕವಾಗಿ ಜನರನ್ನು ರನ್ನು, ಕಾರ್ಪೊರೇಟ್ ಖದೀಮರನ್ನು, ಲೂಟಿ ಅತ್ಯಾಚಾರಿಗಳನ್ನು, ಬಡವರ ರಕ್ತವನ್ನೇ ಹೀರು ್ವತಂತ್ರರಾಗಿ ಬಿಟ್ಟಿರುವ ರಾಷ್ಟ್ರದ ಬಗ್ಗೆ ಕನಿಕರ " ಎಂದು ಖ್ಯಾತಿ ಲೇಖಕಿ ಅರುಂಧತಿ ರಾಯ್ ತ್ತೀಚೆಗೆ ನಮ್ಮ ರಾಷ್ಟ್ರನಾಯಕರನ್ನು ತರಾಟೆಗೆ ಡಿದ್ದಾರೆ.

ಹಿನ್ನೆಲೆ ನಿಮಗೆಲ್ಲಾ ಗೊತ್ತೇ ಇರುತ್ತದೆ. ಇತ್ತೀಚೆಗೆ 'ಆಜಾದಿ-ದಿ ಓನ್ಲಿ ವೇ' ಎಂಬ ರಣದಲ್ಲಿ ಭಾಗವಹಿಸಿದ್ದ ರಾಯ್ ಷಣದಲ್ಲಿ "ಕಾಶ್ಮೀರ ಎಂದೂ ಂಗವಾಗಿರಲಿಲ್ಲ, ಇದನ್ನು ಭಾರತ ೂಡ ಒಪ್ಪಿಕೊಂಡಿದೆ" ಎಂದಿದ್ದೇ ವಾದಿಗಳ ಪಿತ್ಥ ನೆತ್ತಿಗೇರಲು ುತು.

ರೇ "ಅರುಂಧತಿ ರಾಯ್ ದೇಶ ಗೆದಿದ್ದಾರೆ, ದೇಶದ ವಿಭಜನೆಗೆ ದ್ದಾರೆ. ಆದ್ದರಿಂದ ಆಕೆಯನ್ನು ಂಧಿಸಿ ಆಕೆಯ ವಿರುದ್ಧ ದೇಶ ುಗೆಯುವವರ ವಿರುದ್ಧವಿರುವ ಜಾರಿಗೊಳಿಸಬೇಕು" ಎಂದೆಲ್ಲ ೆಟ್ಲಿ ತರಹದ ಬಿಜೆಪಿ ನಾಯಕರು ್ದಾರೆ. ಇಷ್ಟೂ ಸಾಲದೆಂಬಂತೆ ವಾದಿಗಳ ಗೂಂಡಾ ಪಡೆಯಾದ ಳದ ನಾಯಕರೂ "ಆಕೆ ಹುಷಾ . ಇಲ್ಲವೆಂದರೆ ನಾವು ಕಲಾವಿದ ಹುಸೇನ್ ಅವರಿಗೆ ಕಾಣಿಸಿದ ಆಕೆಗೂ ಕಾಣಿಸುತ್ತೇವೆ" ಎಂದು ಕಿದ್ದಾರೆ.

ತ್ವವಾದಿಗಳು ಇಷ್ಟೆಲ್ಲಾ ರಂಪಾಟ ಮಾಡುತ್ತಿದ್ದರೆ ಲಕ್ಕೆ ಸದಾ ನಿಂತಿರುವ ಮಾಧ್ಯಮದ ಹಲವರು ತ್ತಾರೆಯೇ? ಅವರೂ ರಾಯ್ ವಿರುದ್ಧ ದ್ದಲ್ಲದೆ ಅವರ ಭಾಷಣವನ್ನೇ ತಿರುಚಿ ಸುಳ್ಳುಸುಳ್ಳು ಪ್ರಕಟಿಸಿದರು ಅಥವಾ ಪ್ರಸಾರ ಮಾಡಿದರು. ರುವ 'ದಿ ಪಯನಿಯರ್' ಎಂಬ ಇಂಗ್ಲಿಷ್ ೂ ರಾಯ್ ವಿರುದ್ಧ ಬೆಂಕಿಯನ್ನೇ ಉಗುಳಿತು. ಈ ಪತ್ರಿಕೆಯ ಸಂಪಾದಕ ಚಂದನ್ ಮಿತ್ರ ುನ್ನು ಎರಡನೆ ಬಾರಿಗೆ ಬಿಜೆಪಿ ರಾಜ್ಯಸಭಾಕ್ಕೆ ಹಾಗೆಯೇ ಇದೇ ಪತ್ರಿಕೆಯ ಪ್ರಮುಖ ನಾದ ಕಂಚನ್ ಗುಪ್ತ ಎಂಬಾತ ಕೂಡ ಮಾಜಿ ಜಪೇಯಿ ಅವಧಿಯಲ್ಲಿ ಪಿಎಂಒದಲ್ಲಿದ್ದಾತ. ್ಬ ಅಂಕಣಕಾರ ಸ್ವಪನ್ ದಾಸ್‌ಗುಪ್ತಾ ಚೆಡ್ಡಿ ನಲ್ಲದೆ ದೆಹಲಿಯ ಜಂಡೇವಾಲಾ ಪ್ರದೇಶ ರೆಸ್ಸೆಸ್ ಹೆಡ್ ಆಫೀಸಿನ ನಾಯಕರ ಆಜ್ಞೆಗಳನ್ನು ಪಾಲಿಸುವ ಪತ್ರಕರ್ತ! ಇವರೆಲ್ಲರೂ ರಾಯ್ ಚಾಮಗೋಚರ ಕೆರೆದಿದ್ದಾರಲ್ಲದೆ ಆಕೆಯನ್ನು ರ್ಕಾರ ಕೂಡಲೇ ಬಂಧಿಸಬೇಕೆಂದೂ, ಹಾಗೆ ೆ ಅದು ನಿರುಪದ್ರವಿ ಸರ್ಕಾರ ಎಂದು ್ತದೆ ಎಂತಲೂ ಬೆದರಿಸಿದ್ದಾರೆ. ಹೀಗೆಲ್ಲ ಅರಚಾಡುವ ಮೂಲಕ ಇವರೆಲ್ಲರೂ ಸತ್ಯವನ್ನು ಮರೆಮಾಚಲು ಯತ್ನಿಸುತ್ತಿದ್ದಾರೆ.

ಏಕೆಂದರೆ ಅರುಂಧತಿ ರಾಯ್ ಹೇಳಿರುವುದು ಅಕ್ಷರಶಃ ಸತ್ಯವಾಗಿದೆ. ಕಾಶ್ಮೀರ ಎಂದೂ ಭಾರತದ ಅಂಗವಾಗಿರಲಿಲ್ಲ, ಮಾತ್ರವಲ್ಲ, ಭಾರತದ ರಾಷ್ಟ್ರಪಿತ ಮಹಾತ್ಮಾ ಗಾಂಧಿ ಕೂಡ ಕಾಶ್ಮೀರ ಸ್ವತಂತ್ರವಾಗಿರಬೇಕೊ ಅಥವಾ ಭಾರತದ ಅಂಗವಾಗಿರಬೇಕೋ ಎಂಬ ನಿರ್ಧಾರ ಕಾಶ್ಮೀರಿ ಜನರಿಗೆ ಬಿಟ್ಟಿದ್ದೇ ಹೊರತು ಬೇರೆ ಇನ್ಯಾರಿಗೋ ಅಲ್ಲ ಎಂದಿದ್ದರು. ಹಾಗೆಯೇ ನೆಹರೂ ಕೂಡ ಕಾಶ್ಮೀರಿಗಳು ಆಶೋತ್ತರಗಳ ವಿರುದ್ಧವಾಗಿ ಅವರ ಭವಿಷ್ಯವನ್ನು ಕುರಿತು ನಿರ್ಧಾರ ತೆಗೆದುಕೊಳ್ಳಲು ಭಾರತದ ಪಾರ್ಲಿಮೆಂಟಿಗೆ ಯಾವ ಹಕ್ಕೂ ಇಲ್ಲ, ಕಾಶ್ಮೀರ ಕಾಶ್ಮೀರಿಗಳಿಗೆ ಸೇರಿದ್ದಾದ್ದರಿಂದ ಅವರೇ ಆ ನಿರ್ಧಾರವನ್ನು ತೆಗೆದುಕೊಳ್ಳಬೇಕು ಎಂದೂ ನೆಹರೂ ವಾದಿಸಿದ್ದರು. ಮಾತ್ರವಲ್ಲ, ಕಾಶ್ಮೀರ ಒಂದು ವಿವಾದಿತ ಪ್ರದೇಶ ಎಂದು ಹೇಳಿ ಅದನ್ನು ಬಗೆಹರಿಸಬೇಕೆಂದು ವಿಶ್ವಸಂಸ್ಥೆಗೆ ಸೂಚಿಸಿದ್ದರು. (ಅದಾದನಂತರ ನೆಹರೂ ತಮ್ಮ ಈ ಎಲ್ಲ ನಿಲುವುಗಳನ್ನು ಬದಲಾಯಿಸಿ ಕಾಶ್ಮೀರಿಗಳಿಗೆ ದೊಡ್ಡ ದ್ರೋಹ ಬಗೆಯುವ ಮೂಲಕ ಇವತ್ತಿಗೂ ಆ ಜನರ ಮೇಲಿನ ದೌರ್ಜನ್ಯಕ್ಕೆ ಕಾರಣರಾದರು ಎಂಬುದು ಬೇರೆ ವಿಷಯ.)

ವಾಸ್ತವ ಹೀಗಿರುವಾಗ "ಕಾಶ್ಮೀರ ಎಂದೂ ಭಾರತದ ಭಾಗವಾಗಿರಲಿಲ್ಲ" ಎಂದು ರಾಯ್ ಅವರು ಹೇಳಿರುವುದರಲ್ಲಿ ಏನು ತಪ್ಪು? ಇತ್ತೀಚೆಗೆ ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಕೂಡ "ಕಾಶ್ಮೀರ ಎಂದೂ ಭಾರತದ ಭಾಗವಾಗಿರಲಿಲ್ಲ" ಎಂದು ವಿಧಾನಸಭೆಯಲ್ಲಿ ಹೇಳಿದ್ದಕ್ಕೆ ಅವರ ವಿರುದ್ಧ ಬಿಜೆಪಿಗಳು ದೊಡ್ಡ ಗಲಾಟೆ ಮಾಡಿದ್ದರು. ಅಬ್ದುಲ್ಲಾ ಕೂಡ ದೇಶದ ವಿಭಜನೆಗೆ ಕರೆ ನೀಡುತ್ತಿದ್ದಾರೆಂದು ಗಲಭೆ ಮಾಡಿದ್ದರು.

ಹಿಂದೂತ್ವವಾದಿಗಳು ಹೀಗೆಲ್ಲ ವರ್ತಿಸುವುದಕ್ಕೆ ಕಾರಣ ಏನೆಂದರೆ ಅವರಿಗೆ ಎಂದೂ ಸತ್ಯ ಬೇಕಿಲ್ಲ, ಬದಲಾಗಿ ಅವರಿಗೆ ಸದಾ ಬೇಕಿರುವುದು ಸುಳ್ಳು ಇತಿಹಾಸ ಮತ್ತು ಕಪಟ ಅಸತ್ಯಗಳು ಮಾತ್ರ. ರಾಯ್ ವಿರುದ್ಧದ ಅವರ ಪ್ರಸ್ತುತ ಚೀರಾಟದ ಹಿಂದೆಯೂ ಇಂತಹದ್ದೇ ಸತ್ಯವನ್ನು ಮುಚ್ಚಿ ಹಾಕುವ ಒಂದು ಹುನ್ನಾರ ಅಡಗಿದೆ.

ಅಕ್ಟೋಬರ್ 21 ರಂದು ಕಾಶ್ಮೀರ ಕುರಿತು ರಾಯ್ ಈ ಹೇಳಿಕೆ ನೀಡಿದ ದಿನ ಸೇರಿದಂತೆ ಅದಕ್ಕೆ ಹಲವಾರು ದಿನಗಳ ಹಿಂದಿನಿಂದಲೂ ದೆಹಲಿಯಲ್ಲಿ ದೊಡ್ಡ ವಿವಾದ ಸೃಷ್ಟಿ ಮಾಡಿದ್ದು ಮತ್ತು ದಿನಪತ್ರಿಕೆಗಳ ಮುಖಪುಟಗಳಲ್ಲಿ ರಾರಾಜಿಸುತ್ತಿದ್ದದ್ದು ಆರೆಸ್ಸೆಸ್‌ನ ಪ್ರಮುಖ ನಾಯಕರಲ್ಲಿ ಒಬ್ಬನಾದ ಇಂದ್ರೇಶ್ ಕುಮಾರ್ ಎಂಬಾತನನ್ನು ಕುರಿತ ವರದಿಗಳೇ.



ಮೂರು ಅಮಾಯಕ ಜನರನ್ನು ಬಲಿ ತೆಗೆದುಕೊಂಡ ಅಜ್ಮೇರ್ ಬಾಂಬ್ ಬ್ಲಾಸ್ಟ್‌ನ ಮುಖ್ಯ ರೂವಾರಿಗಳಲ್ಲಿ ಈ ಚೆಡ್ಡಿ ನಾಯಕನೂ ಒಬ್ಬ ಎಂದೂ, ಆ ಮೂಲಕ ಆರೆಸ್ಸೆಸ್ ಭಯೋತ್ಪಾದಕ ಕೃತ್ಯಗಳಲ್ಲಿ ತೊಡಗಿದೆ ಎಂದೂ, ಸದ್ಯದಲ್ಲೇ ಇಂದ್ರೇಶ್ ಕುಮಾರ್‌ನಲ್ಲದೆ ಆರೆಸ್ಸೆಸ್ಸಿನ ಇತರೆ ನಾಯಕರನ್ನೂ ರಾಜಸ್ಥಾನದ ಪೊಲೀಸರು ವಿಚಾರಣೆಗೆ ಕರೆಯಲಿದ್ದಾರೆ ಎಂದೂ ಪತ್ರಿಕೆಗಳು ವರದಿ ಮಾಡಿದ್ದವು.

ಇದೆಲ್ಲದರಿಂದ ಸಹಜವಾಗಿಯೇ ಆರೆಸ್ಸೆಸ್ಸಿನ ನಾಯಕರು ನಡುಗಿಹೋದರು; ಎಲ್ಲಿ ತಮ್ಮ ಮುಖವಾಡ ಕಳಚಿ ಬೀಳುತ್ತದೋ ಎಂದು ಕಂಗಾಲಾದರು. ಬಾಂಬ್ ಸ್ಫೋಟದಂತಹ ಹೀನಕೃತ್ಯಗಳ ಹಿಂದೆ ತಮ್ಮ ಸಂಘಟನೆಯ ಕೈವಾಡವಿರುವ ಸತ್ಯ ಜನರಿಗೆ ಗೊತ್ತಾಗುವುದು ಆರೆಸ್ಸೆಸಿಗೆ ಬೇಕಿರಲಿಲ್ಲ, ಆದ್ದರಿಂದ ಇಂದ್ರೇಶ್ ಕುಮಾರ ಮೇಲೆ ಇದ್ದ ಜನರ ಗಮನವನ್ನು ಬೇರೆಡೆಗೆ ತಿರುಗಿಸಲು ಅವರು ಪ್ರಯತ್ನಿಸುತ್ತಿದ್ದರು. ಅದೇ ಹೊತ್ತಿಗೆ ಅರುಂಧತಿ ರಾಯ್ ಈ ಹೇಳಿಕೆ ನೀಡಿದರು. ಆರೆಸ್ಸೆಸಿಗರಿಗೆ ಅಷ್ಟೇ ಸಾಕಿತ್ತು. ರಾಯ್ ಹೇಳಿದ ಸತ್ಯವನ್ನು ಸುಳ್ಳೆಂದು ದೊಡ್ಡ ದನಿಯಲ್ಲಿ ಖಂಡಿಸುವ ಮೂಲಕ ತಮ್ಮದೇ ಸಂಘಟನೆಯ ಇಂದ್ರೇಶ್‌ಕುಮಾರ್ ಎಂಬಾತನನ್ನು ಕುರಿತ ಸತ್ಯ ವೃತ್ತಾಂತ ಎಲ್ಲರ ಗಮನದಿಂದ ದೂರವಾಗುವಂತೆ ಮಾಡುವಲ್ಲಿ ಯಶಸ್ವಿ ಆದರು.

ಈಗ ರಾಯ್ ಸೇರಿದಂತೆ ಇತರೆ ಜನರ ಬಾಯಿ ಮುಚ್ಚಿಸಲು ಹಿಂದೂತ್ವವಾದಿಗಳು ಇನ್ನೊಂದು ಹುನ್ನಾರವನ್ನು ಶುರು ಹಚ್ಚಿಕೊಂಡಿದ್ದಾರೆ. ಅದೇನೆಂದರೆ ಭಾರತದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ ಎಂಬ ಕಾರಣಕ್ಕೆ ಯಾರು ಬೇಕಾದರೂ ತಮಗೆ ಅನ್ನಿಸಿದ್ದನ್ನು ಹೇಳದಂತೆ ನಿಷೇಧ ಹೇರಬೇಕೆಂಬುದು ಅವರ ಒತ್ತಾಯವಾಗಿದೆ. ಆದರೆ ನಿಜವಾದ ಪ್ರಜಾಪ್ರಭುತ್ವದಲ್ಲಿ ಹಿಂದೂತ್ವವಾದಿಗಳ ಇಂತಹ ನಿಷೇಧ ಸಂಸ್ಕೃತಿಗೆ ಕಿಂಚಿತ್ತೂ ಅವಕಾಶವಿರಕೂಡದು. ಬದಲಾಗಿ ಒಂದು ಪ್ರಜಾಪ್ರಭುತ್ವದಲ್ಲಿ ಎಲ್ಲ ಬಗೆಯ ಅನಿಸಿಕೆಗಳಿಗೆ, ಅಭಿಪ್ರಾಯಗಳಿಗೆ, ಭಿನ್ನ ದನಿಗಳಿಗೆ ಎಲ್ಲಾ ತರಹದ ಸ್ವಾತಂತ್ರ ಇರಬೇಕು. ಎಷ್ಟರಮಟ್ಟಿಗೆ ಅಂದರೆ ಖ್ಯಾತ ಚಿಂತಕ ವಾಲ್ಟೇರ್ ಹೇಳಿದ್ದಂತೆ "ನಿನ್ನ ಅಭಿಪ್ರಾಯದೊಂದಿಗೆ ನನ್ನ ಸಮ್ಮತಿ ಇಲ್ಲ, ಆದರೆ ನೀನು ನಿನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಎಲ್ಲಾ ಹಕ್ಕು ನಿನಗಿರಬೇಕೆಂದು ನಾನು ಒತ್ತಾಯ ಮಾಡುತ್ತೇನೆ" ಎಂಬ ವಿಶಾಲ ಮನೋಭಾವವನ್ನು ಪ್ರಜಾಪ್ರಭುತ್ವ ದೇಶವೊಂದು ಹೊಂದಿರಬೇಕು.

ಆದರೆ ಅಂತಹ ವಿಶಾಲ ಮನೋಭಾವ ಹಿಂದೂತ್ವವಾದಿಗಳಿಗೆ ಇಲ್ಲದಿರುವುದರಿಂದಲೇ ಅವರು ಇವತ್ತು ಅರುಂಧತಿ ರಾಯ್ ವಿರುದ್ಧ ದೇಶದ್ರೋಹ ಕಾನೂನುಕ್ರಮ ಜರುಗಿಸಬೇಕೆಂದು ಬಾಯಿ ಬಡಿದುಕೊಳ್ಳುತ್ತಿದ್ದಾರೆ.



ಕಂಡಹಾಗೆ

■ ಗೌರಿ ಲಂಕೇಶ್

ಕಳೆದ ನಾಲ್ಕು ತಿಂಗಳುಗಳಲ್ಲೇ ಕಾಶ್ಮೀರದ 110 ಯುವಕರನ್ನು ಭಾರತದ ಸೈನ್ಯ ಬರ್ಬರವಾಗಿ ಕೊಂದು ಹಾಕಿದೆ. ಚಿಕ್ಕಪುಟ್ಟ ಹುಡುಗರೂ ಸೇರಿದಂತೆ ಸಾವಿರಾರು ಜನರನ್ನು ಭಾರತದ ಸರ್ಕಾರ ಬಂಧಿಸಿದೆ. ಇತ್ತೀಚೆಗೆ ಹತ್ತಾರು ಯುವಕರನ್ನು ನಗ್ನಗೊಳಿಸಿ ಅವರನ್ನೆಲ್ಲ ಅವರ ಊರಿನಲ್ಲಿ ಪ್ರದರ್ಶಿಸುವ ಮೂಲಕ ಅವಮಾನಿಸಿದೆ. ಅದೆಷ್ಟೋ ಯುವತಿಯರ ಮೇಲೆ ಅತ್ಯಾಚಾರ ನಡೆದಿದೆ.

ಹಲವಾರು ದಶಕಗಳಿಂದ ಕಾಶ್ಮೀರಿಗಳು ಭಾರತದ ಬಲಾತ್ಕಾರದ ವಿರುದ್ಧ ಹೋರಾಟ ಮಾಡುತ್ತಿದ್ದರೂ ಅವರನ್ನೆಲ್ಲ ದಮನ ಮಾಡಲು 7,00,000 ಸೈನಿಕರನ್ನು ಭಾರತದ ಸರ್ಕಾರ ನಿಯೋಜಿಸಿದೆ. ಆ ಮೂಲಕ ಕಾಶ್ಮೀರ ಜನರ ವಿರೋಧದ ನಡುವೆಯೂ ಕಾಶ್ಮೀರವನ್ನು ತನ್ನ ಕಪಿಮುಷ್ಠಿಯಲ್ಲಿ ಹಿಡಿದಿಟ್ಟುಕೊಳ್ಳುವ ವಿಫಲ ಮತ್ತು ಕ್ರೂರ ಯತ್ನದಲ್ಲಿ ಭಾರತ ಸರ್ಕಾರ ತೊಡಗಿದೆ.

ಈ ಹಿನ್ನೆಲೆಯಲ್ಲಿ ಅರುಂಧತಿ ರಾಯ್ ತರಹದ ಖ್ಯಾತರು ಮಾತ್ರವಲ್ಲ, ಪ್ರಜಾಪ್ರಭುತ್ವದ ನೀತಿನಿಯಮಗಳಲ್ಲಿ ನಂಬಿರುವ ನಮ್ಮಂತಹ ಸಾಮಾನ್ಯರೂ ಕಾಶ್ಮೀರಿ ಜನರ ಹೋರಾಟಕ್ಕೆ ನಮ್ಮ ಬೆಂಬಲವನ್ನು ಸೂಚಿಸುವುದು ಸೂಕ್ತ ಅಲ್ಲವೇ? ●

ಸೂಚನೆ

ಬರುವ ವಾರ ದೀಪಾವಳಿ ಹಬ್ಬವಿರುವುದರಿಂದ 'ಲಂಕೇಶ್' ವಾರಪತ್ರಿಕೆಯ ಮುಂದಿನ ಸಂಚಿಕೆ ಮಾತ್ರ ಗುರುವಾರವೇ ಬೆಂಗಳೂರಿನ ಮಾರುಕಟ್ಟೆಗಳಲ್ಲಿ ಹಾಗು ಶುಕ್ರವಾರ ಇತರೆ ಕಡೆಗಳಲ್ಲಿ ಲಭ್ಯವಿರುತ್ತದೆ.

ಏಜೆಂಟರು ಮತ್ತು ಓದುಗರು ಗಮನಿಸಬೇಕೆಂದು ವಿನಂತಿ.

ನಮ್ಮ ತಂಡದ ವತಿಯಿಂದ ಎಲ್ಲರಿಗೂ ದೀಪಾವಳಿಯ ಶುಭಾಶಯಗಳು.

-ಸಂ




ಎಷ್ಟು ಬಾರಿ 'ಅಲ್ಲಾ' ಎಂದರೂ ಆರೆಸ್ಸೆಸ್ ಭಯೋತ್ಪಾದಕ ಎಂಬುದು ಸುಳ್ಳಲ್ಲ...

ಆರೆಸ್ಸೆಸ್ ಎಂಬುದೊಂದು ಪಕ್ಕಾ ಭಯೋತ್ಪಾದಕ ಸಂಘಟನೆಯೇ ಆಗಿದ್ದರೂ, ಅದು ಕಾನೂನಿನ ಕ್ರಮಗಳಿಂದ ತಪ್ಪಿಸಿಕೊಂಡು ಬರುತ್ತಲೇ ಇದೆ.

ಹಿಂದೂತ್ವವಾದಿ ಭಯೋತ್ಪಾದನೆಯು ಬಟ್ಟಂಬಯಲಾದಾಗ, ಅದರ ಸಾರಥ್ಯ ವಹಿಸಿದ 'ದೇಶಪ್ರೇಮಿ'ಗಳಿಗೂ ತನಗೂ ಸಂಬಂಧವಿಲ್ಲ ಎಂದು ಆರೆಸ್ಸೆಸ್, ಬಿಜೆಪಿಗಳು ಕೈತೊಳೆದುಕೊಳ್ಳುತ್ತಾ ಬಂದವು. ಇದು ಅವರ ಯೋಜಿತ ಕಾರ್ಯತಂತ್ರವೇ ಆಗಿತ್ತು. ಬಾಂಬ್‌ಸ್ಫೋಟದಂತಹ ದುಷ್ಕೃತ್ಯ ಎಸಗಲು ತಾವು ತಯಾರು ಮಾಡಿದ 'ರಾಷ್ಟ್ರೀಯವಾದಿ' ಕಾರ್ಯಕರ್ತರನ್ನು ಹೊಸ ಹಿಂದೂತ್ವವಾದಿ ಸಂಘಟನೆಗಳಲ್ಲಿ ತೂರಿಸಿ ಕಾರ್ಯಾಚರಣೆ ನಡೆಸುವುದು ಆರೆಸ್ಸೆಸ್ ಲಾಗಾಯ್ತಿನಿಂದ ನಡೆಸಿಕೊಂಡು ಬಂದಿರುವ ಸಂಚು. ಪ್ರಜ್ಞಾ ಠಾಕೂರ್, ಲೆಫ್ಟಿನೆಂಟ್ ಕರ್ನಲ್, ಶ್ರೀಕಾಂತ್ ಪುರೋಹಿತ್‌ಗಳು ಸಿಕ್ಕಿಬಿದ್ದಾಗ "ಅಲ್ಲ, ಅಲ್ಲ, ಅವರು ನಮ್ಮವರಲ್ಲ, ಅವರು 'ಅಭಿನವ್ ಭಾರತ್'ದವರು... ತಪ್ಪು ಯಾರೇ ಮಾಡಿರಲಿ, ಅವರಿಗೆ ಶಿಕ್ಷೆಯಾಗಲಿ. ನಾವು ತನಿಖೆಗೆ ಸಹಕರಿಸುತ್ತೇವೆ" ಎಂದೆಲ್ಲಾ ಬೊಗಳೆ ಬಿಡುತ್ತ ಬಂದ ಆರೆಸ್ಸೆಸ್ ಎಂಬ ಮಿಲಿಟೆಂಟ್ ಸಂಸ್ಥೆಗೀಗ ಕುತ್ತಿಗೆಗೆ ಬಂದಿದೆ.

ಕಾರಣವಿಷ್ಟೇ: 'ಅಜ್ಮೇರ್ ದರ್ಗಾ ಸ್ಫೋಟ'ದ ಹಿಂದಿನ ಮಾರ್ಗದರ್ಶಕ ಇಂದ್ರೇಶ್‌ಕುಮಾರ್" ಎಂದು ರಾಜಸ್ತಾನದ ಭಯೋತ್ಪಾದನಾ ನಿಗ್ರಹ ದಳವು ಆರೋಪಪಟ್ಟಿಯಲ್ಲಿ ದಾಖಲಿಸಿದೆ. ಇಂದ್ರೇಶ್‌ಕುಮಾರ್ ಆರೆಸ್ಸೆಸ್ ಮನುಷ್ಯ. ಈಗಲೂ ಚಡ್ಡಿಗಳು "ಅಲ್ಲ, ಅಲ್ಲ.. ಅಂವಾ ನಮ್ಮವನಲ್ಲ" ಎನ್ನುವಂತಿಲ್ಲ. ಇದೇ ಪ್ರಕರಣದ ಆರೋಪಿಗಳಾಗಿರುವ ದೇವೇಂದ್ರ ಗುಪ್ತಾ, ಲೋಕೇಶ್ ಶರ್ಮಾರ ಕುರಿತಂತೆ 'ಅವರು ನಮ್ಮವರಲ್ಲ' ಎಂದು ಕೈತೊಳೆದುಕೊಂಡಿದ್ದ ಆರೆಸ್ಸೆಸ್ ಈಗ ಇಂದ್ರೇಶ್‌ಕುಮಾರನ ಪರವಾಗಿ ಮಾತನಾಡುತ್ತಿದೆ. ಪಾಪ, ಆರೆಸ್ಸೆಸ್‌ನ ಕೆಳಮಟ್ಟದ ಲೀಡರ್‌ಗಳಾದ ದೇವೇಂದ್ರ ಗುಪ್ತಾ, ಲೋಕೇಶ್ ಕುಮಾರ್‌ಗಳನ್ನು 'ಅನಾಥರನ್ನಾಗಿ' ಮಾಡಿದ ಆರೆಸ್ಸೆಸ್ ಇಂದ್ರೇಶ್‌ಕುಮಾರ್ ವಿಷಯದಲ್ಲಿ ಮಾತ್ರ ಡಿಫೆನ್ಸ್‌ಗೆ ನಿಂತಿದೆ. ಈಗದು 'ಅಲ್ಲ, ಅಲ್ಲ' ಎಂದರೂ ಕೇಳುವವರಿಲ್ಲ. ಇಂದ್ರೇಶ್‌ಕುಮಾರ್ ಆರೆಸ್ಸೆಸ್‌ನ ಸಾಧಾರಣ ಕಾರ್ಯಕರ್ತನಲ್ಲ, ಆತ ಆರೆಸ್ಸೆಸ್‌ನ ಕೇಂದ್ರ ಕಾರ್ಯಕಾರಿಣಿ ಸಮಿತಿಯ ಸದಸ್ಯ! ಆರೆಸ್ಸೆಸ್‌ನ ಪ್ರಮುಖ ಡಜನ್ ಲೀಡರ್‌ಗಳಲ್ಲಿ ಒಬ್ಬ...

ಕಳೆದವಾರ ರಾಜಸ್ತಾನದ ಎಟಿಎಸ್ ಆರೋಪಪಟ್ಟಿಯಲ್ಲಿ ಇಂದ್ರೇಶ್‌ಕುಮಾರನ ಹೆಸರು ಪ್ರಸ್ತಾಪಿಸಿದಾಗ ಸುಮ್ಮನಿದ್ದ ಆರೆಸ್ಸೆಸ್ ಈಗ ಏಕಾಏಕಿ ಆತನ ರಕ್ಷಣೆಗೆ ನಿಂತಿದೆ. 'ಇದು ರಾಷ್ಟ್ರೀಯವಾದಿಗಳು ಮತ್ತು ದೇಶಭಕ್ತರ ವಿರುದ್ಧ ನಡೆಸುತ್ತಿರುವ ರಾಜಕೀಯ ಸಂಚು' ಎಂದು ರಾಜಕೀಯ ಬಣ್ಣ ಬಳಿಯಲು ಯತ್ನಿಸುತ್ತಿದೆ. ಅದಕ್ಕೆ ಒಮ್ಮೆಲೇ ಭಯ ಹುಟ್ಟಿದ್ದಕ್ಕೆ ಕಾರಣವೇನೆಂದರೆ, ಇಂದ್ರೇಶ್‌ಕುಮಾರ್ ಕೈವಾಡದ ಬಗ್ಗೆ ಪ್ರಬಲ ಸಾಕ್ಷ್ಯಗಳು ದೊರೆತಿದ್ದು, ರಾಜಸ್ತಾನದ ಎಟಿಎಸ್ ಮತ್ತೊಂದು ಆರೋಪಪಟ್ಟಿ ಸಲ್ಲಿಸುವ ತಯಾರಿಯಲ್ಲಿದೆ.


ಇಂದ್ರೇಶ್‌ಕುಮಾರ್

2007ರ ಅಕ್ಟೋಬರ್‌ನಲ್ಲಿ ಪ್ರಸಿದ್ಧ ಅಜ್ಮೇರ್ ದರ್ಗಾದ ಮೇಲೆ ನಡೆಸಿದ ಬಾಬ್ ಸ್ಫೋಟದಲ್ಲಿ ರಂಜಾನ್ ಉಪವಾಸದಲ್ಲಿದ್ದ ಮೂವರು ಬಲಿಯಾಗಿ ಇತರ 17 ಮಂದಿ ಮುಸ್ಲಿಮರು ಗಾಯಗೊಂಡಿದ್ದರು. ಮಹಾರಾಷ್ಟ್ರ, ರಾಜಸ್ತಾನ ಗಳ ಭಯೋತ್ಪಾದನಾ ನಿಗ್ರಹದಳಗಳು ನಡೆಸಿದ ತನಿಖೆಯಲ್ಲಿ ದೇವೇಂದ್ರ ಗುಪ್ತಾ, ಲೋಕೇಶ್ ಶರ್ಮಾ, ಸುನೀಲ್ ಜೋಷಿ, ರಾಮ್‌ಜಿ ಕಲ್ಸಂಗ್ರೆ ಎಂಬ ಆರೆಸ್ಸೆಸ್ ಕಾರ್ಯಕರ್ತರ ಕೈವಾಡ ಬಯಲಾಗಿತ್ತು. ಇವರೆಲ್ಲರಿಗೆ ಇಂತಹ ದುಷ್ಕೃತ್ಯ ಮಾಡಲು ಮಾರ್ಗದರ್ಶನ ನೀಡಿದವನು ಆರೆಸ್ಸೆಸ್ ವರಿಷ್ಠ ರಾಜಸ್ತಾನದ ಇಂದ್ರೇಶ್ ಕುಮಾರ್ ಎನ್ನುವುದಕ್ಕೆ ಬಲವಾದ ಸಾಕ್ಷ್ಯಗಳು ಲಭ್ಯವಾಗಿವೆ.

2005 ಅಕ್ಟೋಬರ್ 31ರಂದು ಜೈಪುರದ ಗುಜರಾತಿ ಅತಿಥಿಗೃಹದಲ್ಲಿ ನಡೆದ ರಹಸ್ಯ ಸಭೆಯಲ್ಲಿ ಸ್ಫೋಟದ ಆರೋಪಿಗಳನ್ನುದ್ದೇಶಿಸಿ ಈ ಇಂದ್ರೇಶ್ ಕುಮಾರ್ ಭಾಷಣ ಮಾಡಿದ್ದ. ಯಾರ್‍ಯಾರು? ಯಾವ್ಯಾವ ಕೆಲಸ ಮಾಡಬೇಕೆಂದು ಈತನೇ ಗೈಡೆನ್ಸ್ ಮಾಡಿದ್ದ. ಅಜ್ಮೇರ್ ದರ್ಗಾದಲ್ಲಿ ಬಾಂಬ್ ಸ್ಫೋಟಿಸುವ ಪ್ರಮುಖ ಹೊಣೆಯನ್ನು ಸುನೀಲ್ ಜೋಷಿಗೆ, ಸ್ಫೋಟಕ ವಸ್ತುಗಳ ಸರಬರಾಜು ಕೆಲಸವನ್ನು ಲೋಕೇಶ್ ಶರ್ಮಾ, ದೇವೇಂದ್ರ ಗುಪ್ತಾ ರಾಮ್‌ಜಿ ಕಲ್ಸಂಗ್ರೆ ಎನ್ನುವವರಿಗೆ ವಹಿಸಿದ್ದ. 2007ರಲ್ಲಿ ಸ್ಫೋಟ ನಡೆದು ಮೂವರ ಬಲಿ ತೆಗೆದುಕೊಂಡಿತು. ಸ್ಫೋಟದ ಪ್ರಮುಖ ರೂವಾರಿ ಸುನೀಲ್ ಜೋಷಿ 2008ರಲ್ಲಿ ನಿಗೂಢವಾಗಿ ಕೊಲ್ಲಲ್ಪಟ್ಟ. 2005ರಲ್ಲಿ ಇಂದ್ರೇಶ್‌ಕುಮಾರ್ ಜೈಪುರದ ಗುಜರಾತಿ ಅತಿಥಿಗೃಹದಲ್ಲಿ ಈ ಬಗೆಯ ಸ್ಫೋಟಗಳ ನೀಲನಕ್ಷೆ ತಯಾರಿಸಲು ನಡೆಸಿದ ಸಭೆಯಲ್ಲಿ ಈಗ ಜೈಲಲ್ಲಿರುವ ಮಾಲೆಗಾಂವ್ ಸ್ಫೋಟದ ಆರೋಪಿ ಸಾಧ್ವಿ ಪ್ರಜ್ಞಾ ಠಾಕೂರಳೂ ಇದ್ದಳು. ಹೀಗೆ ಒಂದು ವ್ಯವಸ್ಥಿತ, ಸಂಘಟಿತ ಜಾಲವನ್ನೇ ಹೆಣೆದಿದ್ದ ಆರೆಸ್ಸೆಸ್ 'ಮೈಂಡ್', ಮೆಕ್ಕಾ ಮಸೀದಿ ಸ್ಫೋಟ ಮತ್ತು ಸಂಜೋತಾ ರೈಲುಸ್ಫೋಟಗಳನ್ನೂ 'ಯಶಸ್ವಿ'ಯಾಗಿ ನಡೆಸಿತ್ತು. ಈ ಎಲ್ಲ ಸ್ಫೋಟಗಳಲ್ಲಿ ನೂರಕ್ಕೂ ಹೆಚ್ಚು ಅಲ್ಪಸಂಖ್ಯಾತರು ಬಲಿಯಾಗಿದ್ದರು. ಹಿಂದೂ ಭಯೋತ್ಪಾದಕರ ಈ ವ್ಯವಸ್ಥಿತ ಜಾಲವನ್ನು ಬಯಲಿಗೆಳೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ದಿಟ್ಟ, ಪ್ರಾಮಾಣಿಕ, ಜಾತ್ಯತೀತ ಪೊಲೀಸ್ ಅಧಿಕಾರಿ ಹೇಮಂತ್ ಕರ್ಕರೆ ಯವರು ಮುಂಬೈ ದಾಳಿಯ ವೇಳೆ ಹತ್ಯೆಯಾದರು ಮತ್ತು ಈ ಹತ್ಯೆ ಹಿಂದೆ 'ದೇಶಿ' ಕೈಗಳ ಕೈವಾಡ ಇರುವ ಶಂಕೆಗಳಿವೆ. ಇವತ್ತು ಕರ್ಕರೆ ಅವರ ಕೆಲಸ ಮುಂದುವರೆಸಿರುವ ರಾಜಸ್ತಾನದ ಎಟಿಎಸ್ ಸಂಘ ಪರಿವಾರದ ಬುಡಕ್ಕೆ ಕೈಹಾಕಿದೆ.

ಆದರೆ ತನ್ನೆಲ್ಲ ಶಕ್ತಿ ಬಳಸಿ, ಆಡಳಿತ ಯಂತ್ರದಲ್ಲಿ ಭದ್ರವಾಗಿ ನೆಲೆಯೂರಿರುವ ತನ್ನ ಅನುಯಾಯಿಗಳನ್ನು ಉಪಯೋಗಿಸಿಕೊಂಡು ಈ ತನಿಖೆಗೆ ಆರೆಸ್ಸೆಸ್ ಅಡ್ಡಿ ಮಾಡುವ ಎಲ್ಲ ಸಾಧ್ಯತೆಗಳಿವೆ. ಹಿಂದೂತ್ವವಾದಿ ಭಯೋತ್ಪಾದನೆಯ ಬಗ್ಗೆ ಆಗಾಗ ಕೊಂಚ ಮೃದು ಧೋರಣೆ ತಳೆಯುತ್ತ ಬಂದಿರುವ ಕಾಂಗ್ರೆಸ್ ಈಗಲಾದರೂ ತಟಸ್ಥವಾಗಿ ಉಳಿದರೆ, ಆರೆಸ್ಸೆಸ್ ವಿಷಜಂತುಗಳು ಜೈಲು ಪಾಲಾಗಲಿವೆ. ದೇಶದೊಳಗೆ ದೇಶಭಕ್ತರ ವೇಷದಲ್ಲಿ ನಡೆಸುವ ರಾಷ್ಟ್ರದ್ರೋಹಿ ವಿಚ್ಛಿದ್ರಕಾರಿ ಕೃತ್ಯಗಳಿಗೆ ಕಡಿವಾಣ ಬೀಳಲಿದೆ...

• ಪಿ.ಕೆ.ಮಲ್ಲನಗೌಡರ್

ಆರೆಸ್ಸೆಸ್‌ನ ಹುಟ್ಟುಗುಣ ಭಯೋತ್ಪಾದನೆ

ಇತ್ತೀಚೆಗೆ 2005ರ ನಂತರ ನಡೆದ ... ಬಾಂಬ್ ಸ್ಫೋಟ ಪ್ರಕರಣಗಳಲ್ಲಿ ಆರೆಸ್ಸೆಸ್ ಕೈವಾ... ಬಲವಾದ ಆರೋಪಗಳು ಕೇಳಿಬಂದಿವೆ. ಆರೆಸ್ಸೆಸ್‌ನ ಭಯೋತ್ಪಾದನೆ ಹೊಸದೇನಲ್ಲ. ಸ್ವಾತಂತ್ರ... ಕಾಲದಿಂದಲೂ, ಅದು ಹುಟ್ಟಿದಾಗಿನಿಂದಲೂ ... ನೆಚ್ಚುತ್ತಾ ಬಂದಿರುವುದು ಇಂತಹ ಕೃತ್ಯಗಳನ್ನೆ...


ಬಾಂಬ್ ತಯಾರಿಸುವುದು, ಸ್ಫೋಟ ನಡೆ... ಆರೆಸ್ಸೆಸ್ ಮತ್ತು ಅಂಗಸಂಸ್ಥೆಗಳ ಕಾರ್ಯಾ... ಭಾಗವೇ ಆಗಿದೆ. ಉದಾಹರಣೆಗೆ, 1947ರಲ್ಲಿ ... ಸ್ವಯಂಸೇವಕನಾಗಿದ್ದ ಎಲ್.ಕೆ. ಅಢ್ವಾನಿ... ಕರಾಚಿಯಿಂದ ಓಡಿಹೋಗಿದ್ದರು. ಏಕೆಂದರೆ ಮ... ಅಲಿ ಜಿನ್ನಾರನ್ನು ಹತ್ಯೆ ಮಾಡಲೆಂದು ತಯ... ಬಾಂಬ್‌ಗಳು ಅಢ್ವಾನಿಯ ಮನೆಯಲ್ಲಿ ಸಿಕ್ಕಿದ್ದ... ಅಢ್ವಾನಿಯ ಬಹಳಷ್ಟು ಸಂಗಾತಿಗಳು ಜೈಲು ... ಶಿಕ್ಷೆ ಅನುಭವಿಸಿದರು. ಅಢ್ವಾನಿ ಮಾತ್ರ ... ಪಾರಾಗುವಲ್ಲಿ ಶಕ್ತರಾದರು. ಈಗವರು, ಆ ... ನಂತರ ನಾನು ವಿಮಾನದ ಮೂಲಕ ಗು... ಹೋಗಿದ್ದೆ ಎನ್ನುತ್ತಾರೆ. ಆದರೆ ಆತ್ಮಾರಾಮ್ ಎ... ಬರೆದ ಅಢ್ವಾನಿಯವರ ಮೊದಲ ಜೀವನ ಚರಿ... ಅಢ್ವಾನಿ ಕರಾಚಿಯಿಂದ ಗುಜರಾತ್‌ಗೆ ದೋ... ಪ್ರಯಾಣಿಸಿದರು ಮತ್ತು ಅಲ್ಲಿಂದ ರಾಜಸ್ತಾನ್ ... ಭಾರತದ ಇತರ ಪ್ರದೇಶಗಳಿಗೆ ಹೋದರು ... ದಾಖಲಾಗಿದೆ!

ಬರೀ ಬಾಂಬುಗಳ ರೂಪದಲ್ಲಷ್ಟೇ ... ಹಲವಾರು ಬಗೆಯಲ್ಲಿ ಆರೆಸ್ಸೆಸ್ ಭಯೋತ್ಪಾ... ನಡೆಸುತ್ತ ಬಂದಿದೆ. ಗಾಂಧಿಹತ್ಯೆ, ರಾಮಮ... ಹೆಸರಲ್ಲಿ ನಡೆಸಿದ ನರಮೇಧಗಳೂ ಭಯೋ... ಕೃತ್ಯಗಳೇ ಅಲ್ಲವೇ?

ಇವತ್ತು ಕಾಶ್ಮೀರಿ ಜನರ ಒಡಲಾಳದ ಧ್ವ... ಗಟ್ಟಿಯಾಗಿ ಹೇಳಿದ್ದಕ್ಕೆ ಅರುಂಧತಿ ರಾಯ್‌ರನ... ದ್ರೋಹಿ ಎಂದು ಹೀಗಳೆಯುವ ಸಂಘಪರಿ... ರಾಷ್ಟ್ರದ್ರೋಹಿಗಳ ಸಮಾಜ ವಿಭಜನೆಯ ... ನಿಲ್ಲಬೇಕೆಂದರೆ, ಅಜ್ಮೀರ್‌ದ ದುರ್ಗಾ, ಮೆಕ್ಕಾ ... ಮಾಲೆಗಾಂವ್ ಸ್ಫೋಟ ಹಾಗೂ ಇತರ ... ಕೃತ್ಯಗಳ ಹಿಂದಿರುವ ಹಿಂದೂತ್ವವಾದಿ ಭಯೋತ... ತಕ್ಕ ಶಿಕ್ಷೆ ಆಗಲೇಬೇಕು.

ರಾಕ್ಷಸ ಅಮೆರಿಕಾವನ್ನು ಬೆತ್ತಲು ಮಾಡಿದ ಪಟಾಣಿ ವಿಕೀಲೀಕ್ಸ್

ದೊಡ್ಡಣ್ಣ ಅಮೆರಿಕಾದ ಕ್ರೌರ್ಯ ಮತ್ತೆ ಬಯಲಾಗಿದೆ. 'ಭಯೋತ್ಪಾದನೆಯ ವಿರುದ್ಧ ಸಮರ' ಎಂಬ ಹೆಸರಿನಲ್ಲಿ ಅದು ಇರಾಕ್‌ನಲ್ಲಿ ನಡೆಸುತ್ತಿರುವ ಪೈಶಾಚಿಕ ಹಿಂಸಾಚಾರದ 4,00,000 ಲಕ್ಷ ಡಾಕ್ಯುಮೆಂಟ್ಸ್‌ಗಳನ್ನು ಬಯಲುಗೊಳಿಸಲಾಗಿದೆ. ಈ ಸಾಹಸಕ್ಕೆ ಕೈಹಾಕಿದ್ದು ಮುಖ್ಯವಾಹಿನಿಯ ಮಾಧ್ಯಮಗಳು ಅಲ್ಲವೇ ಅಲ್ಲ. ಅದು ಪ್ರಿಂಟ್ ಮೀಡಿಯಾನೂ ಅಲ್ಲ, ವಿಷುವಲ್ ಮೀಡಿಯಾನೂ ಅಲ್ಲ, ವಿಕೀಲೀಕ್ಸ್ ಎಂಬ ಇಂಟರ್‌ನೆಟ್ ಮೀಡಿಯಾ.




ಹೀಗೆ ರಿಸ್ಕ್ ತೆಗೆದುಕೊಂಡು ಸತ್ಯವನ್ನು ಬಯಲುಗೊಳಿಸುತ್ತಿರುವ ವಿಕೀಲೀಕ್ಸ್‌ನ ಸಂಸ್ಥಾಪಕ ಜೂಲಿಯನ್ ಅಸ್ಸಾಂಜೆ ಇವತ್ತು ಪ್ರಾಣಭಯದಲ್ಲಿ ಬದುಕಬೇಕಾಗಿದೆ. ನೂರಾರು ಕಾನೂನು ಕ್ರಮಗಳನ್ನು ಎದುರಿಸಬೇಕಾಗಿದೆ.

ಜೂಲಿಯನ್ ಅಸ್ಸಾಂಜೆ ಈ ವರ್ಷದ ಜುಲೈನಿಂದ ಅಮೆರಿಕಾವು ಅಫಘಾನಿಸ್ತಾನ್, ಇರಾಕ್‌ಗಳಲ್ಲಿ ನಡೆಸುತ್ತಿರುವ ದಬ್ಬಾಳಿಕೆ, ರಕ್ತಪಾತಗಳನ್ನು ಲಿಖಿತ ದಾಖಲೆ, ವಿಡಿಯೋಗಳ ಮೂಲಕ ಬಹಿರಂಗಗೊಳಿಸುತ್ತಾ ಅಮೆರಿಕಾವನ್ನು ಬೆತ್ತಲೆ ಮಾಡುತ್ತಾ ಬಂದಿದ್ದಾರೆ.

ಅಮೆರಿಕಾದ ರಕ್ಷಣಾ ವ್ಯವಸ್ಥೆಯನ್ನು ಭೇದಿಸುವುದು ಸುಲಭದ ಮಾತಲ್ಲ. ಆದರೆ ಮೂಲತಃ ಕಂಪ್ಯೂಟರ್ ಹ್ಯಾಕರ್ ಆಗಿರುವ ಆಸ್ಟ್ರೇಲಿಯಾದ ಅಸ್ಸಾಂಜೆ ಮತ್ತು ಆತನಿಗೆ ನೆರವು ನೀಡುತ್ತಿರುವ ಸಾವಿರಾರು ಸ್ವಯಂಸೇವಕರು ವಿಶ್ವದ ನಂಬರ್ ಒನ್ ದೇಶದ ಥರ್ಡ್ ಗ್ರೇಡ್ ಕೆಲಸಗಳನ್ನು, ಅವುಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಲೀಕ್ ಮಾಡುತ್ತಿದ್ದಾರೆ. ತನ್ನ ವೈಯಕ್ತಿಕ ಲಾಭಕ್ಕೋಸ್ಕರ 'War on Terror' ಹೆಸರಲ್ಲಿ ಬೇರೆ ದೇಶಗಳ ಮೇಲೆ ಅತಿಕ್ರಮಣ ನಡೆಸುತ್ತಿರುವ ಸಾಮ್ರಾಜ್ಯಶಾಹಿ ಅಮೆರಿಕಾ ಸರ್ಕಾರ ಇದರಿಂದೇನೂ ಪಾಠ ಕಲಿತಂತಿಲ್ಲ. ಬದಲಾಗಿ ತನ್ನ ಮುಖವಾಡ ಕಳಚಿದವರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲು ತರಾವರಿ ಕಿರುಕುಳಗಳನ್ನು ಕೊಡುತ್ತಿದೆ.

ಅಮೆರಿಕಾ ಸೈನ್ಯವು ಇರಾಕ್ ಸೈನಿಕರನ್ನು ಬಳಸಿಕೊಂಡು ಸಾವಿರಾರು ಮುಗ್ಧ ಇರಾಕಿ ನಾಗರಿಕರನ್ನು ಕೊಲ್ಲಿಸಿದ್ದು, ಜೈಲಲ್ಲಿರುವ ಕೈದಿಗಳಿಗೆ ಚಿತ್ರಹಿಂಸೆ ಕೊಡಿಸಿದ್ದೆಲ್ಲವನ್ನೂ ಅಸ್ಸಾಂಜೆ ದಾಖಲೆ ಸಮೇತ ಬಯಲು ಮಾಡಿದ್ದಾರೆ. ಸದ್ದಾಂ ಹುಸೇನರನ್ನು ಕೊಂದು, ಇರಾಕ್‌ನಲ್ಲಿ ತನ್ನ ಸೈನ್ಯದ ಮೂಲಕ ಅಲ್ಲಿನ ಕೈಗೊಂಬೆ ಸರ್ಕಾರವನ್ನು ನಿಯಂತ್ರಿಸುತ್ತಿರುವ ಅಮೆರಿಕಾ 2003ರಿಂದ ಅಲ್ಲಿನ ನಾಗರಿಕ ಜೀವನವನ್ನು ದುಸ್ತರಗೊಳಿಸಿದೆ. ಇರಾಕಿ ಸೈನ್ಯ ಅಲ್ಲಿನ ಮುಗ್ಧರ ಮೇಲೆ ದೌರ್ಜನ್ಯ ನಡೆಸಲು ಕುಮ್ಮಕ್ಕು ನೀಡುತ್ತಿರುವ ಅಮೆರಿಕಾ ಸೈನ್ಯ ಮಾನವಹಕ್ಕುಗಳಿಗೆ ಎಳ್ಳುನೀರು ಬಿಟ್ಟಿದೆ.

ಈಗ ಜೂಲಿಯನ್ ಅಸ್ಸಾಂಜೆ ಮತ್ತು ತಂಡ ಲೀಕ್ ಮಾಡಿರುವ ದಾಖಲೆಗಳು 2004ರಿಂದ 2010ರ ಆರಂಭದ ಅವಧಿಗೆ ಸಂಬಂಧಿಸಿದ್ದಾಗಿವೆ. ಈ ದಾಖಲೆಗಳ ಪ್ರಕಾರ ಈ ಅವಧಿಯಲ್ಲಿ ಅಲ್ಲಿ 2,85,000 ಸಾವುನೋವು ಸಂಭವಿಸಿವೆ! ಪ್ರತಿ ಪ್ರಕರಣ ಎಲ್ಲಿ ನಡೆಯಿತು, ಅದರಲ್ಲಿ ಪಾಲ್ಗೊಂಡವರ್‍ಯಾರು ಎಂದು ಅಮೆರಿಕಾ ಮಿಲಿಟರಿಯ ಆಂತರಿಕ ವರದಿಗಾರಿಕೆ ಟೀಮು ತಯಾರಿಸಿದ್ದ ದಾಖಲೆಗಳೆಲ್ಲವನ್ನೂ ವಿಕೀಲೀಕ್ಸ್ ಲೀಕ್ ಮಾಡುವ ಮೂಲಕ, ಲೂಟಿಕೋರ ಅಮೆರಿಕಾದ ಜೀವವಿರೋಧಿ ಅಟ್ಟಹಾಸವನ್ನು ಬೆಳಕಿಗೆ ತಂದಿದೆ.



ಚೆಕ್‌ಪಾಯಿಂಟ್ ಕಿಲ್ಲಿಂಗ್ಸ್

ಅಮೆರಿಕಾದ ಕ್ರೌರ್ಯದ ನಿದರ್ಶನಕ್ಕೆ ಚೆಕ್‌ಪಾಯಿಂಟ್ ಕಿಲ್ಲಿಂಗ್ಸ್ ಪ್ರಕರಣವೊಂದೇ ಸಾಕು. 30 ಮಕ್ಕಳು ಸೇರಿದಂತೆ 600 ಇರಾಕಿ ನಾಗರಿಕರನ್ನು ಚೆಕ್‌ಪಾಯಿಂಟ್‌ಗಳಲ್ಲಿ ತಪಾಸಣೆಯ ನೆಪದಲ್ಲಿ ಕೊಲ್ಲಲಾಗಿದೆ. ನಾಗರಿಕರಿಗೆ ಬಂದುಕೋರರು ಎಂಬ ಹಣೆಪಟ್ಟಿ ಕಟ್ಟಿ ಈ ಬರ್ಬರ ಕೃತ್ಯ ನಡೆಸಲಾಗಿದೆ.

ಬಂದುಕೋರರು ಉಗ್ರರು ಎಂದು ಬಂಧಿಸಲ್ಪಟ್ಟ ನಾಗರಿಕರಿಗೆ ಇರಾಕ್ ಮತ್ತು ಅಮೆರಿಕಾ ಸೈನಿಕರು ಸೇರಿ ನೀಡಿದ ಚಿತ್ರಹಿಂಸೆಯ 284 ಪ್ರಕರಣಗಳು ಸಿಕ್ಕಿವೆ. ಮುಗ್ಧ ನಾಗರಿಕರಿಗೆ ಹಿಂಸಿಸಿದ ಸಾವಿರಾರು ಪ್ರಕರಣಗಳು ಜರುಗಿವೆ. ಆದರೆ ಈಗ ಮುಖ್ಯವಾಹಿನಿ ಮಾಧ್ಯಮಗಳನ್ನು ಬಳಸಿಕೊಳ್ಳುತ್ತಿರುವ ಅಮೆರಿಕಾದ ರಕ್ಷಣಾ ವ್ಯವಸ್ಥೆಯಾದ ಪೆಂಟಗಾನ್ ಇರಾಕಿನಲ್ಲಿ ನಡೆದಿರುವ ಎಲ್ಲಾ ದೌರ್ಜನ್ಯಗಳಿಗೂ ಅಲ್ಲಿನ ಸರ್ಕಾರವೇ ಹೊಣೆ ಎಂದು ಕೈತೊಳೆದುಕೊಳ್ಳಲು ಪರದಾಡುತ್ತಿದೆ.

ಡಾಕ್ಯುಮೆಂಟ್ಸ್ ಹೇಗೆ ಸಿಕ್ಕವು?

ಈಗ ಜೂಲಿಯನ್ ಅಸ್ಸಾಂಜೆ ಲೀಕ್ ಮಾಡಿದ ದಾಖಲೆಗಳು ಅಮೆರಿಕಾ ಮಿಲಿಟರಿ ದಾಖಲಿಸಿದ ಪ್ರಕರಣಗಳ ಕುರಿತಾಗೇ ಇವೆ. ಮಿಲಿಟರಿ ಭಾಷೆಯಲ್ಲಿ ಇವನ್ನು 'Significant Action Reports' ಎನ್ನಲಾಗುತ್ತದೆ. ಅಮೆರಿಕಾ ಮತ್ತು ಇರಾಕ್ ಸೈನ್ಯ ಎಷ್ಟು ಜನರನ್ನು ಕೊಂದವು, ಎಲ್ಲಿ ಬಾಂಬ್ ಹಾಕಿದವು, ಸೈನ್ಯದ ಯಾವ ಅಧಿಕಾರಿ ಎಲ್ಲಿ ಮೀಟಿಂಗ್ ಮಾಡಿದರು ಎಂಬೆಲ್ಲ ವಿವರಗಳು ಈ ದಾಖಲೆಗಳಲ್ಲಿವೆ. ಹೀಗೆ ಅಮೆರಿಕಾ ಸೈನ್ಯದ ಬಳಿಯಿರುವ ಈ ರಹಸ್ಯ ಮಾಹಿತಿ ಹೇಗೆ ಬಯಲಿಗೆ ಬಂದಿರಬಹುದು? ಪೆಂಟಗಾನ್‌ನಲ್ಲಿರುವ ಅಥವಾ ಅಮೆರಿಕಾ ಸೈನ್ಯದಲ್ಲೇ ಇರುವ ಅಧಿಕಾರಿಯೊಬ್ಬ ಈ ಕೆಲಸ ಮಾಡಿರುವ ಸಾಧ್ಯತೆಗಳೇ ದಟ್ಟವಾಗಿವೆ. ವಿಕೀಲೀಕ್ಸ್ ಇಂತಹ ಅನಾಮ... ವ್ಯಕ್ತಿಗಳ ಮೂಲಕವೇ ರಹಸ್ಯ ದಾಖಲೆಗಳನ್ನು ಪಡೆ... ಬಂದಿದೆ. ಅಂದರೆ ಪೆಂಟಗಾನ್ ಮತ್ತು ಅ... ಸೈನ್ಯದಲ್ಲಿರುವ ಕೆಲವು ಸಜ್ಜನರಿಗೆ ಅಮೆರಿಕಾದ ... ಚಾರದ ಬಗ್ಗೆ ಖಂಡಿತ ಸಿಟ್ಟಿದೆ. ಹಿಂದೆ ಇಂ... ಅಫಘಾನಿಸ್ತಾನದಲ್ಲಿ ಅಮೆರಿಕಾ ಸೈನ್ಯ ನ... ಕೊಲೆಗಳನ್ನು ಬಯಲುಗೊಳಿಸಿದ್ದರು.

ಮುಖ್ಯವಾಹಿನಿ ಮಾಧ್ಯಮಗಳು ಅಮೆರಿಕಾ... ಇರುವಾಗ, ವಿಕೀಲೀಕ್ಸ್ ಎಂಬ ದಿಟ್ಟ ಪುಟ್ಟ... ಇಂತಹ ರಿಸ್ಕೀ ಸಾಹಸಗಳನ್ನು ಮಾಡುತ್ತಿದೆ. ಇದನ್ನು ಸಹಿಸದ ಅಮೆರಿಕಾ ಸಂಸ್ಥಾಪಕ ಜೂಲಿ... ಅಸ್ಸಾಂಜೆ ಸೇರಿದಂತೆ ತಂಡದ ಇತರ ಸದಸ್ಯರ ... ನಾನಾ ಆರೋಪಗಳನ್ನು ಹೊರಿಸಿ ಕೋರ್ಟ್‌ಗೆ ... ತ್ತಿದೆ. ವಿಕೀಲೀಕ್ಸ್ ವೆಬ್‌ಸೈಟ್ ಮುಚ್ಚಿಸಲು ಹರ... ಮಾಡುತ್ತಿದೆ.

ಆದರೆ 'We open the Governm... ಎಂಬ ಘೋಷವಾಕ್ಯದೊಂದಿಗೆ ಕಾರ್ಯಾಚರಣೆ ... ಸಿದ ವಿಕೀಲೀಕ್ಸ್ ಇವತ್ತು ಒಂದು ಪುಟ್ಟದಾದ ... ಪ್ರಭಾವಶಾಲಿಯಾದ ಜನಾಂದೋಲನವಾಗಿ ... ಗೊಂಡಿದೆ. ಜಗತ್ತಿನಾದ್ಯಂತ ಅದಕ್ಕೆ ಸಾವಿರಾರು ... ಸೇವಕರು, ಲಕ್ಷಾಂತರ ಬೆಂಬಲಿಗರು ಇದ್ದಾರೆ.


ವಿಕೀಲೀಕ್ಸ್ ಬಹಿರಂಗಗೊಳಿಸಿದ ದಾಖಲೆ... ನೋಡಿಯೂ ವಿಶ್ವಸಂಸ್ಥೆ ತೆಪ್ಪಗಿದೆ. ಅಮೆರಿಕಾದ... ಯಾಳಾಗಿರುವ ಭಾರತದಂತಹ ದೇಶಗಳು ತುಟಿ... ಬಿಚ್ಚಿಲ್ಲ...

ಈ ನಡುವೆ ಜೂಲಿಯನ್ ಅಸ್ಸಾಂಜೆ... ಮುಗಿಸುವ ಅಥವಾ ನಿಷ್ಕ್ರಿಯಗೊಳಿಸುವ ... ಕುತಂತ್ರಗಳನ್ನು ಅಮೆರಿಕಾ ಮಾಡುತ್ತಿದೆ. ಅದರಲ್ಲಿ ... ಯೂ ಆಗಬಹುದು. ಆದರೆ ವಿಕೀಲೀಕ್ಸ್ ಹಿಂದಿ... ಸಾವಿರಾರು ಕಾರ್ಯಕರ್ತರು, ಲಕ್ಷಾಂತರ ಬೆಂಬಲಿ... ಕಟ್ಟಿಹಾಕಲು ಸಾಧ್ಯವಿಲ್ಲ, ಅಲ್ಲವೇ?

• ವ...

...ಷ್ಟ ಸರ್ಕಾರ ಉಳಿಸಲು ...ಗಾಯತ ಮಠಾಧೀಶರ ಸರ್ಕಸ್

...ರ್ಣಾಟಕದ ಲಿಂಗಾಯತ ಮಠಾಧೀಶರೆಲ್ಲ ಭ್ರಷ್ಟ ಮುಖ್ಯಮಂತ್ರಿ ...ಯೂರಪ್ಪನನ್ನು ಸಾಕ್ಷಾತ್ ಬಸವಣ್ಣ ಎಂದು ನಂಬಿಕೊಂಡಿದ್ದಾರಾ? ...ಅನುಮಾನ ಯಾಕೆಂದರೆ ಇಡೀ ರಾಜ್ಯದ ಜನತೆ 'ಥೂ.. ಥೀ..' ...ಉಗಿಯುತ್ತಿದ್ದರೂ ಸುತ್ತೂರು ಹಾಗೂ ಸಿದ್ಧಗಂಗಾ ಮಠಾಧೀಶರಿಗೆ ...ಯಡ್ಡಿಯೇ ಈಗಲೂ ಫೇವರಿಟ್ ರಾಜಕಾರಣಿ!



...ಮಹದೇವ ಪ್ರಸಾದ್

ಕಳೆದ ತಿಂಗಳು ಸ್ಫೋಟಗೊಂಡ ಬಿಜೆಪಿಯೊಳಗಿನ ಭಿನ್ನಮತ, ಪಕ್ಷೇತರರ ಪಕ್ಷಾಂತರಗಳಿಂದಾಗಿ ಯಡ್ಡಿ ಸರ್ಕಾರ ಮತ್ತೆ ಬಿಕ್ಕಟ್ಟಿಗೆ ಸಿಲುಕಿತಲ್ಲವೆ?

ದಿನಕ್ಕೊಂದು ಹಗರಣ ಸೃಷ್ಟಿಸುತ್ತಿದ್ದ ಈ ಹರಕಲು ಸರ್ಕಾರವನ್ನುಳಿಸಲು ಒಂದು ಕಡೆ ಯಡ್ಡಿ-ರೆಡ್ಡಿಗಳು ಕಳ್ಳತನದ ದುಡ್ಡು ಕೈಲಿಡಿದು ಶಾಸಕರ ಖರೀದಿ ನಡೆಸುತ್ತಿದ್ದರೆ ಮತ್ತೊಂದೆಡೆಯಿಂದ ಕಾರ್ಯಾಚರಣೆಗಿಳಿದವರು ಮಠಾಧೀಶರು.

...ವ ಪುರುಷಾರ್ಥಕ್ಕೆ ಈ 'ಯಡ್ಡಿ ಬಚಾವ್' ಕೆಲಸ ಮಾಡಬೇಕೆಂಬ ... ಈ ಸ್ವಾಮೀಜಿಗಳು ಎಂದೂ ಕೇಳಿಕೊಂಡಂತಿಲ್ಲ. ಹಾಗಾಗದಿದ್ದರೆ ...ಯಡ್ಡಿಯನ್ನು ಕರೆಸಿ "ಆಡಳಿತವನ್ನಾದರೂ ಸರಿಯಾಗಿ ನಡೆಸಿ" ಎಂದು ...ಮಠಾಧೀಶರು ಹೇಳಬಹುದಿತ್ತೇನೊ. ಆದರೆ ರಾತ್ರಿ ಹೊತ್ತು ಹಣ ...ಹಗಲು ಹೊತ್ತಿನಲ್ಲಿ ಪುಗಸಟ್ಟೆ ಆಶೀರ್ವಾದ ನೀಡುವ ಹೊಸ ... ಬೆಳೆಸಿಕೊಂಡಿರುವವರಿಗೆ ಈ ಪ್ರಶ್ನೆ ಕೇಳುವ-ಸಲಹೆ ನೀಡುವ ...ಯಾದರೂ ಎಲ್ಲಿಂದ ಬರಬೇಕು?

...ನಸಭೆಯಲ್ಲಿ ಯಡ್ಡಿ ಮೊದಲನೆ ಸಾರಿ ಹಾಗೂ ಎರಡನೇ ಬಾರಿ ...ತ ಯಾಚಿಸುವ ತಯಾರಿ ನಡೆಸುತ್ತಿದ್ದಾಗ ಸುತ್ತೂರು ಹಾಗೂ ...ಸ್ವಾಮಿಗಳು ಫುಲ್‌ಟೈಂ ರಾಜಕಾರಣಿಗಳಷ್ಟೇ ಬ್ಯುಸಿಯಾಗಿ ಹೋಗಿದ್ದರು.

... ಬಿಜೆಪಿಯ ಬ್ರಾಂಚ್ ಆಫೀಸಿನ ರೀತಿ ಬದಲಾಗಿ ಹೋಗಿರುವ ...ನ ಸುತ್ತೂರು ಮಠದವರಂತೂ ದಳ-ಕಾಂಗ್ರೆಸ್‌ನ ಲಿಂಗಾಯತ ಶಾಸಕರಿಗೆ ...ಷ್ ಕಮಲದ ದೀಕ್ಷೆ ಕೊಡಿಸಲು ಸರ್ಕಸ್ ಮಾಡಿದರು.

...ದಲು ಗುಂಡ್ಲುಪೇಟೆಯ ಕಾಂಗ್ರೆಸ್ ಶಾಸಕ ಎಚ್.ಎಸ್. ಮಹದೇವ ...ನ್ನು ಸಂಪರ್ಕಿಸಿದ ಸುತ್ತೂರು ಸ್ವಾಮೀಜಿ ದುಡ್ಡು, ಸಚಿವಗಿರಿಯ ...ತೋರಿಸಿ ಬಿಜೆಪಿಗೆ ಬಂದುಬಿಡುವಂತೆ ...ದರು. "ನೀವು ಈ ಹಿಂದೆ ಮಂತ್ರಿ ...ದರು. ಈಗ ಕೊಳ್ಳೇಗಾಲದ ನಂಜುಂಡ ...ಮೂ ಬಿಜೆಪಿ ಬಿಟ್ಟಿರುವುದರಿಂದ ಇಡೀ ...ಜನಗರ ಜಿಲ್ಲೆಯಲ್ಲಿ ಒಬ್ಬರೂ ಬಿಜೆಪಿ ...ಲ್ಲ. ನೀವು ಬಿಜೆಪಿಗೆ ಬಂದರೆ ...ಗಿ ಜಿಲ್ಲಾ ಉಸ್ತುವಾರಿ ಸಚಿವರೂ ...ಮು. ನಾನು ಮುಖ್ಯಮಂತ್ರಿಗಳ ಜೊತೆ ...ಗೆ ಏರ್ಪಾಡು ಮಾಡುತ್ತೇನೆ" ಅಂತೆಲ್ಲಾ ...ರಿ ಸ್ವಾಮಿ ಹೇಳಿದರಂತೆ. ಆದರೆ ಈ



... ಬಗ್ಗದ ಪ್ರಸಾದ್ "ಸ್ವಾಮಿಗಳೆ, ಯಡಿಯೂರಪ್ಪ ಒಬ್ಬ ಭ್ರಷ್ಟ ...ಂತ್ರಿ. ಅಂಥವರ ಜೊತೆ ನಾನು ಸೇರಲ್ಲ, ನೀವು ಶಾಂತರಾಗಿ ಇರಿ" ...ಳಿ ಆಫರ್ ನಿರಾಕರಿಸಿಬಿಟ್ಟರು. ಗುಂಡ್ಲುಪೇಟೆ ಕ್ಷೇತ್ರದಲ್ಲಿ ಮಹದೇವ್ ... ಜನ ಬಹಳ ಗೌರವ ನೀಡುತ್ತಾರೆ. ಮೊದಲು ದಳ ನಂತರ ...ಂದ ಸ್ಪರ್ಧಿಸಿ ಗೆದ್ದಿರುವ ಪ್ರಸಾದ್‌ಗೆ ಜನಪರ ಶಾಸಕನೆಂಬ ಹೆಸರಿದೆ. ...ಗಮನಿಸಿಯೇ ಸುತ್ತೂರು ಸ್ವಾಮಿ ಪಕ್ಷಾಂತರ ಬಲೆ ಬೀಸಿದ್ದರು. ...ಟೆಯಲ್ಲಿ ಬಿಜೆಪಿಯಿಂದ ಕಳೆದ ಬಾರಿ ನಿರಂಜನ್ ಸ್ಪರ್ಧಿಸಿ ಸೋತಿದ್ದರು. ... ಸ್ವಾಮಿ ಅದನ್ನು ಲೆಕ್ಕಹಾಕಿ ಮಹದೇವ್ ಪ್ರಸಾದ್ ಹತ್ತಿರ "ನೀವು ...ಜೆಪಿಗೆ ಬಂದರೆ ಮುಂದಿನ ಎಲೆಕ್ಷನ್‌ನಲ್ಲಿ ನಿರಂಜನ್‌ಗೆ ಬದಲಾಗಿ ...ಟಿಕೆಟ್ ಕೊಡಿಸಲು ವ್ಯವಸ್ಥೆ ಮಾಡುತ್ತೇನೆ" ಎಂತಲೂ ಪಕ್ಕಾ ...ಲಿಯ ಆಶ್ವಾಸನೆಯನ್ನು ಕೊಟ್ಟು ಕೊನೆಗೆ 'ನೋ' ಅನಿಸಿಕೊಂಡರು. ...ದ ಮೇಲೂ ಬುದ್ಧಿ ಕಲಿಯದ ಸುತ್ತೂರು ಸ್ವಾಮಿ ಚಾಮರಾಜನಗರದ ... ಶಾಸಕ ಪುಟ್ಟರಂಗ ಸ್ವಾಮಿಗೂ ಫೋನ್ ಮಾಡಿ ಪಕ್ಷಾಂತರದ ...ದುರಿಸಲು ನೋಡಿ ವಿಫಲರಾದರು. ಈ ಶಾಸಕರಿಗೂ "ಜಿಲ್ಲೆಗೊಬ್ಬರೇ ...ವೇ ಮಂತ್ರಿ" ಎಂಬಿತ್ಯಾದಿ ರಾಜಕೀಯ ವಚನವನ್ನು ಹಾಡಿದರಂತೆ.

...ಸಿದ್ಧಗಂಗಾ ಸ್ವಾಮಿಯೂ ಇದೇ ತರದ ಪುಢಾರಿ ಕೆಲಸ ನಡೆಸಿತು. ...ವರ ಕೈಯಳತೆಯಲ್ಲಿದ್ದ ಏಕೈಕ ಲಿಂಗಾಯತ ಶಾಸಕ ಸೊಗಡು ... ತಗಡು ಶಿವಣ್ಣ ಹಾಲಿ ಬಿಜೆಪಿ ಶಾಸಕನೇ ಆಗಿದ್ದಾನೆ. ಉಳಿದಂತೆ ...ರು ಸುತ್ತಮುತ್ತ ಯಾರೂ ಇರಲಿಲ್ಲ. ಇನ್ನು ಉತ್ತರ ಕರ್ನಾಟಕದ ...ತ ಶಾಸಕರಿಗೆ ಸಿದ್ಧಗಂಗಾ ಸ್ವಾಮಿಯ ಜೊತೆ ಸಂಪರ್ಕವೇ ಇರಲಿಲ್ಲ. ... ಈ ಸ್ವಾಮಿ ವಿ. ಸೋಮಣ್ಣನ ಮೂಲಕ ಚಿತ್ರದುರ್ಗದ ಜೆಡಿಎಸ್ ...ಸವರಾಜನ್ ಹಾಗೂ ಉತ್ತರ ಕರ್ನಾಟಕದ ನಾಡಗೌಡರ ಮೇಲೆ ...ಷ್ ಕಮಲ ನಡೆಸಲು ಯತ್ನಿಸಿ ವಿಫಲವಾಯಿತು.

...ಇಬ್ಬರು ಸ್ವಾಮಿಗಳಿಗೆ ಕನಿಷ್ಠ ಆತ್ಮಸಾಕ್ಷಿಯೂ ಇಲ್ಲ ಅನಿಸುತ್ತಿದೆ. ...ರಪ್ಪ ಇಡೀ ರಾಜ್ಯವನ್ನೇ ಲೂಟಿ ಹೊಡೆಯುತ್ತಾ ಆಡಳಿತವನ್ನು ...ತಿಗೆ ದೂಡಿ, ಮಹಾನ್ ಭ್ರಷ್ಟರನ್ನೆಲ್ಲಾ ಜೊತೆಗಿರಿಸಿಕೊಳ್ಳುತ್ತಿರುವಾಗಲೂ ...ಪು ಸರ್ಕಾರವನ್ನು ಉಳಿಸುವ ನಿತ್ಯ ಕಾಯಕದಲ್ಲಿ ಇವರಿಬ್ಬರು ...ದ್ದಾರೆ.


...ಟಕ ಕಂಡ ಮಹಾನ್ ಭ್ರಷ್ಟ ಮುಖ್ಯಮಂತ್ರಿ ಓರ್ವ ಲಿಂಗಾಯತ ...ಕಾರಣಕ್ಕೆ, ಈ ಮಠಾಧೀಶರು ಯಡ್ಡಿ ರಕ್ಷಣೆಗೆ ನಿಲ್ಲುತ್ತಿರುವುದು ...ದಲ್ಲವಾ?

ಕರ್ನಾಟಕದ ಸಾಹಿತಿಗಳೆಲ್ಲ ಸತ್ತು ಮಲಗಿದ್ದಾರಂತಲ್ಲಾ

ಬಿಜೆಪಿಯಲ್ಲಿದ್ದ ಬುದ್ಧಿವಂತರನ್ನೆಲ್ಲಾ ಕುಮಾರಸ್ವಾಮಿ ಹಾರಿಸಿಕೊಂಡು ಹೋಗಿ ಅತಂತ್ರಗೊಳಿಸಿದ ನಂತರ, ಮಾರ್ಗಮಧ್ಯದಿಂದಲೇ ತಪ್ಪಿಸಿಕೊಂಡು ಬಂದ ರೇಣುಕಾಚಾರಿ ಮಂತ್ರಿಗಿರಿ ಕಳೆದುಕೊಳ್ಳದೆ ಆರಾಮವಾಗಿರುವುದನ್ನು ನೋಡಿದ ಜನ "ಈತ ಎಡೂರಪ್ಪನೇ ಕಳಿಸಿಕೊಟ್ಟ ಪಿತೂರಿಗಾರನಿರಬೇಕು" ಎಂದು ಪಿಸುಗುಡುತ್ತಿದ್ದಾರಂತಲ್ಲಾ, ಬಿಜೆಪಿಯ ಬಂಡಾಯ ಶಾಸಕರ ನಡುವೆಯಿದ್ದ ರೇಣುಕಾಚಾರಿ, ಐದೈದು ನಿಮಿಷಕ್ಕೂ ಬಾತ್‌ರೂಮಿಗೆ ಹೋಗಿ ಎಡೂರಪ್ಪನೊಡನೆ ಮಾತನಾಡಿ ಬರುತ್ತಿದ್ದುದನ್ನು ಪತ್ತೆಹಚ್ಚಿದ ಶಾಸಕರು ಆತನಿಗೆ ಹಿಗ್ಗಾಮುಗ್ಗಾ ಚಚ್ಚಿ ಜಾಗ ಬದಲಿಸಿದರಂತಲ್ಲಾ, ಕೂಡಲೇ ಓಡಿಬಂದ ರೇಣುಕಾಚಾರಿ, ತಂದೆ ಸಮಾನರಾದ ಎಡೂರಪ್ಪನನ್ನ ಕೂಡಿಕೊಂಡು, "ನನ್ನ ತಾಯಾಣೆ, ನರ್ಸ್ ಜಯಲಕ್ಷ್ಮಿಯ ಹೊರತು ಇನ್ನಾರಿಗೂ ಅನ್ಯಾಯ ಮಾಡಿಲ್ಲ. ಅದರಲ್ಲೂ ಬಿಜೆಪಿ ನನ್ನ ತಾಯಿ, ಎಡೂರಪ್ಪ ನನ್ನ ತಂದೆ ಸಮಾನ. ಈಶ್ವರಪ್ಪ ಸೋದರ ಮಾವನ ಸಮಾನ" ಎಂದು ಹಲುಬಿದಾಗ ಈಶ್ವರಪ್ಪ ಕಂಸನಂತೆ ನಗಾಡಿದನಂತಲ್ಲಾ, ಥೂತ್ತೇರಿ!


* * * * * *

ಇತ್ತ ಎಚ್.ಡಿ. ಕೋಟೆಯ ಚಿಕ್ಕಣ್ಣನಿಗೆ "ಬರೋಬ್ಬರಿ ಐವತ್ತು ಕೋಟಿ ಕೊಡುತ್ತೇವೆ ಬರುತ್ತೀಯ?" ಎಂದು ಬಿಜೆಪಿ ಪಾತಕಿಗಳು ಕರೆ ಮಾಡಿದ್ದಕ್ಕೆ ಹೆದರಿಕೊಂಡ ಚಿಕ್ಕಣ್ಣ "50 ಕೋಟಿ ತೆಗೆದುಕೊಂಡು ಏನು ಮಾಡಲಿ. ನನ್ನ ಯೋಗ್ಯತೆಗೆ ತಕ್ಕಷ್ಟು ಹಣ ಕೊಟ್ಟಿದ್ದರೆ, ಸಾಲ ಸೋಲ ತೀರಿಸಿಕೊಂಡು, ಉಳಿದ ಹಣದಲ್ಲಿ ಮುಂದಿನ ಯಾಚಕ ಮಾಡಲು ಯೋಚನೆ ತಯಾರಿಸಬಹುದಿತ್ತು, ಆದರೆ 50 ಕೋಟಿ ತೆಗೆದುಕೊಂಡರೆ ಆ ದುಡ್ಡನ್ನೇ ನಿಭಾಯಿಸುವುದೊ ಅಥವಾ ಮಂತ್ರಿಗಿರಿಯನ್ನು ನಿಭಾಯಿಸುವುದೊ?" ಎಂದು ತಲೆ ಕೆಡಿಸಿಕೊಂಡು ರಾತ್ರಿಯೆಲ್ಲಾ ನಿದ್ರೆ ಮಾಡದೆ ಬೆಳಗ್ಗೆ ಎದ್ದು "ಐವತ್ತು ಕೋಟಿ, ಮಂತ್ರಿಗಿರಿ ಯಾವುದೂ ಬೇಡ" ಎಂದು ನಿರಾಳವಾದರಂತಲ್ಲಾ, ಸದರಿ ಸಂಗತಿಯನ್ನು ಸಮೀಪವರ್ತಿಗಳಿಂದ ತಿಳಿದುಕೊಂಡ ಜಿ.ಟಿ. ದೇವೇಗೌಡ "ಅಯ್ಯೋ, ನನಗಾದರೂ ಇಂತಹ ಅವಕಾಶ ಸಿಕ್ಕಿದ್ದರೆ ಎರಡೂ ಆಫರ್‌ಗಳನ್ನು ಒಪ್ಪಿಕೊಂಡು ನಾನು ಮಾಡುವ ಕೆಲಸವೆಲ್ಲಾ ಕ್ಷೇತ್ರದ ಜನರ ಏಳ್ಗೆಗಾಗಿ ಎಂದು ಸಾರಿ ದಕ್ಕಿಸಿಕೊಳ್ಳುತ್ತಿದ್ದೆ. ಇದ್ಯಾವುದೂ ಇಲ್ಲದೆ ಹೌಸಿಂಗ್ ಬೋರ್ಡಿನಲ್ಲಿ ಹಳೆ ಮನೆಯ ಕಾವಲುಗಾರನಾಗಿದ್ದೇನೆ. ಬಿಜೆಪಿ ಗಳನ್ನು ನಂಬಿ ಬೀದಿಗೆ ಬಿದ್ದೆ" ಎಂದು ಅತ್ತನಂತಲ್ಲಾ, ಥೂತ್ತೇರಿ!!



* * * * * *

ತೆಗೆದುಬಿಟ್ಟ ಹಂದಿಮರಿ ಊರೆಲ್ಲಾ ತಿರುಗಿ ಮೇದು, ಮರವೇರಿದ ನಂತರ, ಮಾಲೀಕನ ಬಳಿ ಬರುವಂತೆ, ಬೇಳೂರು ಗೋಪಾಲಕೃಷ್ಣ ಮತ್ತೆ ಬಂಗಾರಪ್ಪನ ದೊಡ್ಡಿಯಲ್ಲಿ ಕಾಣಿಸಿಕೊಂಡನಂತಲ್ಲಾ, ಆವನನ್ನು ಕಂಡಕೂಡಲೇ 'ಬಂ' "ಬಾ, ಒಳ್ಳೆ ಕೆಲಸ ಮಾಡಿದೆ. ನಾನು ಐದಾರು ಅವಧಿಗೆ ಒಂದು ರವುಂಡ್ ಬಂದೆ. ನೀನು ಎರಡೇ ಅವಧಿಗೆ ಒಂದು ರವುಂಡ್ ಬಂದೆ" ಎಂದು ಮೆಚ್ಚುಗೆ ಸೂಚಿಸಿದರಂತಲ್ಲಾ, ಇದರಿಂದ ಪುಲಕಿತನಾದ ಬೇಳೂರು "ಇನ್ನೆಲ್ಲೂ ಹೋಗಲ್ಲ ಸಾರ್" ಎಂದನಂತಲ್ಲ, ಕೂಡಲೇ 'ಬಂ' "ಅಂಗನ್ನಬಾರ್ದು. ಕಾಲ ಹೀಗೇ ಇರಲ್ಲ, ಇದು ರಾಜಕಾರಣ. ತತ್ವ ಸಿದ್ಧಾಂತ ಎಲ್ಲಾ ಪುಸ್ತಕದ ಬದ್ನೆಕಾಯಿ. ಮುಂದೆ ನೀನು ನನ್ನ ಹೆಸರುಳುಸಬೇಕು. ಆ ಹರ್ತಾಳ ತರ ಹಲ್ಕ ಕೆಲಸ ಮಾಡಕ್ಕೋಗಿ ಸಿಗಾಯ್ಕೋಬೇಡ" ಎಂದರಂತಲ್ಲಾ, ಆಗ ಬೇಳೂರು "ನೀವಿಲ್ದೆ ಹೋಗಿದ್ರೆ ಅವನೆಲ್ಲಿ ಸಿಕ್ತಿದ್ದ ಸಾರ್. ಅಂತೂ ಹಿಡದು ಬಲಿಹಾಕಿದ್ರಿ. ಇನ್ನವುನ ಕತೆ ಮುಗಿತು" ಎಂದು ಗಹಗಹಿಸಿದನಂತಲ್ಲಾ, 'ಬಂ' ಕೂಡ ದನಿ ಸೇರಿಸಿ "ಅಲ್ರೀ ಹೋದಲ್ಲೆಲ್ಲಾ ಒಬ್ಬರನ್ನ ಇಟ್ಕುಕೊಳದಾದ್ರೆ, ಜನ ಏನ್ ತಿಳಕೊಳ್ತರೆ? ಬಂಗಾರಪ್ಪ ಇಂಥಾ ಹಾದರಬಡಕ್ರ ತಂದು ರಾಜಕಾರಣಕ್ಕೆ ಬಿಟ್ಟ ಅನ್ನಲ್ವ? ನಮ್ಮ ಖಾಸಗಿ ಬದುಕು ಯಾವಾಗ್ಲು ಗೌಪ್ಯವಾಗಿರಬೇಕು. ಆಗ್ಲೆ ಜನ ಗೌರವಕೊಡದು. ಆ ಹಾಲಪ್ಪ ಯಾರೂ ಮಾಡದ ಕೆಲ್ಸ ಮಾಡಿಲ್ಲ. ಆದ್ರು ರಾಜಕಾರಣಕ್ಕೆ ತಂದ ನಮಗೆ ತಿರುಮಂತ್ರ ಹೇಳಿದ್ರೆ ಸುಮ್ಮನೆ ಬಿಡ್ತಿವಾ?" ಎಂದರಂತಲ್ಲಾ, ಥೂತ್ತೇರಿ!!



* * * * * *

'ದಸರ, ದೀಪಾವಳಿಯ ಸಂಭ್ರಮದಲ್ಲಿರಬೇಕಾದ ಜನಕ್ಕೆ ಶನಿಕತೆಯಂತಹ ಸರಕಾರ ಅಪ್ಪಳಿಸಿದ ಫಲವಾಗಿ, ಜನ ಗರಬಡಿದಂತಾಗಿದ್ದಾರಂತಲ್ಲಾ, ಯಾವ ಅನಾಹುತಕ್ಕೂ ಹತ್ತಿರ ಬರದ ಸರಕಾರವಿರುವಾಗಲೇ, ಅಡ್ಡಮಳೆ ಬಂದು, ಅಪ್ಪಳಿಸಿ ಬಂಗಾರದ ಬಣ್ಣದ ಬತ್ತವೆಲ್ಲಾ ಮಣ್ಣುಪಾಲಾಯ್ತೆಂದು ಮಲೆನಾಡ ಜನ ಒಳಗೊಳಗೇ ಅಳುತ್ತಿರಬೇಕಾದರೆ, ಇತ್ತ ಕೆಲ ಹಾರುವರು ಸರಕಾರ ಕೊಡುವ ರಾಜ್ಯೋತ್ಸವದ ಪ್ರಶಸ್ತಿಗಾಗಿ ಮಾಡಬಾರದ ಲಾಬಿ ಮಾಡುತ್ತ ಕುಳಿತಿವೆಯಂತಲ್ಲಾ, ಸದರಿ ರಾಜ್ಯೋತ್ಸವದ ಪ್ರಶಸ್ತಿಯ ಕನಸು ಕಾಣುತ್ತ ಕರ್ನಾಟಕದ ಕಲಾನಿಧಿಗಳು ಕಾಲ ಹಾಕುತ್ತಿರಬೇಕಾದರೆ, ಕರ್ನಾಟಕದ ಸಾಹಿತಿಗಳೆಲ್ಲಾ ಸತ್ತು ಮಲಗಿದ್ದಾರೆಂಬ ಮಾಹಿತಿ ಬಂದಿದೆಯಲ್ಲಾ, ಶಿವನಗೌಡ ನಾಯಕ್ ಎಂಬ ನಾಲಾಯಕ್ ಮಂತ್ರಿ ನಾಲಾಯಕ್ ಸಾಹಿತಿಯೊಬ್ಬನ ಪುಸ್ತಕಗಳನ್ನು ಸರಕಾರಿ ಕರ್ಮಚಾರಿಗಳ ಖರ್ಚಿನಲ್ಲೇ ಪ್ರಿಂಟಾಕಿಸಿ, ಗ್ರಂಥಾಲಯ ಇಲಾಖೆಗೆ ತುಂಬಿಸಿದ್ದಾನೆ ಎಂಬ ಸತ್ಯ ಸಂಗತಿ ಹೊರಬಿದ್ದರೂ, ಸತ್ತಂತೆ ಮಲಗಿರುವ ಸಾಹಿತಿಗಳಿಗೆ ಏನಾಗಿದೆ ಎಂದು ಯೋಚನೆ ಆಯಿತಲ್ಲಾ, ಆಗ ಗಮನಿಸಿದಾಗ ಸದರಿ ಸಾಹಿತಿಗಳು ತಾವೂ ಕೂಡ ಪುಸ್ತಕ ಕೆರೆಯುತ್ತ ಯಾರಾದರೂ ಪ್ರಭಾವಿಯನ್ನಿಡಿದು ಗ್ರಂಥಾಲಯಗಳಿಗೆ ತುಂಬುವ ಆಲೋಚನೆಯಲ್ಲಿ ಮರೆತುಹೋಗಿದ್ದಾರೆ ಎಂಬ ಸಂಗತಿ ಅಷ್ಟು ನಿಜವಿರಲಾರದು ಎಂದುಕೊಂಡರೂ ಅವರೆಲ್ಲಾ ಸತ್ತಿರುವುದಂತೂ ನಿಜವೆಂಬ ನಿಜವಾದ ಮಾಹಿತಿ ಹೊರಬಿದ್ದಿದೆಯಲ್ಲಾ, ಇಲ್ಲವಾದರೆ ಎಚ್.ಎಸ್. ದೊರೆಸ್ವಾಮಿಯಂತಹ ವಯೋವೃದ್ಧ ಹೋರಾಟಗಾರರ, ಛಲವೂ ಇವರಲ್ಲಿ ಕಂಡುಬರುತ್ತಿಲ್ಲವಲ್ಲಾ ಎಂಬುದು ಸಾಹಿತ್ಯ ಕೊಂಡು ಓದುವವರ ಉದ್ಗಾರವಾಗಿದೆಯಂತಲ್ಲಾ, ಥೂತ್ತೇರಿ!!!

* * * * * *

ಇದ್ದಕ್ಕಿದ್ದಂತೆ ಆಪರೇಷನ್ ಥಿಯೇಟರ್ ತಣ್ಣಗಾದ ಈ ಸಮಯದಲ್ಲಿ ಸುರೇಶ್ ಗೌಡನ ಕಾರ್ಯಾಚರಣೆ ಹೇಗೆ ನಡೆಯಿತೆಂಬುದನ್ನು ಕೇಳಬೇಕೆನಿಸಿತಲ್ಲಾ, ಕೂಡಲೇ ಫೋನ್ ಮಾಡಿದರೆ, ರಿಂಗಾಯ್ತು.

ರಿಂಗ್ ಟೋನ್: "ಕೆಂಚಾಲೊ ಮಚ್ಚಾಲೊ ಯಂಗವ್ರುಲಾ ನಿನ್ ಕನುಸ್‌ಗಳು, ಕ್ಯಂಚಾಲೊ......."

"ಹಲೋ, ಯಾರು?"

"ನಾನು ಸಾರ್ ಯಾಹೂ ಅಂತ, ಪತ್ರಕರ್ತ."

"ಪತ್ರಕರ್ತರೆ? ಏನೇಳಿ ಇವ್ರುರೆ?"

"ಕುಮಾರಸ್ವಾಮಿ ಮಾಡಿಸಿರೊ ಸಿ.ಡಿ. ವಿಷಯದಲ್ಲಿ ಏನೇಳ್ತಿರಿ ಸಾರ್?"

"ಕುಮಾರಸ್ವಾಮಿ ಅದೇನೊ ಸಿನುಮ ತಗಿತಿದ್ರಂತೆ. ಒಂದೇ ಒಂದು ಒಳ್ಳೆ ಸಿನುಮ ತಗದಿದ್ದಾರೇನ್ರಿ?"

"ಜಿತೇಂದ್ರ ಅಂತ ಒಂದು ಅದ್ಭುತ ಸಿನುಮ ತಗದಿದ್ರು ಸಾರ್. ಅದು ಜಗ್ಗೇಸನ್ನ ಆಯ್ಕಂಡು ತಗದು, ಉಪೇಂದ್ರನ್ನ ಆಡಿಕೊಂಡಿದ್ರು."

"ಅದೇ ತರ ಕಂಡ್ರಿ ಇದೂನೂ. ಆ ಜನಾರ್ದನ ರೆಡ್ಡಿ ಸಿ.ಡಿ. ತಗೆದಿದ್ದ ಅಂತ ಹೇಳಿ. ಇವ್ರು ತಗದಿರತರೆ. ಅದೆಲ್ಲಿ ತಗದ್ರೊ ಏನೊ ಅಂತೂ ನನ್ನ ತರನೆ ಒಬ್ಬ ವ್ಯಕ್ತಿಗೆ ಟೀಶರ್ಟಾಕಿ ತಗದು ತೋರ್ಸಿದಾರೆ."

"ಹಾಗಾದ್ರೆ ಟೀ ಶರ್ಟ ನಿಮ್ಮದಲವ ಸಾರ್?"

"ಒಂದೇ ಒಂದಿದೆ ಕಂಡ್ರಿ. ಫ್ಯಾಕ್ಟರಿಯವರು ಒಂದೇ ಕಲರ್‌ದ ಒಂದೇ ಒಂದು ಟೀ ಶರ್ಟ್ ಮಾಡ್ತರಾ?"

"ಇಲ್ಲ ಸಾರ್. ಆದ್ರು ನಿಮ್ಮೆದ್ರಿಗೆ ಶ್ರೀನಿವಾಸ್ ಕುಳತಕೊಂಡು ಮಾತನಾಡ್ತಾಯಿರೊ ಸಿ.ಡಿ. ನೋಡಿದೆ."

"ಶ್ರೀನಿವಾಸ್ ನನ್ನ ಹಳೇ ಗೆಳೆಯರು. ಯಾವಾಗ್ಲೊ ಒಂದು ಬಾರಿ ಇಬ್ಬರೂ ಊಟ ಮಾಡಿ ಲೋಕಾಭಿರಾಮವಾಗಿ ಮಾತನಾಡಿದೊ ಕಂಡ್ರೀ."

"ಯಾವಾಗ ಮಾತನಾಡಿದ್ರಿ ಸಾರ್?"

"ಆಗ್ಲೆ ಒಂದೊರಸದ ಮೇಲಾಯ್ತು."

"ಏನು ಮಾತಾಡಿದ್ರಿ ಸಾರ್?"

"ಏನ್ ಗುರು, ಚನ್ನಾಗಿದ್ದೀರ ಅಂದ್ರು. ಚೆನ್ನಾಗಿದ್ದೀನಿ ಅಂದೆ."

"ಮತ್ತೆ ಸೀಡಿಲಿ 'ಬಂದುಬುಡು ಗುರು' ಅಂತ ಇದಿಯಲ್ಲಾ ಸಾರ್?"

"ಅದು ವಾಕ್ ಹೋಗಣ ಬನ್ನಿ ಅಂದಿರೊ ಮಾತು ಕಂಡ್ರೀ."

"ಮತ್ತೆ ಶ್ರೀನಿವಾಸ್ 'ನೂರು ಕೋಟಿ ಕೊಡ್ತಿಯಾ ಬತ್ತಿನಿ' ಅಂದವ್ರುರಲ್ಲಾ?"

"ಥೂ, ಅದೇನು ಗೊತ್ತೇನ್ರೀ? ಶ್ರೀನಿವಾಸ ರಾಜಕಾರಣಕ್ಕೆ ಬಂದು ಎಲ್ಲಾನು ಕಳಕೊಂಡೆ ಅಂದ. ಅದ್ಕೆ ನಾನು ನಿನ್ನತ್ರ ಈಗಿರೋ ಪ್ರಾಪರ್ಟಿಗೆ ನೂರು ಕೋಟಿ ಕೊಡ್ತಿನಿ ಕೊಡ್ತಿಯಾ, ಅಂದೆ. ಅಷ್ಟೆ ನೋಡಿ."

"ಹಾಗಿದ್ರೆ ನೀವು ಶ್ರೀನಿವಾಸನಿಗೆ ನೂರು ಕೋಟಿ ಕೊಡೋವಷ್ಟು ಹಣ ಮಡಗಿದ್ದೀರಾ ಸಾರ್?"

"ತಮಾಷೆಗೆ ಹೇಳಿದ್ದು ಕಂಡ್ರಿ ಲೋಕಾಭಿರಾಮದ ಮಾತು ನಿಜ ಆಗಿರ್ತಾವಾ?"

"ಲೋಕಾಭಿರಾಮದ ಮುಖಾಂತರಾನೇ ಅಲ್ವಾ ಸಾರ್ ಆಪರೇಷನ್ ಕಮಲ ನಡೆದದ್ದು?"

"ವರ್ತೂರ್ ಪ್ರಕಾಶನ ಹತ್ರ ಲೋಕಾಭಿರಾಮವಾಗಿ ಮಾತಾಡಕಾಗುತ್ತಾ ಕಣ್ರೀ?"

"ಓ, ಬರಿ ಎಡಗೈ ಬಲಗೈ ಅನ್ನಿ."

"ಹೌದು ಕಂಡ್ರಿ. ಒಂದು ವೇಳೆ ನಾನು ಶ್ರೀನಿವಾಸನ್ನ ಬಿಜೆಪಿಗೆ ಎಳೆಯದೇ ಆಗಿದ್ರೆ ಇಷ್ಟು ದಿನಕ್ಕೆ ಕರಕೊಂಡೇ ಬರ್ತಿದ್ದೆ ಕಣ್ರೀ."

"ಮತ್ಯಾಕೆ ಕರಕೊಂಡು ಬರಲಿಲ್ಲ ಸಾರ್?"


"ಯಡಿಯೂರಪ್ಪ ನಿನ್ನ ಪ್ರಯತ್ನ ಬಿಡು ಅಂದ್ರು, ಸುಮ್ಮನಾದೆ."

"ಥೂತ್ತೇರಿ!!!"

ಯಡ್ಡಿಯ ಛೇಲಾನ ಮನೆಯಲ್ಲಿ 800 ಕೋಟಿಯ ಬ್ಲಾಕ್‌ಮನಿ?

ಮಿತ್ತಲ್ ಕಂಪೆನಿಗೆ ಬಳ್ಳಾರಿಯ ಸಹಸ್ರಾರು ಎಕರೆ ಅದಿರು ಸಮೃದ್ಧ ಭೂಮಿಯನ್ನು ಬರೆದುಕೊಟ್ಟ ಯಡ್ಡಿಗೆ ಅದೊಂದು ಡೀಲಿನಿಂದ ಲಕ್ಷ್ಮಿ ಮಿತ್ತಲ್ ಮೂಲಕ ಐನೂರು ಕೋಟಿ ಲಂಚ ಹುಟ್ಟುತ್ತದೆಯೆಂದರೆ, ಈ ಐನೂರು ಕೋಟಿಯನ್ನು ಚೀನಾದಲ್ಲಿ ಐಷಾರಾಮಿ ಹೋಟೆಲ್ ಖರೀದಿಸಿಕೊಡುವ ಮೂಲಕ ಮಿತ್ತಲ್ ಖದೀಮರು ಋಣ ತೀರಿಸುತ್ತಾರೆಂದರೆ, ಇಂಥದೊಂದು ಡೀಲಿನ ದಾಖಲೆ ಪತ್ರಗಳನ್ನು ಛೇಲಾ ಸಿದ್ಧಲಿಂಗಸ್ವಾಮಿಯ ಮನೆಯಲ್ಲಿ ಯಡ್ಡಿ ಬಚ್ಚಿಡುತ್ತಾರೆಂದರೆ ನಾಡಿನ ಲೂಟಿಯ ಪ್ರಮಾಣ ಮತ್ತು ರಭಸ ಇನ್ನೆಂಥದ್ದಿರಬೇಡ?

• ರಾ. ಸೋಮನಾಥ್
ra.somanath2010@gmail.com



ಪರಮಾಪ್ತ ಸಿದ್ಧಲಿಂಗಸ್ವಾಮಿಯ ಮನೆ, ಫ್ಲಾಟು, ಸಂಬಂಧಿಕರ ಆಸ್ತಿಪಾಸ್ತಿಗಳ ಮೇಲೆ ನಡೆದ ಐಟಿ ರೇಡಿಗೆ ಮುಖ್ಯಮಂತ್ರಿ ಯಡ್ಡಿ ಥಂಡಾ ಹೊಡೆದಿದ್ದಾರೆ. ಸಿಕ್ಕ ದಾಖಲೆಗಳು, ಪತ್ತೆಯಾದ ಡೀನೋಟಿಫಿಕೇಷನ್ ಕರ್ಮಕಾಂಡಗಳು ಮತ್ತು ನೂರಾರು ಕೋಟಿ ಮೊತ್ತದ ಕಪ್ಪುಹಣದ ವಿವರಗಳು ಇನ್‌ಕಮ್‌ಟ್ಯಾಕ್ಸ್ ಅಧಿಕಾರಿಗಳ ಕೈಸೇರುತ್ತಿದ್ದಂತೆ 'ಆಪರೇಷನ್ ಕಮಲ'ದ ಬಗ್ಗೆಯ ಯಡ್ಡಿ ಧೋರಣೆಯೇ ಬದಲಾಗಿದೆ.

ಇನ್ನು ರೈಟ್‌ಹ್ಯಾಂಡ್ ಸಿದ್ಧಲಿಂಗಸ್ವಾಮಿ ಸಾಕ್ಷಾತ್ ಕರೆಂಟು ಹೊಡೆದ ಕಾಗೆಯಂತೆ ಮೈಪರಚಿಕೊಳ್ಳುತ್ತಿದ್ದಾನೆ. ಬಹುಶಃ ಎಲ್ಲಿ ಪೆಟ್ಟು ಕೊಟ್ಟರೆ ಎಲ್ಲಿಗೆ ಪುದ್ದಾಗುತ್ತದೆ ಎಂದು ಲೆಕ್ಕ ಹಾಕಿಯೇ ಆದಾಯ ತೆರಿಗೆ ಇಲಾಖೆ ಐಟಿ ರೇಡಿಗೆ ಕೈ ಹಾಕಿರಬೇಕು.

ಇದೇ ಅಕ್ಟೋಬರ್ 26 ರಂದು ಗಣಿರೆಡ್ಡಿಗಳ ಅಷ್ಟೂ ಪಟಾಲಮ್ಮಷ್ಟೇ ಅಲ್ಲದೇ ಸಿಎಂ ಯಡ್ಡಿಯ ರೈಟ್‌ಹ್ಯಾಂಡ್ ಸಿದ್ಧಲಿಂಗಸ್ವಾಮಿಯ ಬೆಂಗಳೂರಿನ ಫ್ಲಾಟು, ಮೈಸೂರಿನ ಮನೆ, ಆತನ ಅಷ್ಟೂ ಸಂಬಂಧಿಕರ ಆಸ್ತಿಪಾಸ್ತಿಗಳ ಮೇಲೆಲ್ಲ ನಡೆದ ಐಟಿ ರೇಡ್ ಬಹುಶಃ ಇತ್ತೀಚಿನ ದಿನಗಳಲ್ಲೇ ಅತೀ ದೊಡ್ಡ ಇನ್‌ಕಂಟ್ಯಾಕ್ಸ್ ದಾಳಿಯಾಗಿರಬೇಕು.

ಸಿದ್ಧಲಿಂಗಸ್ವಾಮಿ ಮುಖ್ಯಮಂತ್ರಿ ಯಡ್ಡಿಯ ಬೇನಾಮಿ, ರೈಟ್‌ಹ್ಯಾಂಡ್, ಆಪ್ತಮಿತ್ರ, ನಂಬಿಕಸ್ತ ಬಂಟ, ಸಕಲ ಸುಖದಾಯಕ, ಛೇಲಾ, ಚಮಚಾ, ಭಟ್ಟಂಗಿ ಮತ್ತು ಬೇಕುಬೇಡದ ಎಲ್ಲಾ ಐಟಮ್ಮುಗಳ ಸರಬರಾಜುದಾರ ಎಂಬುದರಲ್ಲಿ ಯಾರಿಗೂ ಅನುಮಾನಗಳಿಲ್ಲ. ಗುಂಡೂರಾಯರಿಗೆ ಎಫ್.ಎಂ. ಖಾನ್, ಬಂಗಾರಪ್ಪಂಗೆ ಅಲೆಕ್ಸಾಂಡರ್, ಹೆಗಡೆಗೆ ರಾಮಪ್ಪ, ಜೆ.ಎಚ್. ಪಟೇಲರಿಗೆ ಸರೋವರ್ ಶ್ರೀನಿವಾಸ್, ಎಸ್.ಎಂ. ಕೃಷ್ಣರಿಗೆ ಆರ್.ಟಿ. ನಾರಾಯಣ್, ಧರ್ಮಸಿಂಗ್‌ಗೆ ಛೇಲಾ ಸ್ವಾಮಿ ಮತ್ತು ಕುಮಾರಸ್ವಾಮಿಗೆ ಕಬಡ್ಡಿ ಬಾಬು ಪರಮಾಪ್ತರಾಗಿದ್ದ ರೀತಿಗೂ ಸದ್ಯ ಯಡ್ಡಿಗೆ ಸಿದ್ಧಲಿಂಗಸ್ವಾಮಿ ಭಟ್ಟಂಗಿಯಾಗಿರುವ ಟೈಪಿಗೂ ವ್ಯತ್ಯಾಸ ಏದೆ.

ಪತ್ನಿಯ ಸ್ಥಾನದಲ್ಲಿ.....?

ಕೇವಲ ಡೀಲಿಗಾಗಿ ಅಥವಾ ವರ್ಗಾವರ್ಗಿ, ಅಕ್ರಮ ಗಳಿಕೆ, ಬೇನಾಮಿ ವ್ಯವಹಾರಗಳಿಗಷ್ಟೇ ಛೇಲಾಗಳಾಗಿ ಚಾಲ್ತಿಗೆ ಬಂದವರಿಗೂ ಯಡ್ಡಿ-ಸಿದ್ಧಲಿಂಗಸ್ವಾಮಿಯ ವಿಲಕ್ಷಣ ಸಂಬಂಧಕ್ಕೂ ವಿಪರೀತ ವ್ಯತ್ಯಾಸಗಳಿವೆ. ಯಡ್ಡಿ ಪಾಲಿಗೆ ಸಿದ್ಧಲಿಂಗಸ್ವಾಮಿ ಪತ್ನಿಯೂ ಹೌದು, ತಾಯಿಯೂ ಹೌದು, ಮಿತ್ರನೂ ಹೌದು, ಅಂತರಂಗದ ಆಪ್ತಮಿತ್ರನೂ ಹೌದು. ಯಡ್ಡಿ ಬೇಕಾದರೆ ಮಕ್ಕಳ ಮಾತನ್ನು ತೆಗೆದು ಹಾಕಬಹುದು. ಪರ್ಯಾಯ ಸಿಎಂ ಎಂದೇ ಚಾಲ್ತಿಯಲ್ಲಿರುವ ಮಗ ವಿಜಯೇಂದ್ರನನ್ನೂ ಸಿಎಂ ನಂಬದೇ ಇರಬಹುದು. ಇನ್ನೂ ಹೆಚ್ಚೆಂದರೆ ಶೋಭಾ ಕರಂದ್ಲಾಜೆಯನ್ನು ಬಿಟ್ಟರೂ ಸಿದ್ಧಲಿಂಗಸ್ವಾಮಿಯನ್ನು ಮಾತ್ರ ಬಿಡಲಾರದಷ್ಟು ದೌರ್ಬಲ್ಯ ಯಡ್ಡಿಗಿದೆ.

ಸಿಎಂ ತನ್ನನ್ನು ಬಿಟ್ಟರೆ ಅತೀಹೆಚ್ಚು ನಂಬುವುದು ಈತನನ್ನೇ. ಯಡ್ಡಿಗೆ ಏನು ಬೇಕು ಯಾವುದು ಬೇಡ ಎಂದು ಬೇರೆಲ್ಲರಿಗಿಂತಲೂ ನಿಖರವಾಗಿ ಬಲ್ಲವನು ಈತ ಮಾತ್ರ. ಮುಖ್ಯಮಂತ್ರಿ ಜೊತೆ ವಾಕಿಂಗ್, ಪೂಜೆ, ತಿಂಡಿ, ಮಾತ್ರೆ, ಔಷಧಿ, ಬಟ್ಟೆಬರೆ; ಇತ್ಯಾದಿ ಪ್ರತಿಯೊಂದನ್ನೂ ನಿಭಾಯಿಸುವವನು ಈತನೇ. ಪತ್ನಿ ಮೈತ್ರಾದೇವಿ ಕೊಲೆಯಾದ ನಂತರ ಯಡ್ಡಿ ಹೆಚ್ಚು ಅವಲಂಬಿಸಿದ್ದು ಈತನನ್ನೇ ಎಂದು ಪತ್ರಿಕೆಗಳು ಬರೆಯುತ್ತವಾದರೂ ಹಕೀಕತ್ತೇ ಬೇರೆಯಿದೆ. ಈತ ಅಂಟಿಕೊಂಡ ನಂತರವೇ ಪತ್ನಿ ಮೈತ್ರಾದೇವಿಯನ್ನು ಯಡ್ಡಿ ಮೂಲೆಗುಂಪು ಮಾಡಿದ್ದು ಮತ್ತು ಇದೇ ಕಾರಣಕ್ಕೆ ಮೈತ್ರಾದೇವಿ ಜಿಗುಪ್ಸೆಗೊಂಡು ಬ್ರಹ್ಮಕುಮಾರಿ ಸಂಗಕ್ಕೆ ಬಿದ್ದು ಮನೋವ್ಯಥೆಗೀಡಾಗಿದ್ದು!

ಒಂದರ್ಥದಲ್ಲಿ ಸಿದ್ಧಲಿಂಗಸ್ವಾಮಿ ಯಡ್ಡಿ ಗರ್ಭಗುಡಿಯ ಪೂಜಾರಿಯಿದ್ದಂತೆ. ಮುಖ್ಯಮಂತ್ರಿ ಮಕ್ಕಳು, ನೆಂಟರಿಷ್ಟರು, ಕುಟುಂಬದವರಿಗೂ ಇಲ್ಲದ ಕಿಮ್ಮತ್ತು ಈತನಿಗಿದೆ. ಟಾಪ್‌ಮೋಸ್ಟ್ ಐಎಎಸ್ ಅಧಿಕಾರಿಗಳು ಕೂಡ ಈತನ ಮಾತನ್ನೇ ವೇದವಾಕ್ಯವಾಗಿ ಪರಿಗಣಿಸುತ್ತಾರೆ. ಸಿಎಂ ಕಚೇರಿಯಲ್ಲಿ ಯಾರಿಗೇನು ಕೆಲಸವಾಗುತ್ತೋ ಗೊತ್ತಿಲ್ಲ, ಆದರೆ ಸ್ವಾಮಿ ಕೃಪೆಗೆ ಪಾತ್ರರಾದವರ ಕೆಲಸವಂತೂ ಮಿಸ್ಸಿಲ್ಲ.

ಮಂತ್ರಿಗಳೇ ಮಸ್ಕಾ?

ಮುಖ್ಯಮಂತ್ರಿಗಳ temperment ಹೇ[illegible] ಯಾವ ಟೈಮಲ್ಲಿ ಹೋದರೆ ಕೆಲಸ ಪಕ್ಕಾ. [illegible] ಕೆಲಸಕ್ಕೆ ಯಾವ ಮೊತ್ತದ ಕಾಣಿಕೆ. ಎಂಥ ರಿಸ್ಕಿಗೆ ಯಾ[illegible] ಹೇಳಿಸಬೇಕು. ಸಿಎಂ ಸಾಹೇಬರ ಮನವೊಲಿಸಲು [illegible] ಮಾಡಬೇಕು; ಇತ್ಯಾದಿ ಪ್ರತಿಯೊಂದನ್ನು ಈತ[illegible] ಕೇಳಿಕೊಂಡೇ ಡೀಲರುಗಳು ಕಾರ್ಯಾಚರಣೆಗಿಳಿ[illegible]ತ್ತಾರೆಂದರೆ ಈತನ ತಾಕತ್ತು ಇನ್ನೆಂಥದ್ದಿರಬೇಡ?


ತಮಾಷೆಯೆಂದರೆ ನಿರಾಣಿ, ಬೊಮ್ಮಾಯಿ, [illegible] ಬೆಳಮಗಿ, ಉಮೇಶ್ ಕತ್ತಿ ಸೋಮಣ್ಣನಂಥ ಮಂತ್ರಿ[illegible] ಕೂಡ ಮುಖ್ಯಮಂತ್ರಿಯನ್ನು ಕಾಣುವ ಮುನ್ನ ಈ[illegible] ಮಸ್ಕಾ ಹೊಡೆಯುತ್ತಾರೆ. ಇನ್ನು ಶಾಸಕರಂತೂ ಯ[illegible] ದೂರ್ವಾಸ ಬುದ್ಧಿಗೆ ಹೆದರಿ ಸಿದ್ಧಲಿಂಗಸ್ವಾಮಿಯ [illegible] ಬೀಳುವುದಕ್ಕೂ ಹೇಸುವುದಿಲ್ಲ. ಬಿಜೆಪಿ ಸರ್ಕಾ[illegible] ಮುಖ್ಯಮಂತ್ರಿಯ ನಂತರ ಅತ್ಯಂತ ಪ್ರಭಾವಿ [illegible] ಯಾರೆಂದರೆ ಕರಂದ್ಲಾಜೆಗೂ ಮುನ್ನ ಕೇಳಿಬರುವುದು [illegible] ಸ್ವಾಮಿಯ ಹೆಸರೇ!

ಮೊನ್ನೆ ಅತೃಪ್ತರೆಲ್ಲ ಬಂಡೆದ್ದು ಚೆನ್ನೈಗೆ ಹೋ[illegible] ಮುನ್ನ ಐದು ಕಾರುಗಳ ತುಂಬ ದಾಂಢಿಗರನ್ನು ಹೊತ್ತು[illegible] ರೇಣುಕಾಚಾರ್ಯನ ಕತ್ತಿನ ಪಟ್ಟಿ ಹಿಡಿಯಲು ಹ[illegible] ಇದೇ ಸ್ವಾಮಿ ಸಖತ್ತು ಗೂಸಾ ತಿಂದ. ದ[illegible] ಉದ್ಘಾಟನೆಗೆಂದು ಮೈಸೂರಿಗೆ ಬಂದು ಅಲ್ಲಿದ್ದವ[illegible] ಐನೂರು ರೂಪಾಯಿಯ ಗರಿಗರಿ ನೋಟು ಹಂ[illegible] ಹೋಗಿ ಭಕ್ತಾದಿಗಳಿಂದ ಯಕ್ಕಾಮಕ್ಕಾ ಉಗಿಸಿಕೆ[illegible] ಹರಳೆಣ್ಣೆ ಹಾಕಿ ತೀಡಿದ ಕ್ರಾಪು, ಹಣೆಗೆ ಪಟ್ಟಾಗಿ ವಿಭೂತಿ ಪಟ್ಟಿ, ಮಧ್ಯೆ ಕುಂಕುಮ ಬೊಟ್ಟು, ಸದಾಕಾಲ ಹೂವು, ಯಾವತ್ತೂ ಬಿಳಿ ಷರ್ಟು ಮೂಲಂಗಿ ಪ್ಯಾಂಟು!

ಕಲೆಕ್ಷನ್ ಕಾಳಪ್ಪ

ಥಟ್ಟನೆ 'ಪಡುವಾರಳ್ಳಿ ಪಾಂಡವರು' ಚಿತ್ರದ ಮ[illegible] ಕೃಷ್ಣಮೂರ್ತಿಯಂತೆ ಕಾಣುವ ಸಿದ್ಧಲಿಂಗಸ್ವಾಮಿ [illegible] ಪಾಲಿಗೆ ಕಲೆಕ್ಷನ್ ಕಾಳಪ್ಪನೇ. ಯಾವತ್ತಾದರೂ ಪಿತ್ಥ ನೆ[illegible] ಯಡ್ಡಿಗೆ ಸಿಟ್ಟು ಬಂತೆಂದರೆ ಛೇಲಾ ಸ್ವಾಮಿಯನ್ನು ಅಟ[illegible] ಕೊಂಡು ಹೊಡೆಯುತ್ತಾರೆ. ಅದು ತನ್ನ ಕೋಪ ತ[illegible] ಅಥವಾ ತನ್ನ ತಲೆ ಕೆಟ್ಟಿದೆ ಎಂದು ಯಡ್ಡಿ ತೋರಿಸಿಕೊ[illegible] ರೀತಿ. ಇನ್ನೂ ಕೆಲವೊಮ್ಮೆ ತನಗಾಗದ ಗಣಿ ರೆಡ್ಡಿ[illegible] ಶೆಟ್ಟರ್, ಈಶ್ವರಪ್ಪ ಮುಂತಾದವರೋ ಎದುರಿಗಿದ್ದರ[illegible] ತಕ್ಷಣವೇ ಸಿದ್ಧಲಿಂಗಸ್ವಾಮಿಯ ಮೇಲೆ ಏರಿಹೋಗು[illegible] ಬೋ.... ಮಗನೇ, ಸೂ... ಮಗನೇ, ಲೋಫರ್; [illegible] ಯಾಗಿ ಛೇಲಾ ಸ್ವಾಮಿಯ ಭೂತಬಿಡಿಸಲಾರಂಭಿಸಿದ[illegible] ಎದುರಿಗಿದ್ದ ಆಸಾಮಿಯನ್ನು ಬಯ್ಯುವ ಬದಲ[illegible] ಸಿಟ್ಟನ್ನು ಈತನ ಮೇಲೆ ಪ್ರಯೋಗಿಸುತ್ತಿದ್ದಾರೆಂದೇ [illegible]

ಸಿದ್ದು ಸೋಲಿಸಿ ಎಮ್ಮೆಲ್ಲೇ ಆಗ್ತಾನಂತೆ ಸ್ವಾಮಿ!



ಪಾಪದ ದುಡ್ಡು ಮತ್ತು ಅಧಿಕಾರದ ಪಿತ್ಥ ನೆತ್ತಿಗೇರಿದರೆ ಚಪ್ರಾಸಿ ಕೂಡ ಏನೆಲ್ಲಾ ಅನಾಹುತಕ್ಕೆ ಕೈಹಾಕುತ್ತಾನೆಂಬುದಕ್ಕೆ ಸಿದ್ಧಲಿಂಗಸ್ವಾಮಿ ವಿರೋಧಿ ನಾಯಕ ಸಿದ್ಧರಾಮಯ್ಯನವರ ಬುಡಕ್ಕೆ ಕೈಹಾಕಿರುವುದೇ ಸಾಕ್ಷಿ.

ಮುಂದಿನ ಚುನಾವಣೆಯಲ್ಲಿ ಮೈಸೂರಿನ ವರುಣಾ ಕ್ಷೇತ್ರಕ್ಕೆ ಸಿದ್ದು ವಿರುದ್ಧ ಛೇಲಾ ಸ್ವಾಮಿಯೇ ಬಿಜೆಪಿ ಅಭ್ಯರ್ಥಿಯಂತೆ. ಆ ಕಾರಣಕ್ಕೇ ವಾರಕ್ಕೊಮ್ಮೆ ಸ್ವಾಮಿ ಮೈಸೂರಿಗೆ ಬರುತ್ತಿದ್ದಾನೆ. ಸುಮ್ಮನೇ ಬರುತ್ತಾನಾ? ಸಿಕ್ಕ ಸಿಕ್ಕವರಿಗೆಲ್ಲ ಐನೂರು ರೂಪಾಯಿಯ ನೋಟು ಹಂಚುತ್ತಾನೆ. ವರುಣಾ ಸುತ್ತಮುತ್ತ ಬಹುತೇಕ ಬಿಜೆಪಿ ಕಾರ್ಯಕ್ರಮಗಳಿಗೆಲ್ಲ ಸದ್ಯ ಈತನೇ ಚೀಫ್‌ಗೆಸ್ಟು. ಏಕೆಂದರೆ ಕೈತುಂಬಾ ದುಡ್ಡು ಕೊಡುತ್ತಾನೆ. ನೆರೆದ ಚೆಡ್ಡಿ ಗಿರಾಕಿಗಳೆಲ್ಲ ಕಾರ್ಯಕ್ರಮದ ಮಧ್ಯೆ, 'ಭಾವೀ ಎಮ್ಮೆಲ್ಲೇ ಸಿದ್ಧಲಿಂಗಸ್ವಾಮಿ...' ಎಂದೇ ಜೈಕಾರ ಹಾಕುತ್ತಾರೆ.

ಸ್ವಾಮಿ ಕೂಡ ಅಷ್ಟೇ ಧಾರಾಳವಾಗಿ ರೊಕ್ಕ ಸುರಿಯುತ್ತಿದ್ದಾನೆ. ವರುಣಾ ಕ್ಷೇತ್ರದ ಪ್ರತಿ ತಾಲ್ಲೂಕು ಪಂಚಾಯ್ತಿಗೂ ತಲಾ ಲಕ್ಷದಂತೆ ಕಾಸು ಹಂಚಿದ್ದಾನೆ. ವರುಣಾ, ಕಡಗೋಳ ಮತ್ತು ಕಸಬಾ ಹೋಬಳಿಗಳಲ್ಲಿ ತನ್ನದೇ ಒಂದೊಂದು ಕಚೇರಿಗಳನ್ನು ತೆರೆದಿದ್ದಾನೆ. ಅಲ್ಲಿಗೆ ಯಾರೇ ಬಂದರೂ ತಿಂಡಿತೀರ್ಥ ಬಿಟ್ಟು, ಇಂಥ ಪ್ರತಿ ಕಚೇರಿಗೂ ಒಬ್ಬೊಬ್ಬ ಏಜೆಂಟನನ್ನು ನೇಮಿಸಿ ಕೈತುಂಬಾ ಸಂಬಳ ಕೊಡುತ್ತಾನೆ.

ಇನ್ನು ವರುಣಾ ಕ್ಷೇತ್ರದ ಯಾರೇ ಬೆಂಗಳೂರಿಗೆ ಬಂದರೂ ಅವರಿಗೆ ಊಟ, ವಸತಿ, ಓಡಾಡಲು ಕಾರು ಕಲ್ಪಿಸುತ್ತಾನೆ. ತಾನೇ ನಿಂತು ಬಂದವರಿಗೆ ಕೆಲಸ ಮಾಡಿಕೊಡುತ್ತಾನೆ. ಹೋಗುವಾಗ ಕಮ್ಮಿಯೆಂದರೂ ಐದು ಸಾವಿರ ರೂಪಾಯಿ ಜೇಬಿಗಿಡುತ್ತಾನೆ. ಇದು ಸ್ವಾಮಿಯ ಐಲಾಟದ ಒಂದು ಟೈಪಾದರೆ, ಮುಂಬರುವ ಜಿಲ್ಲಾ ಪಂಚಾಯ್ತಿ ಚುನಾವಣೆಗೆಂದೇ ಮತ್ತೊಂದು ವರಸೆ ಆರಂಭಿಸಿದ್ದಾನೆ.

ಅದು ತನ್ನ ಅಣ್ಣ ಸಿದ್ಧಲಿಂಗಪ್ಪನನ್ನು ತಗಡೂರು ಜಿಲ್ಲಾ ಪಂಚಾಯ್ತಿಗೆ ಬಿಜೆಪಿಯಿಂದ ನಿಲ್ಲಿಸಿ ಗೆಲ್ಲಿಸುವುದು. ಅಸಲಿಗೆ ತಗಡೂರು ಒಂದೋ ಪರಿಶಿಷ್ಟ ಜಾತಿಗೆ ಮೀಸಲಾಗಬೇಕು ಅಥವಾ ಸಾಮಾನ್ಯ ಕ್ಷೇತ್ರವಾಗಬೇಕು. ಹಾಗೊಮ್ಮೆ ಸಾಮಾನ್ಯ ಕ್ಷೇತ್ರವಾಯಿತೆಂದರೆ ಏನೇ ಲಗಾಟ ಹೊಡೆದರೂ ಸ್ವಾಮಿಯ ಅಣ್ಣ ಗೆಲ್ಲಲಾರ. ಅದಕ್ಕೆ ಸ್ವಾಮಿ ಹಿಡಿದ ಅಡ್ಡ ದಾರಿಯೆಂದರೆ, ತಗಡೂರನ್ನು ಬಿಸಿಎಂ(ಬಿ) ಮೀಸಲಾತಿಗೀಡುಮಾಡುವುದು!

ಹಾಗಾದರೆ ಅಣ್ಣ ಸಿದ್ಧಲಿಂಗಪ್ಪನ ವಿರುದ್ಧ ಪ್ರಬಲ ಅಭ್ಯರ್ಥಿಗಳೇ ಇರುವುದಿಲ್ಲ, ಆಗ ಬೇಕಾಬಿಟ್ಟಿ ದುಡ್ಡು-ಹೆಂಡ ಹಂಚಿ ಅಣ್ಣನನ್ನು ಗೆಲ್ಲಿಸಿಕೊಳ್ಳುವ ಲೆಕ್ಕ ಹಾಕಿಯೇ ಸ್ವಾಮಿ ಬಾರು-ವೈನ್ ಸ್ಟೋರುಗಳನ್ನು ಖರೀದಿಸುತ್ತಿದ್ದಾನೆ. ಮುಂದೆ ತಾನು ಎಮ್ಮೆಲ್ಲೇಯಾಗಬೇಕೆಂದರೂ ಹೆಂಡ ಹಂಚಲು ಬೇಕಲ್ಲ.

ಇದಿಷ್ಟೂ ಮುಂಬರುವ ಚುನಾವಣೆಗೆ ಸ್ವಾಮಿ ನಡೆಸುತ್ತಿರುವ ತಯಾರಿ. ತಮಾಷೆಯೆಂದರೆ ಏನೇ ಕ್ಯಾಟಗರಿ ಮಾಡಿ, ಎಷ್ಟೇ ರೊಕ್ಕ ಹಂಚಿ ಅಣ್ಣನನ್ನು ಗೆಲ್ಲಿಸಬೇಕೆಂದರೂ ಅದು ಸ್ವಾಮಿ ಹಗಲುಕನಸಷ್ಟೇ. ನಿಂತರೆ ಬೇಕಾಬಿಟ್ಟಿ ರೊಕ್ಕ ಕಿತ್ತು ಅಣ್ಣತಮ್ಮ ಇಬ್ಬರಿಗೂ ಸೇರಿಸಿ ಮಣ್ಣು ಮುಕ್ಕಿಸಲು ಬಿಜೆಪಿ ಕಾರ್ಯಕರ್ತರೇ ಸಮಯ ಕಾಯುತ್ತಿದ್ದಾರೆ. ಹಾಗೊಮ್ಮೆ ಲಿಂಗಾಯಿತರಷ್ಟೇ ಸ್ವಾಮಿಯ ಬೆನ್ನಿಗೆ ನಿಂತರೂ ಮಿಕ್ಕೆಲ್ಲಾ ಜಾತಿಗಳು ಸಿದ್ದು ಬೆನ್ನಿಗೆ ನಿಲ್ಲುತ್ತವೆ. ಅಷ್ಟಕ್ಕೂ ಹಣ-ಹೆಂಡದ ಅಮಲಿಗೆ ಬಿದ್ದು ಭಟ್ಟಂಗಿ ಸ್ವಾಮಿಯ ಮುಂದೆ ಸಿದ್ಧರಾಮಯ್ಯನವರನ್ನು ಸೋಲಿಸುವಷ್ಟು ಕೀಳುಮಟ್ಟದ ಮತದಾರರಂತೂ ವರುಣಾ ಕ್ಷೇತ್ರದವರಲ್ಲ.

ಜನ್ಮಾಪಿ ಛೇಲಾಗಿರಿಯಲ್ಲೇ ಕಾಲ ಕಳೆದು, ಕೊಳ್ಳೆಯ ದುಡ್ಡಲ್ಲೇ ಓಟು ಖರೀದಿಸಲು ಬಂದ ಸಿದ್ಧಲಿಂಗನಿಗೆ ಯಾವ ಯೋಗ್ಯತೆಯಿದೆಯೆಂದು ವರುಣಾದ ಜನ ಸಿದ್ಧರಾಮಯ್ಯನವರನ್ನು ಸೋಲಿಸುತ್ತಾರೆ?

ಛೇಲಾ ಸ್ವಾಮಿಗೆ ತಕ್ಕ ಶಾಸ್ತಿಯಂತೂ ಶತಸ್ಸಿದ್ಧ. •

...ಯ ಪತ್ನಿ ಮೈತ್ರಾದೇವಿ ಕೊಲೆಯಾದ ರಾತ್ರಿ ...ಪ್ರತ್ಯಕ್ಷ ಸಾಕ್ಷಿಗಳಾಗಿದ್ದ ಇಬ್ಬರ ಪೈಕಿ ಓರ್ವ ...ಚಾರ್ಯನಾದರೆ ಮತ್ತೊಬ್ಬ ಸ್ವಾಮಿ! ಸಿಎಂ ಮಗಳು ...ದೇವಿಯ ಅಷ್ಟೂ ಆಸ್ತಿಪಾಸ್ತಿಯನ್ನು ...ಸುವುದರಿಂದ ಹಿಡಿದು, ಯಡ್ಡಿಯ ಅಷ್ಟೂ ...ವಿ, ಬೇನಾಮಿ ಆಸ್ತಿ, ಬ್ಯಾಂಕ್ ಅಕೌಂಟು, ಅಕ್ರಮ ...ಗಳ ಮಾಹಿತಿಯಿರುವುದು ಈತನಿಗೆ ಮಾತ್ರ. ...ರ ಪಾಲಿಗೆ ಸ್ವಾಮಿ ಮಿನಿ ಸಿಎಂ. ಮೈಸೂರು ...ಲವರು ಸಣ್ಣಬುದ್ಧಿಯೋರು ಅನ್ನುತ್ತಾರೆ. ಇನ್ನೂ ... ಚಿಕ್ಕ ಧಣಿ ಅನ್ನುತ್ತಾರೆ. ಮುಖ್ಯಮಂತ್ರಿಯ ... ಮಗ ವಿಜಯೇಂದ್ರ ಮತ್ತು ಸ್ವಾಮಿ ಶರ್ಟಿನ ...ಡಕೊಂಡು ಕಚ್ಚಾಡುವುದನ್ನು ಕಂಡವರಿದ್ದಾರೆ. ...ಅತೀ ದೊಡ್ಡ ದೌರ್ಬಲ್ಯವೇನೆಂದರೆ, ಅನೇಕರು ...ಕರಂದ್ಲಾಜೆ ಎನ್ನುತ್ತಾರಾದರೂ ಸತ್ಯ ಅದಲ್ಲ. ...ಹ್ಯಾಂಡ್ ಸ್ವಾಮಿ ಬಿಟ್ಟರೆ ಮುಖ್ಯಮಂತ್ರಿಗೆ ...ಡುವುದಿಲ್ಲ. ಬಹುಶಃ ಕರಂದ್ಲಾಜೆಗೂ ಮುನ್ನ ...ಅಂತಃಪುರವನ್ನು ಆಕ್ರಮಿಸಿದವನು ಸ್ವಾಮಿಯೇ. ...ನಂಬಿರುವಂತೆ ಸುತ್ತೂರು ಸ್ವಾಮಿಗಳೇ ಈತನನ್ನು ...ಂಟು ಹಾಕಿದ್ದಾರೆಂಬುದು ಅರ್ಧ ಸತ್ಯ ಮಾತ್ರ. ...ರೋಧ ಪಕ್ಷದ ನಾಯಕನಾಗುವುದಕ್ಕೂ ಮೊದಲೇ ...ಲಿಕೊಂಡಿದ್ದ.

...ಸುಚಿತ್ರಾ ನೇತುಹಾಕಿದಳು

...ಲತಃ ಮೈಸೂರು ಜಿಲ್ಲೆಯ ನಂಜನಗೂಡು ... ಕವಲಂದೆ ಹೋಬಳಿಯ ಕಾರ್ಯ ಎಂಬ ... ಸಿದ್ಧಲಿಂಗಪ್ಪ ಎಂಬ ಜಂಗಮನ ಎರಡನೇ ... ಸಿದ್ಧಲಿಂಗಸ್ವಾಮಿ ಒಂದಾನೊಂದು ಕಾಲಕ್ಕೆ ...ಸ್ವಾಮಿಗಳ ಜೆಎಸ್‌ಎಸ್ ಕಾಲೇಜಿನಲ್ಲಿ ಯಃಕಶ್ಚಿತ್ ... ಆಗಿದ್ದ. ಈತನ ಅಣ್ಣನ ಹೆಸರೂ ಸಿದ್ಧಲಿಂಗಪ್ಪ. ...ನಗರ ತಾಲ್ಲೂಕು ಉಮ್ಮತ್ತೂರಿಗೆ ಮದುವೆಯಾದ ...ಕ್ಕ ಸಾವಿತ್ರಮ್ಮ ಸೇರಿದಂತೆ ಈತನಿಗೆ ಒಟ್ಟು ... ಅಕ್ಕಂದಿರಿದ್ದಾರೆ.


...ರಿನ ಜೆಎಸ್‌ಎಸ್ ಲಾ ಕಾಲೇಜಿನಲ್ಲಿ ಅಟೆಂಡರ್ ...ನೇ ಮಠದ ಗಂಟೆ ಮತ್ತು ತಾಮ್ರದ ತಂತಿ ...ಬಿದ್ದ. ಆವತ್ತು ಸುತ್ತೂರು ಸ್ವಾಮಿಯೇ ಉಗಿದು ...ದ್ದರು. ಅದೇ ಹೊತ್ತಿಗೆ ಶಿಕಾರಿಪುರದಲ್ಲಿ ಸೋತು, ...ಧಕ್ಷತೆಯೂ ಗಿಟ್ಟದೇ ಹೈರಾಣಾಗಿದ್ದ ಯಡ್ಡಿ ...ಮಾಡಲೆಂದು ಬರುತ್ತಿದ್ದದ್ದು ಮೈಸೂರಿನ ಸುಚಿತ್ರಾ ...ದಲಾಯಿಸಲಾಗಿದೆ) ಎಂಬಾಕೆಯ ಮನೆಗೆ! ...ಮೈಸೂರು ಕಾರ್ಪೊರೇಷನ್ನಿಗೆ ಬಿಜೆಪಿಯಿಂದ ...ದ ಲೇಡಿ ಕೌನ್ಸಿಲರ್ ... ಸ್ವಾಮಿಗೆ ದೂರದ ... ವರಸೆಯಲ್ಲಿ ...ಕು. ಸುಚಿತ್ರಾ ಕೂಡ ... ಯಡ್ಡಿ ಹುಟ್ಟೂರಾದ ...ಯವರೆ. ತಾನು ...ಂತ್ರಿಗೆ ಸಂಬಂಧಿಯೆಂದೇ ... ಸುಚಿತ್ರಾ ...ತ್ತಾಳೆ. ...ಗೆ ಸ್ವಾಮಿಯನ್ನು ...ಕಿದ್ದೇ ಈಕೆ. ...ದಲು ಯಡ್ಡಿಯ ... ಚಾಲ್ತಿಯಲ್ಲಿದ್ದ ಸ್ವಾಮಿ, ...ರೋಧ ಪಕ್ಷದ ...ದ ಮೇಲಂತೂ ...ರು ಕಲೆಕ್ಷನ್ನಿಗಿಳಿದ. ...ಜೆಪಿ ಕಾರ್ಯಾಲಯದಲ್ಲಿ ಆ ಹೊತ್ತಿಗೆ ...ರ್ಯನ ಸಹಾಯಕಿಯಂತೆ ...ಂಡಿದ್ದ ಕರಂದ್ಲಾಜೆಯನ್ನು ಈತನೇ ಕರೆತಂದು ...ಂಟು ಹಾಕಿದ. ಜೊತೆಗೆ ಲೆಹರ್‌ಸಿಂಗ್ ...ಲುಕೋರ ಮಾರ್ವಾಡಿ ಆಗಾಗ ...ದ್ದ 'ವಿಶೇಷ ಸೇವೆ'ಗೂ ಈತನೇ ಅವಕಾಶ

ಅಣ್ಣನ ಹೆಸರಿಗೆ 30 ಎಕರೆ ಅಕ್ಕನ ಹೆಸರಲ್ಲಿ ಇಟ್ಟಿಗೆ ಫ್ಯಾಕ್ಟರಿ

ಸಿದ್ಧಲಿಂಗಸ್ವಾಮಿಯ ಅಗಾಧ ಆಸ್ತಿಪಾಸ್ತಿಯ ಮೇಲೆ ಐಟಿ ಅಧಿಕಾರಿಗಳು ಎಷ್ಟೊಂದು ಪೂರ್ವಸಿದ್ಧತೆಯಿಂದ ರೇಡು ಬಿದ್ದಿದ್ದಾರೆಂದರೆ; ಮೈಸೂರಿನ ಆತನ ಜೆ.ಪಿ.ನಗರದ ಬಂಗಲೆ ಮತ್ತು ಬೆಂಗಳೂರಿನ ಅಪಾರ್ಟ್‌ಮೆಂಟ್‌ನ ಮೇಲಷ್ಟೇ ಅಲ್ಲ; ಆತನ ಹುಟ್ಟೂರು ನಂಜನಗೂಡು ತಾಲ್ಲೂಕು ಕಾರ್ಯದ ಮನೆ ಮೇಲೂ ಏಕಕಾಲಕ್ಕೆ ರೇಡು ನಡೆದಿದೆ.

ಅಲ್ಲಿ ಬಯಲಿಗೆ ಬಂದದ್ದೇನೆಂದರೆ; ಒಂದಾನೊಂದು ಕಾಲಕ್ಕೆ ಕೂಲಿನಾಲಿ ಮಾಡಿಕೊಂಡಿದ್ದ ಅಣ್ಣ ಸಿದ್ಧಲಿಂಗಪ್ಪ 30 ಎಕರೆ ಜಮೀನು ಕೊಡಿಸಿದ್ದ. ಅದಕ್ಕೆ ಒಂದಲ್ಲ ಮೂರು ಪಂಪ್‌ಸೆಟ್ಟುಗಳನ್ನು ಹಾಕಿಸಿಕೊಟ್ಟಿದ್ದ. ಚಾಮರಾಜನಗರದ ರಸ್ತೆಯಲ್ಲಿರುವ ಹಳ್ಳಿಕೆರೆ ಹುಂಡಿ ಒಂದರಲ್ಲೇ ಅಣ್ಣನಿಗೆ ಎಂಟು ಎಕರೆ ಭೂಮಿ ಕೊಡಿಸಿದ್ದ.

ಇದಲ್ಲದೇ ಸಂತೆಮರಳ್ಳಿ ಹೋಬಳಿಯ ಉಮ್ಮತ್ತೂರಿನಲ್ಲಿ ಅಕ್ಕ ಸಾವಿತ್ರಮ್ಮನ ಹೆಸರಿಗೂ ಸಿಕ್ಕಾಪಟ್ಟೆ ಭೂಮಿ ಖರೀದಿಸಿದ್ದ. ಅಕ್ಕನ ಅಳಿಯ ಉಮ್ಮತ್ತೂರು ಇಂದುಶೇಖರ್ ಹೆಸರಿಗೆ ಖರೀದಿಸಿದ ಆಸ್ತಿ ಟಿ. ನರಸೀಪುರ ತಾಲ್ಲೂಕಿನ ಚಿಕ್ಕಪ್ಪ ಶಾಂತಮಲ್ಲನಿಗೆಂದು ಮೈಸೂರಿನ ವಿಜಯನಗರದಲ್ಲಿ ಖರೀದಿಸಿದ ಎರಡು ಸೈಟು, ನಂಜನಗೂಡು-ಚಾಮರಾಜನಗರ ರಸ್ತೆಯಲ್ಲಿ ಇತ್ತೀಚೆಗಷ್ಟೇ ಖರೀದಿಸಿದ ಇಟ್ಟಿಗೆ ಫ್ಯಾಕ್ಟರಿಯ ದಾಖಲೆಗಳೂ ಇನ್‌ಕಮ್ ಟ್ಯಾಕ್ಸ್ ಅಧಿಕಾರಿಗಳ ಪಾಲಾಗಿವೆ.




ಯಡ್ಡಿ ಮಗ ವಿಜಯೇಂದ್ರ

ಮೈಸೂರಿನ ದೂರ ಗ್ರಾಮದಲ್ಲಿದ್ದ ಈತನ ಮತ್ತೊಬ್ಬ ಅಕ್ಕ ಮಾದೇವಮ್ಮ ಒಂದಾನೊಂದು ಕಾಲಕ್ಕೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದವಳು. ಯಡ್ಡಿ ಮುಖ್ಯಮಂತ್ರಿಯಾಗಿದ್ದೇ ತಡ, ರಾತ್ರೋರಾತ್ರಿ ಶ್ರೀಮಂತೆಯಾದಳು. ಐವತ್ತು ಎಕರೆಗೂ ಅಧಿಕ ಜಮೀನನ್ನು ಸ್ವಾಮಿ ಈಕೆಗೆ ಖರೀದಿಸಿಕೊಟ್ಟಿದ್ದ. ಜೊತೆಗೆ ಇದೇ ಸ್ವಾಮಿಯ ಅಕ್ಕ ಬಡ್ಡಿ ದಂಧೆಗೂ ಕೈಯಿಟ್ಟಿದ್ದಳು. ಸ್ವಾಮಿಯ ಮೂರನೇ ಅಕ್ಕನ ಮನೆಯಲ್ಲಿ ಯಡ್ಡಿ ಮಗ ವಿಜಯೇಂದ್ರನ ಬೆಂಗಳೂರಿನ ಬೇನಾಮಿ ಆಸ್ತಿಗಳ ದಾಖಲೆ ಸಿಕ್ಕವಂತೆ.

ಹುಣಸೂರು ರಸ್ತೆಯಲ್ಲಿ ಹಿನಕಲ್ ಸಮೀಪ ಸ್ವಾಮಿ ಬೇನಾಮಿಯಾಗಿ ಖರೀದಿಸಿದ್ದ ಹತ್ತು ಎಕರೆಯ ಒಂದು ಪ್ಲಾಟು, ಕುವೆಂಪುನಗರದಲ್ಲಿ ಜಿಪಿಎ ಮಾಡಿಸಿಕೊಂಡಿದ್ದ ಎರಡು 60x40 ಸೈಟಿನ ದಾಖಲೆಗಳು ಮತ್ತು ನಂಜುನಗೂಡು ರಸ್ತೆಯಲ್ಲಿ ಅಣ್ಣನ ಪತ್ನಿಯ ಹೆಸರಲ್ಲಿ ಖರೀದಿಸಿದ್ದ ಹದಿನೈದು ಎಕರೆಯ ದಾಖಲೆಗಳನ್ನೂ ಐಟಿ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರಂತೆ.


ಯಾವ ವಕೀಲರನ್ನಿಟ್ಟರೂ ಇಷ್ಟೆಲ್ಲಾ ಆಸ್ತಿಯನ್ನು ತಾನು ಹೇಗೆ ಸಂಪಾದಿಸಿದೆನೆಂಬ ಬಗ್ಗೆ ಸ್ವಾಮಿಯ ಬಳಿ ಸಮರ್ಥನೆ ಸಾಧ್ಯವಿಲ್ಲ. ಒಂದೇ ಪ್ರಶ್ನೆಯೆಂದರೆ ಇಷ್ಟೆಲ್ಲಾ ಸೊತ್ತು ಆತನ ವೈಯಕ್ತಿಕ ದುಡಿಮೆಯ ಲೆಕ್ಕದ್ದಾ ಅಥವಾ ಮುಖ್ಯಮಂತ್ರಿ ಯಡ್ಡಿಯ ಪರವಾಗಿ ಅವರ ಪಾಪದ ಸೊತ್ತನ್ನು ಜೋಪಾನ ಮಾಡಲು ತನ್ನ ಸಂಬಂಧಿಕರನ್ನು ಬಳಸಿಕೊಂಡಿದ್ದನಾ?



ಸ್ವಾಮಿ ಖರೀದಿಸಿದ ವೈನ್‌ಸ್ಟೋರು

ಆರು ಕೋಟಿಯ ಸೈಟು

ಮುಂದೆ ಯಡ್ಡಿ ಉಪಮುಖ್ಯಮಂತ್ರಿಯಾಗಿ, ಮುಖ್ಯಮಂತ್ರಿಯೂ ಆದ ಮೇಲೆ ಸ್ವಾಮಿಯ ನಸೀಬು ರಾತ್ರೋರಾತ್ರಿ ಖುಲಾಯಿಸಿತು. ಆತನಕ ಯಡ್ಡಿ ಮನೆ ಬಿಟ್ಟರೆ ಉಳಿದುಕೊಳ್ಳಲು ಪುಟ್ಟ ಬಾಡಿಗೆ ಮನೆ ಕೂಡ ಗತಿಯಿಲ್ಲದ ಸ್ವಾಮಿ ಪ್ರತಿಷ್ಠಿತ ಸ್ಯಾಂಕಿ ರಸ್ತೆಯ ಆರ್.ವಿ. ಲೇಔಟಿನಲ್ಲಿ sovereign palace ಎಂಬ ಅಪಾರ್ಟ್‌ಮೆಂಟಿನಲ್ಲೊಂದು ಎರಡು ಕೋಟಿಯ ಫ್ಲಾಟು ಖರೀದಿಸಿದ. ಪ್ಯಾಲೇಸ್ ಗುಟ್ಟಳ್ಳಿಯ ನಂದಿನಿ ಡೀಲಕ್ಸ್ ಹೋಟೆಲಿನ ಹಿಂಭಾಗದಲ್ಲೇ ಇರುವ ಹನ್ನೆರಡನೇ ನಂಬರ್ ಫ್ಲಾಟು, ಬರುಬರುತ್ತ ಮುಖ್ಯಮಂತ್ರಿಯ ಬಹುತೇಕ ಡೀಲುಗಳ ಖಾರಸ್ಥಾನವಾಯಿತು.



ಇಲ್ಲಿಂದಲೇ ಡೀನೋಟಿಫಿಕೇಷನ್ ದಂಧೆಗೆ ಸ್ವಾಮಿ ಕೈಯಿಟ್ಟ. ಬಿಡಿಎನ ಉನ್ನತ ಅಧಿಕಾರಿಗಳು, ಕೆಐಎಡಿಬಿಯ ಮುಖ್ಯಸ್ಥರು, ಹಿರಿಯ ಪೊಲೀಸ್ ಮತ್ತು ಐಎಎಸ್ ಅಧಿಕಾರಿಗಳನ್ನೆಲ್ಲ ಇಲ್ಲಿಗೇ ಕರೆಸಿಕೊಂಡು ಫೈಲು ರೆಡಿ ಮಾಡಿಸುತ್ತಿದ್ದ. ಬೇನಾಮಿಯಾಗಿ ಎಚ್‌ಎಸ್‌ಆರ್ ಲೇಔಟಿನಲ್ಲೊಂದು ಸೈಟು ಮಂಜೂರು ಮಾಡಿಸಿಕೊಂಡ. ಡಾಲರ್ಸ್ ಕಾಲನಿಯ 3ನೇ ಮೇನ್‌ನಲ್ಲಿ ಲೆಹರ್‌ಸಿಂಗ್‌ನ ಮನೆ ಪಕ್ಕದಲ್ಲೇ ಆರು ಕೋಟಿಯ ದೈತ್ಯ ನಿವೇಶನವೊಂದನ್ನು ಖರೀದಿಸಿದ.



ಹೋಟೆಲ್ ವೈಭವ

ಇತ್ತ ಮೈಸೂರು ಸುತ್ತಮುತ್ತ ಸಿದ್ಧಲಿಂಗನ ಹಾವಳಿ ಬರುಬರುತ್ತ ಯಾವ ಪರಿ ಹೆಚ್ಚತೆಂದರೆ, ಒಂದಾನೊಂದು ಕಾಲಕ್ಕೆ ಗಂಟೆ ಕದ್ದು ಸಿಕ್ಕಿಬಿದ್ದಿದ್ದ ಸಿದ್ಧಲಿಂಗನನ್ನು ಒದ್ದೋಡಿಸಿದ ಸುತ್ತೂರು ಸ್ವಾಮಿಗಳೇ ಆತನನ್ನು ತಮ್ಮ ಮಠಕ್ಕೆ ಸ್ವಾಗತಿಸಲಾರಂಭಿಸಿದರು. ಕರಂದ್ಲಾಜೆ ಮೈಸೂರು ಉಸ್ತುವಾರಿ ಮಂತ್ರಿಯಾದರೆ ಥೇಲಾ ಸ್ವಾಮಿ ಆಕೆಯನ್ನೂ ಮೀರಿಸಿ ಮೂಡಾ ಸೈಟು ದಂಧೆಗೆ ಕೈಯಿಟ್ಟ. ಬೇಕಾಬಿಟ್ಟಿ ಟ್ರಾನ್ಸ್‌ಫರ್ ಮಾಡಿಸಿದ. ಮೈಸೂರಿನಲ್ಲೂ ಬೇಕಾಬಿಟ್ಟಿ ಡೀನೋಟಿಫಿಕೇಷನ್ ದಂಧೆ ಶುರು ಹಚ್ಚಿಕೊಂಡ.

ಜಂಗಮನಾದರೂ ಬಾರು-ವೈನ್ ಸ್ಟೋರು!

ಒಂದಾನೊಂದು ಕಾಲಕ್ಕೆ ಒಪ್ಪತ್ತು ಊಟಕ್ಕೂ ತಟ್ಟಾಡುತ್ತಿದ್ದ ಸಿದ್ಧಲಿಂಗಸ್ವಾಮಿ ಸದ್ಯ ಯಾಪಾಟಿ ಕೊಬ್ಬಿದ್ದಾನೆಂದರೆ; ಮೈಸೂರಿನ ಜೇಪಿನಗರದಲ್ಲಿ ಎಮ್ಮೆಲ್ಸಿ ಮಲ್ಲಿಕಾರ್ಜುನಪ್ಪನವರ ಮನೆ ಪಕ್ಕದಲ್ಲೇ ಎರಡೂವರೆ ಕೋಟಿಯ ಬಂಗಲೆ ಖರೀದಿಸಿದ್ದಾನೆ. ಜಾತಿಯಲ್ಲಿ ಜಂಗಮನಾದರೂ ಆದೆಂಥಾ ದುರ್ಬುದ್ಧಿಯೆಂದರೆ ಮೈಸೂರಿನ ಆರ್‌ಎಂಸಿ ಎದುರಿಗಿದ್ದ ವೈಭವ್ ಬಾರ್ ಅಂಡ್ ರೆಸ್ಟೋರೆಂಟನ್ನು ಇತ್ತೀಚೆಗಷ್ಟೇ 70 ಲಕ್ಷ ಕೊಟ್ಟು ಖರೀದಿಸಿದ್ದಾನೆ.

ಇದಿಷ್ಟೂ ಸಿದ್ಧಲಿಂಗಸ್ವಾಮಿ ಖರೀದಿಸಿದ ಆಸ್ತಿಪಾಸ್ತಿಗಳ ಸಣ್ಣ ಪಟ್ಟಿಯಷ್ಟೇ. ಯಾರಿಗೂ ಗೊತ್ತೇ ಆಗದ ಹಾಗೆ, ಬೇನಾಮಿಗಳ ಹೆಸರಲ್ಲಿ ಇನ್ನೆಷ್ಟು ಖರೀದಿಸಿದ್ದಾನೋ. ಬೆಂಗಳೂರಿನಲ್ಲಿ ಆತ ಖರೀದಿಸಿದ ಆಸ್ತಿಪಾಸ್ತಿಗಳ ಪಟ್ಟಿ ಇನ್ನೆಷ್ಟಿದೆಯೋ ಬಲ್ಲವರ್‍ಯಾರು? ಒಂದು ಮೂಲದ ಪ್ರಕಾರ ಮೊನ್ನೆ ನಡೆದ ಐಟಿ ರೇಡಿನಲ್ಲಿ ಮುಖ್ಯಮಂತ್ರಿ ಮತ್ತವರ ಕುಟುಂಬದವರಿಗೆ ಸಂಬಂಧಪಟ್ಟ ಒಟ್ಟು 800 ಕೋಟಿ ರೂಪಾಯಿಗಳ ಮೊತ್ತದ ಸಂಪತ್ತಿನ ದಾಖಲೆಗಳು ಸ್ವಾಮಿಯ ಸಂಬಂಧಿಕರ ಮನೆಯಿಂದ ಜಪ್ತಾಗಿದೆ.


ಈ ಪೈಕಿ ಐಟಿ ಅಧಿಕಾರಿಗಳಿಗೆ ಸಿಕ್ಕ ಅತೀ ಮಹತ್ವದ ದಾಖಲೆಯೆಂದರೆ ಇತ್ತೀಚೆಗಷ್ಟೇ ಚೈನಾ ಪ್ರವಾಸಕ್ಕೆ ಹೋಗಿ ಬಂದ ಮುಖ್ಯಮಂತ್ರಿ ಐನೂರು ಕೋಟಿ ಕೊಟ್ಟು ಬೀಜಿಂಗ್‌ನಲ್ಲಿ ಖರೀದಿಸಿದ ಐಷಾರಾಮಿ ಹೋಟೆಲೊಂದಕ್ಕೆ ಸಂಬಂಧಪಟ್ಟ ಕಾಗದಪತ್ರಗಳು!

ಮಿತ್ತಲ್ ಕಂಪೆನಿಗೆ ಬಳ್ಳಾರಿಯ ಸಹಸ್ರಾರು ಎಕರೆ ಅದಿರು ಸಮೃದ್ಧ ಭೂಮಿಯನ್ನು ಬರೆದುಕೊಟ್ಟ ಯಡ್ಡಿಗೆ ಅದೊಂದು ಡೀಲಿನಿಂದ ಲಕ್ಷ್ಮಿ ಮಿತ್ತಲ್ ಮೂಲಕ ಐನೂರು ಕೋಟಿ ಲಂಚ ಹುಟ್ಟುತ್ತದೆಯೆಂದರೆ, ಈ ಐನೂರು ಕೋಟಿಯನ್ನು ಚೀನಾದಲ್ಲಿ ಐಷಾರಾಮಿ ಹೋಟೆಲ್ ಖರೀದಿಸಿಕೊಡುವ ಮೂಲಕ ಮಿತ್ತಲ್ ಖದೀಮರು ಋಣ ತೀರಿಸುತ್ತಾರೆಂದರೆ, ಇಂಥದೊಂದು ಡೀಲಿನ ದಾಖಲೆ ಪತ್ರಗಳನ್ನು ಥೇಲಾ ಸಿದ್ಧಲಿಂಗಸ್ವಾಮಿಯ ಮನೆಯಲ್ಲಿ ಯಡ್ಡಿ ಬಚ್ಚಿಡುತ್ತಾರೆಂದರೆ ನಾಡಿನ ಲೂಟಿಯ ಪ್ರಮಾಣ ಮತ್ತು ರಭಸ ಇನ್ನೆಂಥದ್ದಿರಬೇಡ?

ಪಾಪಿ ಸೊತ್ತು ಯಾವತ್ತಿದ್ದರೂ ಪರರ ಪಾಲೇ. ಛಟ್ಟಿಂಗಿ ಸಿದ್ಧಲಿಂಗಸ್ವಾಮಿಯನ್ನು ಈಪಾಟಿ ಹಚ್ಚಿಕೊಂಡ ತಪ್ಪಿಗೆ ಮುಖ್ಯಮಂತ್ರಿ ದಂಡ ಕಟ್ಟಲೇಬೇಕಲ್ಲವೆ? ●



ಬಿಬಿಎಂಪಿ ಮೇಯರ್ ತಲೆಗೇ ಟೋಪಿ ಇಟ್ಟ ಅರಣ್ಯಾಧಿಕಾರಿ


ಕಾಡುವಂಚಕ ಶಾಂತಕುಮಾರ್

ಬಿಬಿಎಂಪಿ ಅರ್ಥಾತ್ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಎಲ್ಲೆಲ್ಲಿ ಕನ್ನ ಕೊರೆದರೆ ಎಷ್ಟೆಷ್ಟು ರೊಕ್ಕ ಉದುರುತ್ತದೆ ಎಂದು ಲೆಕ್ಕ ಹಾಕಿ ಇನ್ನೂ ಇಳಿಯುವ ಎಂತೆಂಥಾ ಖದೀಮರಿಲ್ಲ?

ಈ ಪೈಕಿ ಕೊಂಚ ಡಿಫರೆಂಟಾಗಿ ಬಿಲ ತೋಡಲು ನಿಂತವನು ಪಾಲಿಕೆಯ ಅರಣ್ಯ ಸಂರಕ್ಷಣಾಧಿಕಾರಿ ಎಸ್.ಎಲ್. ಶಾಂತಕುಮಾರ್. ಫುಟ್‌ಪಾತ್ ಪಕ್ಕ ಸಸಿ ನೆಟ್ಟು ಬೆಂಗಳೂರನ್ನು ಹಸಿರಾಗಿಸುತ್ತೇನೆಂದು ಎಷ್ಟು ದೋಚಬಹುದು, ನೆಟ್ಟ ಸಸಿಗೆ ನೀರು ಹಾಕುವ ನೆಪದಲ್ಲಿ ಹೇಗೆ ಮುಕ್ಕಬಹುದು, ಗಾಳಿ ಮಳೆಗೆ ಬಿದ್ದ ಮರ ಎತ್ತಿ ಸಾಗಿಸುವಲ್ಲಿ, ಸಸಿಗಳ ಖರೀದಿಯಲ್ಲಿ ಮಣ್ಣುಗೊಬ್ಬರದ ಹೆಸರಲ್ಲಿ; ಹೇಗೆ ಕಳ್ಳಬಿಲ್ಲು ಸೃಷ್ಟಿಸಿ, ಪಾಲಿಕೆಯನ್ನೇ ಯಾಮಾರಿಸಿ ಕೋಟಿಕೋಟಿ ಗಳಿಸಬಹುದೆಂದು ಮೊದಲ ಬಾರಿಗೆ ತೋರಿಸಿಕೊಟ್ಟ ಪ್ರಚಂಡನೇ ಬಿಬಿಎಂಪಿ ಕನ್ಸರ್‌ವೇಟರ್ ಆಫ್ ಫಾರೆಸ್ಟ್ ಶಾಂತಕುಮಾರ್!

ಮೇಯರ್ ನಟರಾಜ್ ಆದೇಶ ಈತನಿಗೆ ಕಾಲಕಸ. ವಿರೋಧಿ ನಾಯಕ ಕುರುಬರಹಳ್ಳಿ ನಾಗರಾಜ್ ಅದೆಷ್ಟೇ ಬೊಬ್ಬೆ ಹೊಡೆದರೂ ಲೆಕ್ಕಕ್ಕಿಲ್ಲ. ಬಹುಶಃ ಈ ವರದಿಯನ್ನು ನೋಡಿದನಂತರವೂ ಮೇಯರಾಗಲಿ, ಕಮಿಷನರಾಗಲಿ ಹುಷಾರಾಗದೇ ಹೋದರೆ ಹತ್ತು ಕೋಟಿಯಷ್ಟು ಪಾಲಿಕೆ ದುಡ್ಡು ಪಾಪಿಗಳ ಪಾಲಾಗುವುದಂತೂ ಶತಸ್ಸಿದ್ಧ.

ಅಷ್ಟಕ್ಕೂ ಬಿಬಿಎಂಪಿಯ ಅರಣ್ಯ ಘಟಕದಲ್ಲಿ ಕನ್ಸರ್‌ವೇಟರ್ ಆಫ್ ಫಾರೆಸ್ಟ್ ಹುದ್ದೆಯೇ ಇರಲಿಲ್ಲ. ಅದ್ಯಾವ ಕೈಚಳಕ ಮಾಡಿದನೋ ಗೊತ್ತಿಲ್ಲ ಕೇವಲ ಒಂದು ವರ್ಷದ ಮೇರೆಗೆ ಇಂಥದೊಂದು ವಿಶಿಷ್ಟ ಹುದ್ದೆಯನ್ನು ಸೃಷ್ಟಿ ಮಾಡಿ ಆ ಒಂದು ವರ್ಷ ಪೂರ್ತಿ ತಾನೇ ಇರುವ ಹಾಗೆ ಆದೇಶ ಮಾಡಿಸಿಕೊಂಡು ಪಾಲಿಕೆಗೆ ವಕ್ಕರಿಸಿದವನು ಶಾಂತಕುಮಾರ್. ಈ ನವೆಂಬರ್ ಬಂತೆಂದರೆ ಆತ ಪಾಲಿಕೆಗೆ ಕಾಲಿಟ್ಟು ವರ್ಷ ತುಂಬುತ್ತದೆ. ಹೋಗುವ ಮುನ್ನ ಹತ್ತು ಕೋಟಿಯ ಗಂಟು ಹೊತ್ತೇ ನಿಕಾಲಿಯಾಗಲು ದಿನಕ್ಕೊಂದು ಕರಾಮತ್ತು. ಶುರುಹಚ್ಚಿಕೊಂಡ ರೀತಿಗೆ ಎಂಥಾ ಕಿಲಾಡಿಯಾದರೂ ತಲೆ ಬಾಗಲೇಬೇಕು.

ಗಿಡವೊಂದಕ್ಕೆ ನೀರು ಹಾಕಲು ದಿನವೊಂದಕ್ಕೆ ಪಾಲಿಕೆಗೆ ತಗಲುವ ವೆಚ್ಚ 10 ರೂಪಾಯಿ. ಈ ಸಲವಂತೂ ಏಪ್ರಿಲ್, ಮೇ ತಿಂಗಳಲ್ಲಿ ಬೆಂಗಳೂರಿನಲ್ಲಿ ಸಿಕ್ಕಾಪಟ್ಟೆ ಮಳೆಯಿತ್ತು. ಇದನ್ನೆಲ್ಲ ಲೆಕ್ಕ ಹಾಕಿಯೇ ಮೇಯರ್ ಎಸ್.ಕೆ. ನಟರಾಜ್ ಮುಂಗಾರು ಮಳೆ ಈ ಸಾರಿ ಅವಧಿಗೆ ಮುನ್ನವೇ ಶುರುವಾಗಿರುವುದರಿಂದ ಅನಗತ್ಯವಾಗಿ ಗಿಡಗಳಿಗೆ ನೀರುಣಿಸುವ ಗುತ್ತಿಗೆ ನೀಡಕೂಡದೆಂದು 2010 ರ ಮೇ 26 ರಂದು ಲಿಖಿತ ಆದೇಶ ನೀಡಿದ್ದಾರೆ.

ಎರಡೋ ಮೂರೋ ವರ್ಷದ ಹಿಂದೆ ನೆಟ್ಟ, ಬೇರು ಬಿಟ್ಟ ಗಿಡಗಳಿಗೆ ನೀರುಣಿಸುವುದೆಂದರೆ ಅದು ಕೋಟಿ ಮೊತ್ತದ ಕಾಂಟ್ರಾಕ್ಟ್ ವ್ಯವಹಾರ. ಏಪ್ರಿಲ್-ಮೇ ತಿಂಗಳಲ್ಲಿ ಬೆಂಗಳೂರಿನಲ್ಲಿ ದಿನಬಿಟ್ಟು ದಿನ ಮಳೆಯಾಗಿದ್ದು ಗೊತ್ತಿದ್ದೂ ಮೇಯರ್ ಸ್ಪಷ್ಟ ಆದೇಶವಿದ್ದಾಗ್ಯೂ ಶಾಂತಕುಮಾರ್ ಪಾಲಿಕೆಯ ಮುಖ್ಯ ಲೆಕ್ಕಾಧಿಕಾರಿ ನಟರಾಜ್ ಜೊತೆ ಶಾಮೀಲಾಗಿ ಒಂದೂವರೆ ಕೋಟಿಯ ಬೋಗಸ್ ಬಿಲ್ ಜಡಿದಿದ್ದ!

ಇದು ಶಾಂತಕುಮಾರ್‌ನ ಪಾಖಂಡಿ ಬುದ್ಧಿಗೆ ಸಣ್ಣ ಸ್ಯಾಂಪಲ್ಲಷ್ಟೇ. ಇದಾದ ನಂತರ ಒಂದೇ ಏಟಿಗೆ 10 ಕೋಟಿ ಹೊಡೆಯುವ ಮಾಸ್ಟರ್ ಪ್ಲಾನ್ ಒಂದನ್ನು ರೂಪಿಸಿದ. ಬೆಂಗಳೂರು ನಗರದಲ್ಲಿ ಐದು ಲಕ್ಷ ಸಸಿ ನೆಟ್ಟು ಹಸಿರು ಕ್ರಾಂತಿ ಹುಟ್ಟು ಹಾಕುತ್ತೇವೆಂದು ಮುಖ್ಯಮಂತ್ರಿ ಯಡ್ಡಿ ಮತ್ತು ಮೇಯರ್ ನಟರಾಜ್ ಪದೇಪದೇ ಡೈಲಾಗ್ ಹೊಡೆದರಲ್ಲ; ಅದಕ್ಕೆ ಮೂಲ ಪುರುಷನಂತಿದ್ದದ್ದೇ ಈತ. ತಲೆಬುಡವೇ ಗೊತ್ತಿಲ್ಲದೇ ಐದು ಲಕ್ಷ ಸಸಿ ನೆಡುತ್ತೇವೆಂದು ಈತ ಹೇಳಿಕೊಟ್ಟ ಗಿಣಿ ಪಾಠವನ್ನೇ ಮುಖ್ಯಮಂತ್ರಿಗಳು ಭಾಷಣ ಬಿಗಿದಿದ್ದರು.

ಅದನ್ನೇ 'ಅಸ್ತ್ರ' ಮಾಡಿಕೊಂಡ ಶಾಂತಕುಮಾರ್ ಅಲ್ಲಿಇಲ್ಲಿ ಒಂದಷ್ಟು ಸಸಿಗಳನ್ನು ನೆಡಿಸಿದಂತೆ ಮಾಡಿ ಸಸಿಯೊಂದಕ್ಕೆ 100 ರೂಪಾಯಿಯಂತೆ ಲೆಕ್ಕ ಬರೆದು 3 ಲಕ್ಷ ಸಸಿಗಳನ್ನು ಖರೀದಿಸಲು ಟೆಂಟರ್ ಕರೆದೇ ಬಿಟ್ಟ.

ಹಕೀಕತ್ತೇನೆಂದರೆ ಕರ್ನಾಟಕದ ಅರಣ್ಯ ಇಲಾಖೆಯೇ 20 ರೂಪಾಯಿಗೆ ಸಸಿಯೊಂದನ್ನು ಮಾರುತ್ತದೆ. ಆದರೆ ದುಡ್ಡು ದೋಚಬೇಕಲ್ಲ, ಅದಕ್ಕೆ ತಮಿಳುನಾಡು ಮತ್ತು ಆಂಧ್ರದಿಂದ ತಲಾ ಸಸಿಯೊಂದಕ್ಕೆ ನೂರು ರೂಪಾಯಿಯಂತೆ ಖರೀದಿಸಲು ಕಪಟ ಟೆಂಡರ್ ನಾಟಕ ಆರಂಭಿಸಿದ.

ಕರ್ನಾಟಕದ ಅರಣ್ಯ ಇಲಾಖೆಯಿಂದಲೇ 20 ರೂ.ನಂತೆ ಒಂದಷ್ಟು ಸಸಿ ಖರೀದಿಸಿ ಅದನ್ನೇ ಎಲ್ಲೆಂದರಲ್ಲಿ ನೆಟ್ಟು ಆಂಧ್ರ-ತಮಿಳುನಾಡಿನ ನರ್ಸರಿಗಳಿಂದ ತಲಾ ನೂರು ರೂಪಾಯಿಯಂತೆ ಮೂರು ಲಕ್ಷ ಸಸಿಗಳನ್ನು ಖರೀದಿಸಿದಂತೆ ಮತ್ತೊಂದು ರೌಂಡ್ ಬೋಗಸ್ ಬಿಲ್ ಜಡಿದ. ಇಲ್ಲೂ ಕೂಡ ಲೆಕ್ಕಾಧಿಕಾರಿ ನಟರಾಜ್ ಕೈಜೋಡಿಸಿದ್ದರಿಂದಾಗಿ




ಬೋಗಸ್ ಟೆಂಡರ್ ಮತ್ತು ಬೋಗಸ್ ಕಾಮಗಾರಿಗೆ ಕೋಡ್ ಪ್ರಾಪ್ತಿಯಾಗಿತ್ತು. ಇದನ್ನು ಸೂಕ್ಷ್ಮವಾಗೇ ಗಮನಿಸಿದ ಮೇಯರ್ ಇಡೀ ಟೆಂಡರ್ ಪ್ರಕ್ರಿಯೆಯನ್ನೇ ರದ್ದು ಮಾಡಿ ಅರಣ್ಯ ಇಲಾಖೆಯಿಂದಲೇ ಸಸಿಗಳನ್ನು ಖರೀದಿಸುವಂತೆ ಆದೇಶಿಸಿದ್ದರು. ಹಾಗಿದ್ದೂ ಈಗ ಐದು ಲಕ್ಷದಷ್ಟು ಸಸಿ ನೆಡಿಸಿದ್ದೇನೆಂದು ಶಾಂತಕುಮಾರ್ ಬಿಲ್ ಹಾಕಿದ್ದಾನೆ. ತನ್ನ ಛೇಲಾಗಳು, ಬೇನಾಮಿಗಳ ಹೆಸರಲ್ಲಿ ಕೋಟಿ ಲೆಕ್ಕದ ಬಿಲ್ ಬರೆದು ಕೊಟ್ಟಿದ್ದಾನೆ.

ಇಲ್ಲಿ ಸಸಿಯೊಂದಕ್ಕೆ 100 ರೂಪಾಯಿಯಾದರೆ, ಅದಕ್ಕೆ ಗುಣಿ ತೋಡಿ, ನೆಟ್ಟು, ಟ್ರೀಗಾರ್ಡ್ ಹಾಕಿ ಸಂರಕ್ಷಿಸಲು 380 ರೂಪಾಯಿ ಖರ್ಚು ಬರುತ್ತದೆ. ಇಂಥ 4 ಲಕ್ಷ ಸಸಿಗಳಿಗೆಂದು ಬಿಲ್ ಬರೆದರೂ ಅದು 16 ಕೋಟಿಯಾಗುತ್ತದೆ. ಪಾಲಿಕೆಯ ನರ್ಸರಿ, ಅರಣ್ಯ ಇಲಾಖೆಯಿಂದ ತಂದು ತೋರಿಕೆಗೆಂದು ಕನಿಷ್ಠ 1 ಲಕ್ಷ ಸಸಿಗಳನ್ನೇ ನೆಟ್ಟರೂ ಉಳಿಕೆ ಮೂರು ಲಕ್ಷ ಸಸಿಗಳ ಕಳ್ಳ ಲೆಕ್ಕದ ಮೊತ್ತವೇ 12 ಕೋಟಿಯಷ್ಟಾಗುತ್ತದೆ. ಈ ಪೈಕಿ ಲೆಕ್ಕಾಧಿಕಾರಿಗೆ, ಬೇನಾಮಿ ಕಾಂಟ್ರಾಕ್ಟರಿಗೆಂದು 2 ಕೋಟಿ ಹೋದರೂ 10 ಕೋಟಿಯಷ್ಟು ಬೋಗಸ್ ಬಿಲ್ಲಿನ ದುಡ್ಡು ಅರಣ್ಯ ಸಂರಕ್ಷಣಾಧಿಕಾರಿ ಶಾಂತಕುಮಾರ್‌ನ ಕೈ ಸೇರುತ್ತದೆ.



ಭರತ್‌ಲಾಲ್‌ಮೀನಾ

ಇದೆಲ್ಲ ಗೊತ್ತಿದ್ದೇ 30 ಲಕ್ಷ ಸಸಿಗಳಿಗೆಂದು 2010 ರ ಜನವರಿ ಮತ್ತು ಜೂನ್‌ನಲ್ಲಿ ಕರೆದಿದ್ದ ಟೆಂಡರ್‌ಗಳನ್ನು ಮೇಯರ್ ನಟರಾಜ್ ರದ್ದು ಮಾಡಿದ್ದರು. ಸ್ವತಃ ಮೇಯರ್‌ರೇ ಆದೇಶಿಸಿದ ನಂತರವೂ ಇನ್ನೆಲ್ಲೆಲ್ಲಿಂದಲೋ ಸಸಿಗಳನ್ನು ಖರೀದಿಸಿದಂತೆ 4 ಲಕ್ಷಕ್ಕೂ ಅಧಿಕ ಸಸಿಗಳನ್ನು ನೆಟ್ಟಂತೆ ಕಳ್ಳ ಬಿಲ್ಲು ಬರೆದ ಶಾಂತಕುಮಾರ್ ಇನ್ನೆಂಥಾ

> ಒಂದೆಡೆ ಬೇಕಾಬಿಟ್ಟಿ ಕಲ್ಲು ಕ್ವಾರಿಗಳಿಗೆ ಪರವಾನಗಿ ಕೊಟ್ಟು ಬೆಂಗಳೂರು ಸುತ್ತಲ ಅಳಿದುಳಿದ ಅರಣ್ಯಕ್ಕೇ ಕೊಳ್ಳಿಯಿಟ್ಟ ಶಾಂತಕುಮಾರ್ ಮತ್ತೊಂದೆಡೆ ಲಾರ್ಸನ್ ಅಂಡ್ ಟೂಬ್ರೋ ಕಂಪೆನಿಯ ಹೊಲಸು ತಿಂದು ದೇವನಹಳ್ಳಿ ಏರ್‌ಪೋರ್ಟ್‌ನ ಅರಣ್ಯ ಭೂಮಿ ಕಬಳಿಕೆಯಲ್ಲೂ ಪಾಲುದಾರನಾಗಿದ್ದ. ಈ ಎರಡೂ ಹಗಲುದರೋಡೆಗಳಲ್ಲಿ ಇವತ್ತಿಗೂ ಈತನ ವಿರುದ್ಧ ಇಲಾಖಾ ತನಿಖೆ ನಡೆಯುತ್ತಿದೆ. ಅದ್ಯಾವತ್ತು ಜೈಲುಪಾಲಾಗುತ್ತಾನೋ. ಇಂಥವನನ್ನು ಪಾಲಿಕೆಗೆ ತಂದು ಪುಣ್ಯಾತ್ಮನಾದರೂ ಇನ್ನೆಂಥವನಿರಬೇಡ?


ನಟರಾಜ್ ಹೊರಡಿಸಿದ ಆದೇಶಪತ್ರ

ಪಾಖಂಡಿಯಿರಬೇಡ? ನಿಜಕ್ಕೂ ಆ ಮೊತ್ತದ ಸ... ನೆಟ್ಟಿದ್ದಾರಾ? ಎಲ್ಲೆಲ್ಲಿ ನೆಟ್ಟಿದ್ದಾರೆ? ಇತ್ಯಾದಿ ಲೆಕ್ಕ ಹಾ... ದೊಡ್ಡ ತಲೆನೋವಾಗಿರುವಾಗ ಈ ಬಗ್ಗೆ ತನಿಖೆ ಮಾ...ರ್‍ಯಾರು?


ನಟರಾಜ್

ಇಷ್ಟಲ್ಲದೇ ಮಳೆ ಗಾಳಿಗೆ ... ಬಿದ್ದ ಮರ ಮತ್ತು ಕೊಂಬೆಗಳನ್ನು ... ಬೇಕಲ್ಲ-ಅದಕ್ಕೆಂದೇ ದಿನವೊಂದಕ್ಕೆ ... ರೂಪಾಯಿಗಳ ಬಿಲ್ಲು ಜಡಿಯಲು ... ಅನುಮೋದನೆ ಪಡೆದಿದ್ದಾನೆ. ಇದಿ... ಕೆಯ ಇತಿಹಾಸದಲ್ಲೇ ಗಾಳಿ... ಮುರಿದು ಬಿದ್ದ ಮರಕೊಂಬೆ ... ಸಾಗಿಸಲು ದಿನವೊಂದಕ್ಕೆ ಸರಾಸ... ಸಾವಿರ ರೂಪಾಯಿಗಿಂತ ಅಧಿಕ... ವಾಗಿಲ್ಲ. ಇದಕ್ಕೊಂದು ಬಹಿರಂಗ ... ಕೂಡ ನಡೆದಿಲ್ಲ. ಹಾಗಿದ್ದೂ ಬಿ... ಸಾಗಿಸಲು ಪ್ರತಿನಿತ್ಯ 5 ಲಕ್ಷದಷ್ಟು ... ಬರೆಯಲು ಬಜೆಟ್ ಅನು... ಕೊಡುತ್ತಾರೆಂದರೆ ಪಾಲಿಕೆ ಬೊಕ್ಕಸಕ್ಕೆ ಇದಕ್ಕಿಂತ ಕ...

ಅಷ್ಟಕ್ಕೂ ಈತನ ಹಿನ್ನೆಲೆ ಮತ್ತು ಮರ್ಮ... ಎಂಥದ್ದು? ಪಾಲಿಕೆಗೆ ಬರುವುದಕ್ಕೂ ಮುನ್ನ ಬೆಂ... ಗ್ರಾಮಾಂತರದ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದ... ಕುಮಾರ್ ಎಂಥಾ ಅನಾಹುತಕ್ಕೆ ಕಾರಣ ನಾದ... ಕನಕಪುರ, ಆನೇಕಲ್, ಬನ್ನೇರು ಘಟ್ಟ, ರಾಮ... ಅರಣ್ಯ ಭೂಮಿಯಲ್ಲಿ ಬೇಕಾಬಿಟ್ಟಿ ಕಲ್ಲುಕ್ವಾರಿಗಳಿಗೆ ಅ... ಕೊಟ್ಟಿದ್ದ. ಹಿರಿಯ ಅರಣ್ಯಾಧಿಕಾರಿ ಯು.ವಿ... ಈತನ ವಿರುದ್ಧ ತನಿಖೆಗೆ ಆದೇಶಿಸಿದರೆ ಒಟ್ಟು ನೂ... ಕಲ್ಲಿನ ಕ್ವಾರಿಗಳಿಗೆ ಈತ ಅನುಮತಿ ಕೊಟ್ಟ... ಬಯಲಾಗಿತ್ತು. ಈ ಒಂದೇ ಕಾರಣಕ್ಕೆ ಶಾಂತಕ... ಯಾವತ್ತೋ ಜೈಲುಪಾಲಾಗಬೇಕಾಗಿತ್ತು.

ಆದರೆ ಹೊಡೆದ ದುಡ್ಡಿತ್ತಲ್ಲ, ... ಸುರಿದು ತನಿಖೆಯ ದಿಕ್ಕು... ಆನಂತರ ಮತ್ತೊಂದು ಡಕಾ... ಕೈಯಿಟ್ಟು ಬೆಂಗಳೂರು ಅಂತರರಾ... ವಿಮಾನ ನಿಲ್ದಾಣಕ್ಕೆಂದು ದೇವನ... 1460 ಎಕರೆ ಅರಣ್ಯಭೂಮಿ... ಹಾರದ ದುಡ್ಡನ್ನೇ ಮುಂಡಾಯಿ... ಅಂತರರಾಷ್ಟ್ರೀಯ ವಿಮಾನ ನಿಲ್ದಾ... ಸರ್ಕಾರ 1460 ಎಕರೆ ಅರಣ್ಯ... ಯನ್ನು ಬಿಟ್ಟುಕೊಟ್ಟಿತ್ತು. ಇದಕ್ಕೆ ... ವಾಗಿ ಏರ್‌ಪೋರ್ಟ್ ಕಂಪೆನಿ ... ಇಲಾಖೆಗೆ 42 ಕೋಟಿ ರೂಪಾ... ನೀಡಬೇಕಿತ್ತು. ಆದರೆ ಶಾಂತಕುಮಾರ್ ಪರಿಹಾರ ವ... ಮರೆಮಾಚಿಬಿಟ್ಟ. ಕೇವಲ 6.77 ಕೋಟಿಯ ಗಿಡ... ಶುಲ್ಕವನ್ನಷ್ಟೇ ಕಟ್ಟಿಸಿಕೊಂಡು 42 ಕೋಟಿ ರೂಪಾ... ವಂಚನೆಗೆ ಪಾಲುದಾರನಾದ.

ಒಂದೆಡೆ ಬೇಕಾಬಿಟ್ಟಿ ಕಲ್ಲು ಕ್ವಾರಿಗಳಿಗೆ ಪ... ಕೊಟ್ಟು ಬೆಂಗಳೂರು ಸುತ್ತಲ ಅಳಿದುಳಿದ ಅ... ಕೊಳ್ಳಿಯಿಟ್ಟ ಶಾಂತಕುಮಾರ್ ಮತ್ತೊಂದೆಡೆ ... ಅಂಡ್ ಟೂಬ್ರೋ ಕಂಪೆನಿಯ ಹೊಲಸು ... ದೇವನಹಳ್ಳಿ ಏರ್‌ಪೋರ್ಟ್‌ನ ಅರಣ್ಯ ಭೂಮಿ ... ಯಲ್ಲೂ ಪಾಲುದಾರನಾಗಿದ್ದ. ಈ ಎರಡೂ ಹಗಲು... ಗಳಲ್ಲಿ ಇವತ್ತಿಗೂ ಈತನ ವಿರುದ್ಧ ಇಲಾಖಾ ... ನಡೆಯುತ್ತಿದೆ. ಅದ್ಯಾವತ್ತು ಜೈಲುಪಾಲಾಗುತ್ತಾನೋ ... ವನನ್ನು ಪಾಲಿಕೆಗೆ ತಂದ ಪುಣ್ಯಾತ್ಮನಾ... ಇನ್ನೆಂಥವನಿರಬೇಡ?

ಮೇಯರ್ ನಟರಾಜ್ ಈಗಲಾದರೂ ... ಕೊಳ್ಳಲಿ. ನಿಜಕ್ಕೂ ಬಿಬಿಎಂಪಿ ವ್ಯಾಪ್ತಿಯಲ್ಲಿ ... ಲಕ್ಷಕ್ಕೂ ಅಧಿಕ ಸಸಿ ನೆಟ್ಟಿದ್ದಾರಾ? ನೆಟ್ಟವರ್‍ಯಾರು? ... ಕಳ್ಳಬಿಲ್ಲು ಯಾವುದು ಮೋಸದ ಟೆಂಡರ್ ... ಇನ್ನಾದರೂ ತನಿಖೆಗೆ ಆದೇಶಿಸಲಿ.

• ರಾ. ಸೋಮ...

ಬಡವರ ಸುಲಿಗೆ, ಬಲ್ಲಿದರ ಬ್ಯಾಂಕಿಂಗ್!


▶▶ 2

ನಿವಾರಕವಲ್ಲ ಎಂಬುದಕ್ಕೆ SKS ಎಂಬ ಬ್ಲೇಡ್ ಕಂಪನಿ ಇತಿಹಾಸವೇ ಒಂದು ದೊಡ್ಡ ನಿದರ್ಶನ. ಹೋದ ಜುಲೈನಲ್ಲಿ ಈ ಕಂಪನಿ ಸಾರ್ವಜನಿಕರಿಗೂ ತನ್ನ ಶೇರುಗಳನ್ನು ಬಿಡುಗಡೆ ಮಾಡಿತ್ತು. ಸಾಮಾನ್ಯವಾಗಿ ಲಾಭದಾಯಕ ಕಂಪನಿಗಳು ಮಾತ್ರ ಸಾರ್ವಜನಿಕ ಶೇರುಗಳನ್ನು ಬಿಡುಗಡೆ ಮಾಡುತ್ತವೆ. ಟಾಟಾ, ರಿಲಯನ್ಸ್ ಇತ್ಯಾದಿಗಳು. ಆದರೆ ಈ ಕಂಪನಿಯ ಶೇರುಗಳೂ ಸಹ ಅತ್ಯಂತ ಕಡಿಮೆ ಅವಧಿಯಲ್ಲಿ ಅತಿಹೆಚ್ಚು ದರಕ್ಕೆ ಬಿಕರಿಯಾಗಿ ಕಂಪನಿಗೆ 1,600 ಕೋಟಿ ರೂಪಾಯಿಯಷ್ಟು ಸಾರ್ವಜನಿಕ ಬಂಡವಾಳವನ್ನು ತಂದುಕೊಟ್ಟವು.

ಅಂದರೆ ಮೈಕ್ರೊಫೈನಾನ್ಸ್ ದಂಧೆ ಇತರ ದಂಧೆಗಳಿಗಿಂತ ಅಥವಾ ಅಷ್ಟೇ ಲಾಭದಾಯಕ ಎಂದಾಯಿತಲ್ಲವೇ? ಬೇರೇ ಕಂಪನಿಗಳಿಗೆ ತಮ್ಮ ಸರಕನ್ನು ಅತಿ ಹೆಚ್ಚಿನ ದರಕ್ಕೆ ಮಾರಿದರೆ ಮಾತ್ರ ಅತಿಹೆಚ್ಚು ಲಾಭ ಸಿಗುತ್ತದೆ. ಕಿರುಸಾಲ ಕಂಪನಿಗಳಿಗೆ ಲಾಭ ಎಲ್ಲಿಂದ ಬರುತ್ತದೆ? ಅತಿ ಹೆಚ್ಚು ಬಡ್ಡಿ ದರಕ್ಕೆ ಸಾಲವನ್ನು ಮಾರಿಕೊಂಡರೆ ಮಾತ್ರ ಅತಿ ಹೆಚ್ಚು ಲಾಭ ಸಿಗುತ್ತದೆ. ಇದೇ ಈ ಮೈಕ್ರೊ ಫೈನಾನ್ಸ್ ಕಂಪನಿಗಳ ಅಸಲಿ ಗುಟ್ಟು. ಇಂಥಾ ಬ್ಲೇಡ್ ಕಂಪನಿಯಾದ SKS ನಲ್ಲಿ ವಿದೇಶಿ ಬಂಡವಾಳ ಹೂಡಿಕೆಯೂ ಇದೆ. ಅಷ್ಟು ಮಾತ್ರವಲ್ಲ, ಯಾವಾಗಲೂ ಉದ್ದಿಮೆಪತಿಗಳಲ್ಲೇ ಅತ್ಯಂತ ನ್ಯಾಯ ನಿಷ್ಠೂರ, ಆದರ್ಶವಾದಿ ಎಂದೆಲ್ಲಾ ಹೆಸರು ಮಾಡಿರುವ ಇನ್ಫೋಸಿಸ್ ನಾರಾಯಣಮೂರ್ತಿಗಳ 30 ಕೋಟಿಗೂ ಹೆಚ್ಚಿನ ಬಂಡವಾಳವಿದೆ!!!

ಬಂಡವಾಳಶಾಹಿ ಎಂದರೆ ಉಚ್ಚೆಯಲ್ಲಿ ಮೀನು ಹಿಡಿಯುವ ದಂಧೆ ಎನ್ನುತ್ತಾರೆ. ಈ ಮೈಕ್ರೋ ಫೈನಾನ್ಸ್ ದಂಧೆ ಅದಕ್ಕಿಂತ ಒಂದು ಹೆಜ್ಜೆ ಮುಂದು. ಬೆಂದು ಬಸವಳಿದಿರುವ ಬಡವರ ಮೂಳೆ ಚಕ್ಕಳವನ್ನು ಕೇಜಿ ಲೆಕ್ಕದಲ್ಲಿ ಕೊಳ್ಳುವ-ಮಾರುವ ದಂಧೆಯಿದು. ಜಾಗತೀಕರಣ, ಉದಾರೀಕರಣದಿಂದ ಜನರಿಗೆ ಅನುಕೂಲವೇ ಆಗಿದೆ ಎನ್ನುವ ಪಂಡಿತರೇ ಈ ಮೈಕ್ರೊಫೈನಾನ್ಸ್ ಕಂಪನಿಗಳ ಕಾಟ ತಡೆಯಲಾಗದೆ ಆತ್ಮಹತ್ಯೆ ಮಾಡಿಕೊಂಡ ಕೋಲಾರದ ಸೈಯದ್ ಜಮೀರ್ ಖಾನ್ ಮನೆಗೆ ಒಮ್ಮೆ ಹೋಗಿ ಬನ್ನಿ.

ಲೆಕ್ಕಾಚಾರ ಹಾಕಿಯೇ ಪೇರಿಕಿತ್ತ ಅಶ್ವತ್ಥ್!



ಬಿಜೆಪಿ ಮಂದಿ ಮತ್ತೊಮ್ಮೆ ಆಪರೇಷನ್ ಎಂಬ ಅಸಹ್ಯಕ್ಕೆ ಚಾಲನೆ ನೀಡಿದ್ದಾರೆ. ಹಣದಾಸೆ ... ಕೈಲಾಗದ ಪರಿಸ್ಥಿತಿಯಿರುವ ಕಾಂಗ್ರೆಸ್, ಜೆಡಿಎಸ್‌ನ ...ಗಳು ಬಲಿ ಬೀಳುತ್ತಿವೆ. ಇಂಥವರ ಪಟ್ಟಿಯಲ್ಲಿ ...ದಲಿಗನಾಗಿ ಅತೃಪ್ತ ಆತ್ಮದಂತೆ ಅಡ್ಡಾಡುತ್ತಿರುವಾತ ...ಎಸ್ ಶಾಸಕ ಎಂ.ಸಿ. ಅಶ್ವತ್ಥ್.

ಬಿಜೆಪಿಯೊಳಗಿನ ಬಿಕ್ಕಟ್ಟು ಆರಂಭವಾದಾಗಿನಿಂದಲೇ ...ತ್ ಕಾಣೆಯಾಗಿದ್ದ ಅಶ್ವತ್ಥ್ ಅಕ್ಟೋಬರ್ ನಾಲ್ಕರಂದು ತರಾತುರಿಯಿಂದ ರಾಜೀನಾಮೆ ಎಸೆದು ...ಣ್ಮರೆಯಾಗಿದ್ದ. ಅಲ್ಲಿಗೆ ಆತ ಆಪರೇಷನ್ ಕಮಲಕ್ಕೆ ಬಿದ್ದಿದ್ದಾನೆಂಬುದು ಸ್ಪಷ್ಟವಾಗಿತ್ತು. ಈತನ ನಡೆಗಳು ...ಥವಾಗಿದ್ದರೂ ಕೂಡಾ ಹಲವಾರು ಲೆಕ್ಕಾಚಾರ ...ಯೇ ಪೇರಿಕಿತ್ತಿದ್ದಾನೆಂಬ ಅಂಶ ಸ್ಪಷ್ಟವಾಗುತ್ತದೆ.

ಈ ಅಶ್ವತ್ಥ್ ಜೆಡಿಎಸ್ ಹೆಸರಲ್ಲಿ ರಾಮನಗರ ಜಿಲ್ಲೆ ...ಪಟ್ಟಣ ಕ್ಷೇತ್ರದಿಂದ ಶಾಸಕನಾದವನು. ಆ ಬಳಿಕ ... ಕೆಲಸ ಮಾಡಿದ ಕುರುಹುಗಳು ಕ್ಷೇತ್ರದಾದ್ಯಂತ ಹುಡುಕಾಡಿದರೂ ಸಿಗುವಂತಿಲ್ಲ. ಇದೆಲ್ಲದರಿಂದಾಗಿ ಮುಂದ್ಯಾವತ್ತೂ ಬಚಾವಾಗುವ ಯಾವ ಲಕ್ಷಣಗಳೂ ಇರಲಿಲ್ಲ. ಇನ್ನು ಸ್ವಂತ ವರ್ಚಸ್ಸು ದೂರದ ಮಾತು. ಇಂಥಾ ಆಸಾಮಿ ಕ್ಷೇತ್ರವೇ ಕೈತಪ್ಪಿ ಹೋದರೆ ಹ್ಯಾಗೆ ಬದುಕಿಯಾನು?

ಪರಿಸ್ಥಿತಿ ಹಾಗೆಯೇ ಇದೆ. ಒಂದು ಮೂಲದ ಪ್ರಕಾರ ಮುಂಬರುವ ವಿಧಾನಸಭಾ ಚುನಾವಣೆಯ ಹೊತ್ತಿಗೆಲ್ಲಾ ಚನ್ನಪಟ್ಟಣ ಕ್ಷೇತ್ರ ಪರಿಶಿಷ್ಟ ಜಾತಿಯ ಮಹಿಳಾ ಮೀಸಲು ಕ್ಷೇತ್ರವಾಗಲಿದೆ. ಇದಾದರೆ ಅಶ್ವತ್ಥ್ ಅಕ್ಷರಶಃ ನೆಲೆ ಕಳೆದುಕೊಳ್ಳುತ್ತಾನೆ. ಒಂದರ್ಥದಲ್ಲಿ ರಾಜಕೀಯ ಅಸ್ತಿತ್ವಕ್ಕೆ ಸಂಚಕಾರವಾಗುವುದು ಖಂಡಿತ. ಅಶ್ವತ್ಥ್ ಇಂತಹದೊಂದು ಬೇಗುದಿಯಲ್ಲಿ ಬೇಯುತ್ತಿರುವಾಗಲೇ ಬಿಜೆಪಿಯಲ್ಲಿ ಬಂಡಾಯ ಹುಟ್ಟಿಕೊಂಡಿದೆ.

ಉದುರಿಹೋಗುವ ಭೀತಿಯಲ್ಲಿದ್ದ ಬಿಜೆಪಿ ಮಂದಿ 25 ಕೋಟಿ ಕೊಡುವ ಆಮಿಷವನ್ನು ಅಶ್ವತ್ಥ್ ಮುಂದಿಟ್ಟಿದ್ದಾರೆ. ಅದಕ್ಕೊಪ್ಪಿಕೊಂಡು ಒಂದಷ್ಟು ಬುದ್ಧಿವಂತಿಕೆ ತೋರಿಸಿದ ಅಶ್ವತ್ಥ್ ರಾಜಕೀಯ ಭವಿಷ್ಯದ ದೃಷ್ಟಿಯಿಂದ ಒಂದಷ್ಟು ಚೌಕಾಸಿ ನಡೆಸಿದ್ದಾನೆ. ಇದಕ್ಕೆ ಪ್ರತಿಯಾಗಿ ಯಡ್ಡಿ ಕಡೆಯಿಂದ ಸಚಿವ ಸ್ಥಾನ ಅಥವಾ ಎಮ್ಮೆಲ್ಸಿ ಮಾಡುವ ಆಶ್ವಾಸನೆ ದೊರೆತಿದೆ. ಮುಳುಗುವ ಭೀತಿಯಲ್ಲಿದ್ದ ಅವಿವೇಕಿ ಅಶ್ವತ್ಥ್‌ಗೆ ಹುಲ್ಲುಕಡ್ಡಿಯೊಂದು ಸಿಕ್ಕಂತಾಗಿದೆ.


ಇದೆಲ್ಲದರೊಂದಿಗೆ ಈತ ವಿಪರೀತ ಚಟಗಳನ್ನು ಅಂಟಿಸಿಕೊಂಡಿದ್ದ. ಇಂಥ ಚಟಗಳಿಗಾಗೇ ಸಾಲ ಮಾಡುತ್ತಾ ಸಾಗಿ ಅದರ ಬಾಬತ್ತು ಅಖಂಡ ಎಂಟು ಕೋಟಿಯಷ್ಟಾಗಿತ್ತು. ಇದರಿಂದ ತಪ್ಪಿಸಿಕೊಳ್ಳಲೂ ಆತನಿಗೆ ಎಂಜಲು ಕಾಸು ಅನಿವಾರ್ಯವಾಗಿತ್ತು. ಈತನ ಚಟಗಳ ಅರಿವಿದ್ದ ಬಿಜೆಪಿ ಮಂದಿ ಹೆಂಡತಿಯನ್ನೇ, ಹೈದ್ರಾಬಾದಿಗೆ ಕರೆಸಿಕೊಂಡು 25 ಕೋಟಿ ಕೈಗಿಟ್ಟರಂತೆ.

ಅವಿವೇಕಿ ಅಶ್ವತ್ಥ್ ಸಚಿವ ಸ್ಥಾನವೂ ಇಲ್ಲದೆ, ಕ್ಷೇತ್ರವೂ ಇಲ್ಲದೆ ಬೀದಿಯಲ್ಲಿ ನಿಲ್ಲುವ ಪರಿಸ್ಥಿತಿ ಬಂದರೂ ಆಶ್ಚರ್ಯ ಪಡಬೇಕಿಲ್ಲ. ಎಂಜಲು ಕಾಸು ಉಳಿದರೆ ಅದೇ ಸ್ವರ್ಗ! •


ಮಂಡ್ಯ: ಸ್ಲಂ ಭೂಗಳ್ಳರಿಗೆ ಜಿಲ್ಲಾಧಿಕಾರಿ ಜಾಫರ್ ಸಾಥ್?



...ಇಂದು ಹಸಿರು ನಾಡೆಂಬ ಖ್ಯಾತಿ ಪಡೆದಿರುವ ಮಂಡ್ಯ ... ಒಂದು ಶತಮಾನದ ಹಿಂದೆ ಕೇವಲ ಉಳ್ಳಿ (ಹುರುಳಿ) ...ಕೊಂಡು ಬೇಸಾಯ ಮಾಡುತ್ತಿದ್ದ ಪ್ರದೇಶವಾಗಿತ್ತು. ...ರೀತಿ ಬರಡಾಗಿದ್ದ ಮಂಡ್ಯ ಜಿಲ್ಲೆಯನ್ನು ಹಸಿರಿನಿಂದ ...ಳೊಳಿಸುವ ಸಕ್ಕರೆ ನಗರವಾಗಿಸಲು ಕಾರಣವಾದ ...ಬಾಡಿ ಕಟ್ಟೆ ಕಟ್ಟಿದವರು, ಜಿಲ್ಲೆಯ ತುಂಬೆಲ್ಲಾ ಜೀವಜಲ ...ಸುವ ಕಾಲುವೆಗಳನ್ನು ಕಟ್ಟಿದವರು, ಮಂಡ್ಯದ ಎಲ್ಲಾ ...ಮುಖ ಸರ್ಕಾರಿ ಕಟ್ಟಡಗಳೂ ಸೇರಿದಂತೆ ನಗರ ನಿರ್ಮಾ... ಜೀವತೇಯ್ದವರು ಬ್ರಿಟಿಷರ ಕಾಲದಲ್ಲೇ ತಮಿಳು ...ನಿಂದ ವಲಸೆ ಬಂದ ಬಡ ತಮಿಳು ಕೂಲಿಕಾರರು! ...ಮಂಡ್ಯವನ್ನು ನಗರವನ್ನಾಗಿಸಿ, ಇಲ್ಲೇ ದುಡಿದು, ಇಲ್ಲೇ ...ಪ್ಪಾದ ಆ ಕೂಲಿಕಾರ್ಮಿಕರು ವಾಸಿಸುತ್ತಿದ್ದ ...ಳಗೇರಿಯನ್ನು ತಮಿಳು ಕಾಲೋನಿ ...ನೇ ಕರೆಯಲಾಗುತ್ತಿದೆ. ಸ್ವಾತಂತ್ರ್ಯಾನಂತ... ಇಲ್ಲಿಯೇ ನೆಲೆನಿಂತು ಮಂಡ್ಯದ ...ಕರೇ ಆಗಿ ಹೋಗಿರುವ ಅವರ ಮಕ್ಕಳು-...ಮೊಮ್ಮಕ್ಕಳನ್ನು ಮಂಡ್ಯ ನಗರದಿಂದಲೇ ...ಗಡಿ ಮಾಡುವ ಸಂಚೊಂದರಲ್ಲಿ ಇಲ್ಲಿನ ... ಸಾಹೇಬ ಜಾಫರ್ ಸಹ ಪಾಲುದಾರ...ಗುತ್ತಿರುವುದು ದುರಂತವಾಗಿದೆ.




...ಇದು ಸಾಮಾನ್ಯ ಎತ್ತಂಗಡಿಯಲ್ಲ. ...ರ ಹಿಂದೆ ಸ್ಲಂ ಭೂಗಳ್ಳರು, ಕನ್ನಡ ...ಹೋರಾಟದ ಹೆಸರಿನಲ್ಲಿ ಜೇಬು ತುಂಬಿಸಿ...ಕೊಳ್ಳುತ್ತಿರುವ ಓರಾಟಗಾರರೂ ಸೇರಿದಂತೆ ...ಹಿತಿ ಅರ್ಜಿ ಧಮಕಿಕೋರರಿದ್ದಾರೆ. ಇದು ...ಡ್ಯದ ಅಭಿವೃದ್ಧಿಯ ಹೆಸರಿನಲ್ಲಿ ಬಡವರ ...ಲೆ ನಡೆಯುತ್ತಿರುವ ಮಾರಣಾಂತಿಕ ...ಯಲ್ಲದೆ ಮತ್ತೇನಲ್ಲ!



...ಕನ್ನಂಬಾಡಿಯ ಅಣೆಕಟ್ಟೆ ಕಟ್ಟಿ 80 ...ರ್ಣವಾಗುತ್ತಿರುವ ಹೊತ್ತಿನಲ್ಲಿ ಅದನ್ನು ...ದ ತಮಿಳು ಕಾಲೋನಿ ಜನರಿಗೆ ತಲೆಯ ...ಲೊಂದು ಸೂರನ್ನು ಕಟ್ಟಿಕೊಡುವ ...ಜನೆ ರೂಪುಗೊಂಡಿದೆ. ಆದರೆ ಈ ...ನೆಗಳ ನಿರ್ಮಾಣವು ಪೂರ್ಣವಾಗುವ ...ತ್ತಿನಲ್ಲೇ ಅವರನ್ನು ಬೀದಿಪಾಲು ಮಾಡುವ ...ಂಗಡಿಯ ಸಂಚು ಶುರುವಾಗಿದೆ.

...ಂಡ್ಯ ಎಂಬ ಸ್ಲಂಗಳ ಸಂತೆ



... ಅತ್ತ ದೊಡ್ಡ ನಗರವೂ ಅಲ್ಲದ ಇತ್ತ ...ಮವೂ ಅಲ್ಲದ ದೊಡ್ಡ ಹಳ್ಳಿಯಂತಿರುವ ...ಂಡ್ಯ ನಗರದಲ್ಲಿ ಬರೋಬರಿ 24 ...ಗಳಿವೆ. ಇಲ್ಲಿನ ಸ್ಲಂಗಳು ನಿನ್ನೆಮೊನ್ನೆ ...ಟ್ಟಿಕೊಂಡವಲ್ಲ, ಇವುಗಳಿಗೆ ಸ್ವತಂತ್ರ ಭಾರತದಷ್ಟೇ ಇತಿಹಾಸ ಇದೆ. ಅದರಲ್ಲೂ ಈಗ ಎತ್ತಂಗಡಿಗೆ ರೆಡಿಯಾಗಿರುವ ಹಳೆ ತಮಿಳು ಕಾಲೋನಿ ಸ್ಲಂಗೆ ಸ್ವಾತಂತ್ರ್ಯ ಪೂರ್ವದ ಇತಿಹಾಸವಿದೆ.

ಅರ್ಧ ಶತಮಾನದಷ್ಟು ಕಾಲ ಮಂಡ್ಯದಲ್ಲಿ ಆಳ್ವಿಕೆ ನಡೆಸಿದ ಮಾಜಿ ಸಚಿವ ಆತ್ಮಾನಂದ ಮತ್ತು ಆತನ ಚಿಕ್ಕಪ್ಪ ಎಂ.ಕೆ.ರಾಮಲಿಂಗೇಗೌಡರ ಫ್ಯಾಮಿಲಿ ಈ ತಮಿಳು ಸ್ಲಂ ಜನರನ್ನು ತಮ್ಮ ಫ್ಯೂಡಲ್ ರಾಜಕಾರಣಕ್ಕೆ ಬಳಸಿಕೊಂಡಿದ್ದು ಮಾತ್ರವಲ್ಲದೇ, ತಮ್ಮ ಕಂಟ್ರಾಕ್ಟರ್‌ಗಿರಿಗೆ ಕೂಲಿಗಳಾಗಿ ದುಡಿಯಲು, ತಮ್ಮ ಬಂಗಲೆಗಳನ್ನೆಬ್ಬಿಸಲು, ಕಾಂಪ್ಲೆಕ್ಸ್‌ಗಳನ್ನು ಕಟ್ಟಲು ಬಿಟ್ಟಿ ಚಾಕರಿ ಮಾಡಿಸಿಕೊಂಡದ್ದೂ ಇದೆ.

ಒಟ್ಟಿನಲ್ಲಿ ಮಂಡ್ಯದ ಸ್ಲಂಗಳು ಸ್ಲಂಗಳಾಗೇ ಉಳಿಯಲು, ನಗರದ ಬಡವರು ಸ್ಲಂಗಳಲ್ಲಿ ಕನಿಷ್ಠ ನೆಮ್ಮದಿಯ ಬದುಕನ್ನೂ ಬದುಕದಂತೆ ಮಾಡಿದ ಕೀರ್ತಿ ಇಲ್ಲಿನ ರಾಜಕಾರಣಿಗಳಿಗೆ ಸಲ್ಲಬೇಕು.

ಬೆಂಕಿ ಬದುಕನ್ನೇ ಕಿತ್ತುಕೊಂಡಿತ್ತು


ಈ ತಮಿಳು ಕಾಲೋನಿ ಸ್ಲಂಗೆ 2008 ರಲ್ಲಿ ಆಕಸ್ಮಿಕ ಬೆಂಕಿಬಿದ್ದು ಸುಮಾರು 600 ಜೋಪಡಿಗಳು, ಕೂಲಿನಾಲಿ ಮಾಡಿ ಇಟ್ಟಿದ್ದ ಆಸ್ತಿಪಾಸ್ತಿಗಳು ಬೆಂಕಿಗೆ ಆಹುತಿಯಾಗಿ ಸಾವಿರಾರು ಜನರ ಬದುಕನ್ನೇ ಬೂದಿ ಮಾಡಿತ್ತು. ಆಗ ಮಂಡ್ಯದ ಬಹುಪಾಲು ಜನರು ಮರುಕ ವ್ಯಕ್ತಪಡಿಸಿದ್ದರು.

ಇದೆಲ್ಲವನ್ನು ಕಣ್ಣಾರೆ ಕಂಡಿದ್ದ ಡಿಸಿ ಮಂಜುನಾಥ್ ಪ್ರಸಾದ್ ಮನೆ ಕಟ್ಟಿಸಿ ಕೊಡುವ ಯೋಜನೆ ರೂಪಿಸಿದ್ದರು. ಆದರೆ ಅಷ್ಟರೊಳಗೆ ಅವರು ಎತ್ತಂಗಡಿಯಾದರು. ನಂತರ ಬಂದ ಮಹೇಶ್ವರರಾವ್ ಸಹ ಯೋಜನೆಯ ಪರವಾಗಿ ಸಹಕರಿಸಿದ್ದರು. ಆದರೆ ಡಿಸಿಗಳ ಸರಣಿ ವರ್ಗಾವಣೆ ಆಗುತ್ತಾ ಬಂದು, ತಮಿಳು ಕಾಲೋನಿ ಕುರಿತ ಸರ್ಕಾರದ ಧೋರಣೆಯೂ ಬದಲಾಯಿತು. ಅಡಿಪಾಯದ ಮೇಲೆ ಬೆಳೆಯುತ್ತಿದ್ದ ಮನೆಗಳನ್ನು ಕಿತ್ತುಹಾಕುವ ಹುನ್ನಾರ ಬಲಗೊಳ್ಳುತ್ತಾ ಸಾಗಿತು.

ಎತ್ತಂಗಡಿಯಾದರೂ ಯಾತಕ್ಕಾಗಿ?

ತಮಿಳು ನಿವಾಸಿಗಳ ಸ್ಲಂ ಜಾಗ ಚಿನ್ನದಂತಹ ಬೆಲೆಯದ್ದು. ಆದ್ದರಿಂದ ಇಲ್ಲಿನ ಜನರನ್ನು ಎತ್ತಂಗಡಿ ಮಾಡಿಸುವ ಹುನ್ನಾರವನ್ನು ಮಂಡ್ಯದ ಮುತ್ಸದ್ದಿ ರಾಜಕಾರಣಿ ಎನಿಸಿಕೊಳ್ಳುವ ಎಸ್.ಡಿ.ಜಯರಾಮ್ ಹೂಡಿದರೆ, ಬಡವರನ್ನು ಶೋಷಣೆ ಮಾಡುವುದನ್ನೇ ಸಮಾಜ ಸೇವೆ ಎಂದು ಬಿಂಬಿಸುವ ಮೀರಾ ಮತ್ತು ಶಿವಲಿಂಗಯ್ಯ ಎಂಬ ಕಿಲಾಡಿ ದಂಪತಿಗಳೂ ಈ ಜಾಗದ ಮೇಲೆ ಕಣ್ಣಿಟ್ಟಿದ್ದಾರೆ. ಏನಾದರೂ ಸರಿ, ಈ ಸ್ಲಂ ನಲ್ಲಿರುವ ಜನರನ್ನು ಎತ್ತಂಗಡಿ ಮಾಡಿ, ಅವರ ಜಾಗವನ್ನು ಕಬಳಿಸಿ ಅಲ್ಲಿ ತಮ್ಮ ಮಾಂಡವ್ಯ ಕಾಲೇಜನ್ನು ಮೆಡಿಕಲ್-ಎಂಜಿನಿಯರ್ ಕಾಲೇಜ್‌ಗಳಾಗಿ ಮಾಡುವ ಹಪಾಹಪಿಗೆ ಈ ದಂಪತಿಗಳು ಬಿದ್ದಿದ್ದಾರೆ.

ಅದಕ್ಕೆಂದೇ ರಾಜ್‌ಕುಮಾರ್ ಅಭಿಮಾನಿ ಸಂಘ ಎಂಬ ಲೆಟರೆಡ್ ಸಂಘದ ಎತ್ತುವಳಿ ವೀರ ಜಿ.ಟಿ.ರವಿಂದ್ರಕುಮಾರ್ ಎಂಬುವವನನ್ನು ಛೂಬಿಟ್ಟು ಸ್ಲಂ ಜನರಿಗೆ ಈ ದಂಪತಿ ಕೊಡುತ್ತಿರುವ ಉಪದ್ರವ ಅಷ್ಟಿಷ್ಟಲ್ಲ. ಸ್ಲಂ ಜನರನ್ನು ಕೋರ್ಟ್ ಕಚೇರಿ ಅಂತ ಅಲೆದಾಡಿಸಿದ್ದು ಈ ರವೀಂದ್ರಕುಮಾರನೇ. ಮಾಹಿತಿ ಹಕ್ಕನ್ನೇ ದಂಧೆಯಾಗಿ ಮಾಡಿಕೊಂಡು ವಸೂಲಿಗಿಳಿದಿರುವ ಕಲ್ಲಹಳ್ಳಿ ರವೀಂದ್ರ ಮತ್ತು ವಿಫಲ ಓರಾಟಗಾರ ಎಚ್.ಡಿ.ಜಯರಾಂ ಎಂಬ ಆಸಾಮಿಗಳೂ ಇತ್ತೀಚೆಗೆ ರವೀಂದ್ರ ಕುಮಾರನ ಜೊತೆ ಕೈಜೋಡಿಸಿದ್ದಾರೆ. ಈ ಮೂವರು ಸಮಾಜ ಸೇವಕರು ಎಂದು ಕರೆದುಕೊಳ್ಳುತ್ತಿರುವ ದಂಪತಿಗಳಾದ ಮೀರಾ-ಶಿವಲಿಂಗಯ್ಯರೆಂಬ ಭೂಗಳ್ಳರ ಎಂಜಲು ಹಣದ ಆಸೆಗಾಗಿ ಉಚ್ಚ ನ್ಯಾಯಾಲಯದ ಮುಂದೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೂಡಿದ್ದಾರೆ. ಅದರಲ್ಲಿ ಅವರು ನೀಡಿರುವ ಕಾರಣ ಮೆಡಿಕಲ್ ಕಾಲೇಜಿಗೆ ಭೂಮಿ ಬೇಕೆಂಬ ನೆಪ. ಆದರೆ ಅಸಲೀ ವಿಚಾರ ಎಂದರೆ ಭಾಷಾ ದುರಭಿಮಾನದಿಂದ ಸ್ಲಂ ಜನರನ್ನು ಓಡಿಸಿ ಅದನ್ನು ಮೀರಾ, ಶಿವಲಿಂಗಯ್ಯರ ಸಂಸ್ಥೆಗೆ ದಕ್ಕಿಸಿಕೊಡುವ ಹುನ್ನಾರ ನಡೆಸಿದ್ದಾರೆ.



ಡಿ.ಸಿ.ಜಾಫರ್

ಇತ್ತೀಚೆಗೆ ಹುಟ್ಟಿದ ಮೆಡಿಕಲ್ ಕಾಲೇಜಿನ ಉಸಾಬರಿ ವಹಿಸುತ್ತಿರುವ ಓರಾಟಗಾರರು ಮರೆಮಾಚುತ್ತಿರುವ ಒಂದು ಸಂಗತಿಯಿದೆ. ಶ್ರೀನಿವಾಸಪುರದಲ್ಲಿ ಅತೀ ಕಡಿಮೆ ಬೆಲೆಗೆ ಆಂಧ್ರದ ರೆಡ್ಡಿಯೊಬ್ಬನಿಗೆ ಮಾರಾಟ ಮಾಡಿದ ಅಸಿಟೇಟ್ ಕಾರ್ಖಾನೆಯ ವಿಶಾಲ ಜಾಗದಲ್ಲಿ ಮೆಡಿಕಲ್ ಕಾಲೇಜನ್ನು ಕಟ್ಟಲು ಸೂಚಿಸಲಾಗಿತ್ತು. ಇದು ನಿಜವಾಗಲೂ ಮೆಡಿಕಲ್ ಕಾಲೇಜಿಗೆ ಸೂಕ್ತವಾದ ಜಾಗವಾಗಿತ್ತು. ಅಂದು ಮಾತನಾಡದೆ, ಇಕ್ಕಟ್ಟಿನ ಜಾಗಕ್ಕೆ ಮೆಡಿಕಲ್ ಕಾಲೇಜನ್ನು ತಂದು, ಈಗ ಮೆಡಿಕಲ್ ಕಾಲೇಜಿನ ಹೆಸರಿನಲ್ಲಿ ಸುಮಾರು 70 ವರ್ಷಗಳಿಂದ ತಮ್ಮ ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನ ಪಡುತ್ತಿರುವವರ ಸಂಕಟಗಳನ್ನು ಅರ್ಥ ಮಾಡಿಕೊಳ್ಳದೆ ಕೇಸು ಹಾಕುತ್ತಿರುವುದಕ್ಕೆ ಏನೆನ್ನಬೇಕು? ಈಗ ಅವರ ಎತ್ತಂಗಡಿ ಪ್ಲಾನ್‌ಗೆ ಸಹಕರಿಸುತ್ತಿರುವ ಡಿ.ಸಿ. ಜಾಫರ್‌ರ ಬುದ್ಧಿಗೆ ಏನೆನ್ನಬೇಕು?

ಕೋರ್ಟ್ ಆದೇಶವೆಂಬ ಬ್ರಹ್ಮಾಸ್ತ್ರ

ಈಗ್ಗೆ ಐದು ತಿಂಗಳ ಕೆಳಗೆ ತಮಿಳು ಕಾಲೋನಿಯವರಿಗೆಂದು ಮನೆ ಕಟ್ಟುತ್ತಿದ್ದ ಜಾಗದಲ್ಲಿ 2 ಎಕರೆ 33 ಗುಂಟೆಗಳನ್ನು ಪ್ರತ್ಯೇಕಿಸಿ ಅದನ್ನು ಮೆಡಿಕಲ್ ಕಾಲೇಜಿಗೆ ಬಿಟ್ಟುಕೊಡಬೇಕೆಂಬ ಆದೇಶ ಹೊರಬೀಳಲು ಇವರೆಲ್ಲರೂ ಕಾರಣರಾದರು. ಈಗ ಉಳಿದ 5 ಚಿಲ್ಲರೆ ಎಕರೆ ಜಾಗದಲ್ಲಿ ಮನೆ ಕಟ್ಟದಂತೆ ತಡೆಯಾಜ್ಞೆ ತರಲಾಗಿದೆ. ಎಂದೂ ನೆಟ್ಟಗೆ ಕೆಲಸ ಮಾಡದ ಸ್ಲಂಬೋರ್ಡ್‌ನ ಅಧಿಕಾರಿಗಳು ಮಾಡುವ ತಾಂತ್ರಿಕ ಎಡವಟ್ಟುಗಳೇ ನ್ಯಾಯಾಲಯದ ಆದೇಶಗಳಿಗೆ ಕಾರಣವಾಗುತ್ತವೆ. ಅದನ್ನು ಬಳಸಿಕೊಂಡು ಭೂಮಿಯ ಮೇಲೆ ಹಕ್ಕು ಸಾಧಿಸಲು ಭೂಗಳ್ಳರು ಸಿದ್ಧರಾಗಿರುತ್ತಾರೆ.

ಈ ಜಾಗದಲ್ಲಿ ಸ್ಲಂ ಜನರಿಗೆ ಮನೆ ಕಟ್ಟಲೆಂದು ಅಗತ್ಯವಿದ್ದ ಹೆಚ್ಚುವರಿ ಭೂಮಿಯನ್ನು ಮಂಜೂರು ಮಾಡಿದ್ದೂ ಡಿಸಿ ಕಚೇರಿಯೇ. ಈಗ ಅದನ್ನು ಕಿತ್ತುಕೊಳ್ಳಲು ಕಾರಣವಾಗುತ್ತಿರುವುದೂ ಇದೇ ಡಿಸಿ ಕಚೇರಿಯೇ. ಸ್ಲಂ ಜನರ ಪಾಲಿಗೆ ಸರ್ಕಾರವೆಂದರೆ ಸ್ಲಂಬೋರ್ಡ್, ನಗರಸಭೆ, ವಿಧಾನಸೌಧ ಎಲ್ಲವೂ. ಆದರೆ ಈಗ ಸ್ಲಂಬೋರ್ಡ್ ಅಲ್ಲಿ ಮನೆ ಕಟ್ಟಬಾರದು ಎಂದು ಸರ್ಕಾರದ ಇಲಾಖೆಗಳೇ ಅದರ ವಿರುದ್ಧ ನಿಂತಿವೆ. ಈ ಇಲಾಖೆಗಳ ಹತ್ತಿರ ಸ್ಲಂ ಜನರ ಪರವಾಗಿ ಗಟ್ಟಿಯಾಗಿ ಮಾತನಾಡುವ ಶಕ್ತಿ ಸ್ಲಂಬೋರ್ಡ್‌ಗೆ ಇಲ್ಲವಾಗಿದೆ. ಹೀಗಾಗಿ ಕೋರ್ಟ್‌ನಲ್ಲಿ ಸ್ಲಂ ಜನರ ವಿರುದ್ಧವಾಗಿಯೇ ಆದೇಶಗಳು ಬರುವ ಸಾಧ್ಯತೆ ಹೆಚ್ಚಾಗಿದೆ. ತನ್ನ ಕಚೇರಿಯೇ ಮನೆ ಕಟ್ಟಿಸಲು ಬೇಕಾದ ಪೂರ್ವಸಿದ್ಧತೆಯನ್ನು ಮಾಡಿತ್ತು ಎಂಬುದು ಗೊತ್ತಿದ್ದೂ ಹಾಲಿ ಡಿಸಿ ಜಾಫರ್ ಸ್ಲಂ ಜನರ ಪರವಾಗಿ ವಾದಿಸುವ ಬದಲಿಗೆ ಭೂಗಳ್ಳರ ಜೊತೆ ನಿಲ್ಲುತ್ತಿದ್ದಾರೆ ಎಂದು ಭಾವಿಸುವಂತೆ ಅವರ ನಡವಳಿಕೆಯಿದೆ. ಅವರ ಮೇಲೆ ಮದ್ದೂರಿನ ಮಾಜಿ ಶಾಸಕ ನೂರು ಕೋಟಿ ವೀರ ತಮ್ಮಣ್ಣ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಆರ್.ಅಶೋಕ್‌ರ ಒತ್ತಡ ಕೆಲಸ ಮಾಡಿದೆ ಎಂದು ಹೇಳಲಾಗುತ್ತಿದೆ. ಎಲ್ಲರೂ ಸೇರಿ ಕೋರ್ಟಿನಲ್ಲಿ ಸ್ಲಂ ಜನರಿಗೆಂದು ಮಂಜೂರು ಮಾಡಲಾಗಿದ್ದ 2.33 ಎಕರೆಗಳನ್ನು ಮೊದಲಿಗೆ ವಾಪಸ್ಸು ತೆಗೆದುಕೊಳ್ಳಲು ಕಾರಣರಾದರು. ಅದಕ್ಕೆಂದು ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಮೀಟಿಂಗ್ ನಡೆದು ನಿರ್ಣಯವಾಯಿತು. ಈಗ ಉಳಿದ ಜಾಗವೂ ಸ್ಲಂ ಜನರಿಂದ ಕೈತಪ್ಪುವ ಸಾಧ್ಯತೆ ಇದೆ.

ಈಗಾಗಲೇ ಮನೆ ನಿರ್ಮಾಣಕ್ಕೆ ಸುಮಾರು 10 ಕೋಟಿ ರೂ. ಜನರ ತೆರಿಗೆ ನಿಧಿಯಿಂದ ಖರ್ಚಾಗಿದೆ. ಜಾಗ ಖಾಲಿ ಮಾಡಿರುವ ಸ್ಲಂ ಜನರು ರಸ್ತೆ ಬದಿಯಲ್ಲಿ ಮುರುಕಲು ಗುಡಿಸಲು ಹಾಕಿಕೊಂಡು ವಾಸಿಸುತ್ತಿದ್ದಾರೆ. ಇಲ್ಲಿಂದ ಅವರನ್ನು ಸಂಪೂರ್ಣ ಎತ್ತಂಗಡಿ ಮಾಡಿ ಕಳಿಸಿದರೆ ಈ ಜನರು ಚೆಲ್ಲಾಪಿಲ್ಲಿಯಾಗಿ ನೆಲೆ ಮತ್ತು ಬದುಕು ಎರಡನ್ನೂ ಕಳೆದುಕೊಳ್ಳುವುದಂತೂ ಖಚಿತ. ಸ್ಲಂ ಜನರ ಓಟನಿಂದ ಶಾಸಕನಾದ ಎಂ.ಶ್ರೀನಿವಾಸ್ ಇಂದು ಕುಮಾರಸ್ವಾಮಿಯೊಂದಿಗೆ ರೆಸಾರ್ಟ್‌ನಲ್ಲಿ ಬಂಧಿಯಾಗಿದ್ದಾರೆ. ಅದನ್ನ ಮೀರಿ ಬಂದು ಜನರ ಪರವಾಗಿ ನಿಲ್ಲುವ ಕಾಳಜಿಯಾಗಲೀ, ಛಾತಿಯಾಗಲೀ ಶ್ರೀನಿವಾಸ್‌ರವರಿಗೆ ಬಂದು, ತಮಗೆ ಓಟು ಹಾಕಿದ ಜನರಪರ ನಿಂತು ಹೋರಾಟ ಮಾಡುವರೆಂದು ಆಶಿಸಬಹುದೇ?

ಒಟ್ನಾರೆ ಅಭಿವೃದ್ಧಿಯ ಹೆಸರಿನಲ್ಲಿ ಸ್ಲಂ ಜನರ ಎತ್ತಂಗಡಿಯ ಹುನ್ನಾರ ನಡೆಯುತ್ತಿದೆ. ಮಂಡ್ಯ ಜಿಲ್ಲೆಯನ್ನು ಹಸಿರಾಗಿಸಿದ ಜನರ ಜೊತೆ ಜಿಲ್ಲೆಯ ಪ್ರಜ್ಞಾವಂತ ಜನರು, ರೈತರು ನಿಲ್ಲಬೇಕಿರುವ ಅಗತ್ಯ ತುಂಬಾ ಇದೆ.

• ವರದಿಗಾರ

ಆದಾಯ ತೆರಿಗೆ ದಾಳಿ
ರೆಡ್ಡಿ ಮಾಮನಿಗೆ 'ಆಪರೇಷನ್'



ರೆಡ್ಡಿ ಮಾಮಾಗಳ ಸದ್ದಡಗಿದೆ.

ದಿನಬೆಳಗಾದರೆ ಆಪರೇಷನ್ ಕಮಲ ಎಂದು ಹಾರಾಡುತ್ತಾ ಪ್ರತಿಪಕ್ಷದ ಶಾಸಕರನ್ನು ಖರೀದಿಸುತ್ತಾ ಮೀಸೆ ತಿರುವಿಕೊಳ್ಳುತ್ತಿದ್ದ ರೆಡ್ಡಿ ಗ್ಯಾಂಗ್‌ನವರಿಗೆ ಒಂದು ಖಡಕ್ ಆಪರೇಷನ್ ಆಗಿಹೋಗಿದೆ.

ಅಲ್ಲಿಗೆ 'ಒಂದು ಮರಕ್ಕಿಂತ ಇನ್ನೊಂದು ಮರ ದೊಡ್ಡದಿರುತ್ತೆ' ಎನ್ನುವ ಗಾದೆ ಮಾತು ನಿಜವಾಗಿದೆ. ಮೊನ್ನೆಯ ಆದಾಯ ತೆರಿಗೆ ದಾಳಿ 'ರಾಜಕೀಯ ಪ್ರೇರಿತ' ಎಂದು ಬಿಜೆಪಿಗಳು, 'ಅಲ್ಲಾ' ಎಂದು ಕಾಂಗ್ರೆಸ್ಸಿಗರು ಕೂಗಾಡಿಕೊಳ್ಳುತ್ತಿದ್ದಾರೆ. ಒಂದು ರೀತಿಯಲ್ಲಿ ಅವೆರಡೂ ನಿಜ. ಹಾಗೆ ನೋಡಿದರೆ ಬಳ್ಳಾರಿಯಲ್ಲಿ ಸದಾ ಒಂದಲ್ಲ ಒಂದು ದಾಳಿಗಳು ನಡೆಯುತ್ತಲೇ ಇವೆ.





2009ರಲ್ಲಿ ಆಂಧ್ರಪ್ರದೇಶ ಸರ್ಕಾರದ ಸೂಚನೆಯ ಮೇರೆಗೆ ಅಕ್ರಮ ಗಣಿದಂಧೆಯ ಬಗ್ಗೆ ತನಿಖೆ ನಡೆಸುತ್ತಿದ್ದ ಸಿಬಿಐ ಬಳ್ಳಾರಿಗೆ ಬಂದು ರೆಡ್ಡಿ ಕ್ಯಾಂಪ್ ಮೇಲೆ ದಾಳಿ ನಡೆಸಿತ್ತು. ಅದಕ್ಕೂ ಮೊದಲು ಹಾಗೂ ಅನಂತರವೂ ಆಗಿಂದಾಗ್ಗೆ ಇಂಡಿಯನ್ ಬ್ಯೂರೋ ಆಫ್ ಮೈನ್ಸ್ ಅಧಿಕಾರಿಗಳು ಬಳ್ಳಾರಿಯಲ್ಲಿ ದಾಳಿ ನಡೆಸುತ್ತಲೇ ಇದ್ದಾರೆ. 2010ರ ಮಾರ್ಚ್ 29ರಂದು ಟಪಾಲ್ ಗಣೇಶ್ ಮೇಲೆ ಬಳ್ಳಾರಿ ನಗರದಲ್ಲೇ ರೆಡ್ಡಿಗಳು ದಾಳಿ ಮಾಡಿಸಿದ್ದರು.



2010ರ ಏಪ್ರಿಲ್‌ನಲ್ಲಿ ಗಣಿಕಳ್ಳರ ಮೇಲೆ ಲೋಕಾಯುಕ್ತರ ದಾಳಿ ನಡೆದಿತ್ತು. ನಂತರ ಕಾಂಗ್ರೆಸ್‌ನವರು ಸಿದ್ದರಾಮಯ್ಯ ನಾಯಕತ್ವದಲ್ಲಿ ಬಳ್ಳಾರಿಗೆ ಪಾದಯಾತ್ರೆ ನಡೆಸಿದ್ದರು. ಅದೂ ಒಂದು ರೀತಿಯ ರಾಜಕೀಯ ದಾಳಿಯೇ ಆಗಿತ್ತು. ಇದಕ್ಕೆ ಲಾಡ್ ಕುಮ್ಮಕ್ಕು ನೀಡಿದರೆಂದು ಸಿಟ್ಟಾದ ರೆಡ್ಡಿ ಮಾಮಾಗಳು ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆ ಹಾಗೂ ಪೊಲೀಸರನ್ನು ಬಳಸಿ 2010ರ ಆಗಸ್ಟ್ 29ರಂದು ಲಾಡ್ ಕಚೇರಿ ಹಾಗೂ ಗಣಿಗಳ ಮೇಲೆ ದಾಳಿ ಮಾಡಿಸಿದ್ದರು. ಈ ಗದ್ದಲದ ನಡುವೆ ಲಕ್ಷ್ಮೀ ಮಿತ್ತಲ್ ತರದ ಇಂಟರ್‌ನ್ಯಾಷನಲ್ ಖದೀಮರೂ ಬಳ್ಳಾರಿಯ ನಿಸರ್ಗ ಸಂಪತ್ತಿನ ಲೂಟಿಗಾಗಿ ಉಕ್ಕು ಕಂಪೆನಿ ಸ್ಥಾಪಿಸುವುದಾಗಿ ಹೇಳಿದ್ದರು. ಇದೊಂದು ರೀತಿ ಬಂಡವಾಳದ-ಲಾಭ-ಲೋಭದ ದಾಳಿ ಇದೆಲ್ಲದರ ಮುಂದುವರೆದ ಭಾಗದಂತೆ ಮೊನ್ನೆ ಅಕ್ಟೋಬರ್ 25ರಂದು ಆದಾಯ ತೆರಿಗೆ ಇಲಾಖೆಯ ದಾಳಿ ನಡೆದಿದೆ.


ಬಳ್ಳಾರಿ ಮಹೇಶ್

ಆದರೆ ಈ ಬಾರಿ ನಡೆದಿರುವ ದಾಳಿ ಹೀಗೆ ಬಂದು ಹಾಗೇ ಹೋಗುವಂತಾದ್ದಾಗಿರಲಿಲ್ಲ, ಇತ್ತೀಚಿನ ವರ್ಷಗಳಲ್ಲಿ ಐಟಿ ಇಲಾಖೆ ಭಾರತದಲ್ಲಿ ನಡೆಸಿದ ಅತಿ ದೊಡ್ಡ ರೈಡ್ ಇದು ಎನ್ನಲಾಗಿದೆ. ದೆಹಲಿ, ಚೆನ್ನೈಗಳಿಂದ ರಹಸ್ಯವಾಗಿ ಬಂದಿಳಿದ ಆಫೀಸರ್‌ಗಳ ಸಂಖ್ಯೆಯೇ ಮುನ್ನೂರಕ್ಕೂ ಹೆಚ್ಚಿತ್ತು. ಜೊತೆಗೆ ಕೇಂದ್ರ ಮೀಸಲು ಪೊಲೀಸರು, ಇಂಡೋ ಟಿಬೆಟಿನ ಬಾರ್ಡರ್ ಪೊಲೀಸರ ದೊಡ್ಡ ಬೆಟಾಲಿಯನ್‌ಗಳೂ ಬಂದೂಕೆತ್ತಿಕೊಂಡು ಕಾವಲಿಗೆ ನಿಂತಿದ್ದರು. ದಾಳಿಯ ನೇತೃತ್ವ ವಹಿಸಿದ್ದ ರಾಜೇಶ್ವರ ರಾವ್ ಖಡಕ್ ಆಫೀಸರ್. ಕರ್ನಾಟಕ-ಗೋವಾ ವ್ಯಾಪ್ತಿಯಲ್ಲಿ ಇವರ ಕೆಲಸ. ಇನ್‌ಕಂ ಟ್ಯಾಕ್ಸ್‌ನವರಿಂದ ಒದೆ ತಿಂದಿರುವವರಿಗೆ ಈ ಇಲಾಖೆಯ ರಾಜೇಶ್ವರ ರಾವ್, ಎಂ.ಎಲ್.ಅಗರವಾಲ್, ಎನ್.ಸಿ.ಸಿಂಗ್, ಜೆ.ಸಿ.ಮಿಶ್ರಾ, ಪಂಕಜ್ ಗುಪ್ತಾರ ಹೆಸರುಗಳನ್ನು ಕೇಳಿದರೆ ತಕ್ಷಣ ಜ್ವರ ಬಂದಂತಾಗುತ್ತದೆ. ಇವರ ಕೆಲಸದ ಕಾರ್ಯಾಚರಣೆ ಖದರ್ರು ಹಾಗಿರುತ್ತದೆ.


ನಾಗರಾಜ್ ಶೆಟ್ಟಿ

ರೆಡ್ಡಿಗಳ ಪಾಲಿಗೆ ಈಗಿನ ಇನ್‌ಕಂಟ್ಯಾಕ್ಸ್‌ನ ದಾಳಿ ಎರಡನೆಯದ್ದು. 2007ರ ಅಕ್ಟೋಬರ್ 26ರಂದು ಆದಾಯ ತೆರಿಗೆ ತನಿಖಾ ವಿಭಾಗದ ದಾಳಿ ನಡೆದಿತ್ತು. ಈಗ ರಾಜೇಶ್ವರರಾವ್ ಇರುವ ಜಾಗದಲ್ಲಿ ಅವತ್ತು ಅಜಿತ್ ಕೋರ್ಡಾ ಎಂಬ ಅಧಿಕಾರಿ ಇದ್ದರು. ಒಟ್ಟು 50 ಸ್ಥಳದಲ್ಲಿ ದಾಳಿ ನಡೆದಿತ್ತು. ಆಗ ಬಳ್ಳಾರಿ, ಹೊಸಪೇಟೆ, ಸಂಡೂರು, ಅನಂತಪುರ, ಬಾಂಬೆಗಳಲ್ಲೂ ಏಕಕಾಲಕ್ಕೆ ದಾಳಿಗಳಾಗಿದ್ದವು. 60 ಲಕ್ಷ ಕ್ಯಾಷು, ಕೇಜಿಗಟ್ಟಲೆ ಚಿನ್ನವಲ್ಲದೆ 12 ಲಾಕರ್‌ಗಳಲ್ಲಿ ಮುಚ್ಚಿಟ್ಟಿದ್ದ ಕೋಟ್ಯಾಂತರ ರೂಪಾಯಿ ಬೆಲೆ ಆಸ್ತಿಪಾಸ್ತಿಗಳ ಮಾಹಿತಿ ಸಿಕ್ಕಿಬಿದ್ದಿತ್ತು. ಅವತ್ತೂ ಕೂಡಾ ಇವತ್ತಿನಂತೆಯೇ 'ಇದು ಕಾಂಗ್ರೆಸ್‌ನವರ ಪಿತೂರಿ' ಅಂತಲೇ ರೆಡ್ಡಿ ಮಾಮಾಗಳು ಚೀರಿಕೊಂಡಿದ್ದರು. ಆದರೆ ತಮ್ಮ ವ್ಯವಹಾರದ ವಿವರ ರಾಮ-ಕೃಷ್ಣನ ಲೆಕ್ಕದ ಬಗ್ಗೆ ಚಕಾರವೆತ್ತಿರಲಿಲ್ಲ. ಇದನ್ನೆಲ್ಲಾ ಈಗ ಯಾಕೆ ಹೇಳಬೇಕಾಯಿತೆಂದರೆ ರೆಡ್ಡಿಗಳ ಜೊತೆ ಹೇಗೆ ವ್ಯವಹರಿಸಬೇಕೆಂಬ ಅನುಭವ ಐಟಿ ಇಲಾಖೆಗಿತ್ತು.

ಪಾರ್ವತೀಶ
bparvateesha@gmail.com

ಈ ಬಾರಿಯ ರೈಡ್‌ನಲ್ಲಿ ಇದು ನಿಚ್ಚಳವಾಗಿ ಕಂಡುಬಂತು.

ರೇಡ್ ಮಾಹಿತಿ ಕೊಟ್ಟರು ಬೆನ್ನಟ್ಟಿ ಹಿಡಿದರು.

ಹೀಗೆ ... ಇಂಥಾದ್ದೊಂದು ದಾಳಿ ರೆಡ್ಡಿ ಕ್ಯಾಂಪ್‌ನ ಮೇಲೆ ನಡೆಯುವುದಾಗಿ ಮೊದಲೇ ಸುದ್ದಿ ತಿಳಿದಿತ್ತು ಎಂದು ಕೆಲವರು ಹೇಳುತ್ತಿದ್ದಾರೆ. ಆದರೆ ಐಟಿಯವರು ಬೇಕೆಂತಲೇ ಈ ಸುದ್ದಿಯನ್ನು ತಾವಾಗಿಯೇ ಲೀಕ್ ಮಾಡಿದ್ದರೆಂಬ ತರ್ಕವೂ ಇದೆ. ಇದು ಯಾಕೆಂದರೆ ದಾಳಿಯ ಸುದ್ದಿ ಮೊದಲೇ ಗೊತ್ತಾದರೆ ಈ ರೆಡ್ಡಿಗಳು ಏನೇನನ್ನೂ ಎಲ್ಲೆಲ್ಲಿಗೆ ಸಾಗಿಸಬಹುದು. ಅವರ ರಹಸ್ಯ ನೆಟ್‌ವರ್ಕ್ ಎಲ್ಲೆಲ್ಲಿದೆ, ನಂಬಿಕಸ್ತ ಬಂಟರ್ಯಾರರೆಂದು ಪತ್ತೆಹಚ್ಚುವ ಸುಲಭದ ತಂತ್ರ ಅಧಿಕಾರಿಗಳದ್ದಾಗಿತ್ತು. ಅದು ಫಲಿಸಿತ್ತು ಕೂಡ.

ದಾಳಿಯ ಹಿಂದಿನ ದಿನ ಜನಾರ್ದನ ರೆಡ್ಡಿ ಬಳ್ಳಾರಿಯಲ್ಲೇ ಇರುವಂತೆ ಒಂದು ಕಾರ್ಯಾಚರಣೆ ನಡೆಸಲಾಯಿತು. ಅಕ್ಟೋಬರ್ 24ರ ರಾತ್ರಿ ತನ್ನ ಅಕ್ರಮ ಆಸ್ತಿಪಾಸ್ತಿ ಹಾಗೂ ದಂಧೆಯ ದಾಖಲೆಗಳನ್ನು ರೆಡ್ಡಿ ಹೈದರಾಬಾದ್‌ಗೆ ಸಾಗಿಸಿಬಿಡಲು ರೆಡಿಯಾಗಿದ್ದ. ಅದಕ್ಕಾಗಿ ಚಿಕ್ಕ ಚಾರ್ಟರ್ ವಿಮಾನವೊಂದು ಬೆಂಗಳೂರಿನಿಂದ ಬಳ್ಳಾರಿಯ ಜಿಂದಾಲ್ ಏರ್‌ಪೋರ್ಟ್‌ಗೆ ಬರುವುದಿತ್ತು. ಆದರೆ ಈ ವಿಮಾನದ ಟೇಕಾಫ್, ಲ್ಯಾಂಡಿಂಗ್‌ಗೆ, ಬೆಂಗಳೂರು, ಬಳ್ಳಾರಿ ಹಾಗೂ ಹೈದರಾಬಾದ್ ಈ ಮೂರೂ ಏರ್‌ಪೋರ್ಟ್‌ಗಳಲ್ಲಿ ಸಕಾಲಕ್ಕೆ ಅನುಮತಿ ಕೊಡದೆ ಸತಾಯಿಸಲಾಯಿತು. ರೆಡ್ಡಿ ಕೊನೆಗಳಿಗೆಯಲ್ಲಿ ಪ್ರಯಾಣ ಕ್ಯಾನ್ಸಲ್ ಮಾಡಿಕೊಂಡ.

ನಾಲ್ಕಾರು ಇನ್ನೋವಾ ಗಾಡಿಗಳಲ್ಲಿ ಈ ದಾಖಲೆಗಳನ್ನು ತುಂಬಿಕೊಂಡು ಜಿಂದಾಲ್ ಏರ್‌ಪೋರ್ಟ್‌ಗೆ ಸಾಗಿಸಲು ಸಿದ್ಧತೆಯಾಗಿತ್ತು; ಆದರೆ ಯಾವಾಗ ವಿಮಾನ ಬರುವುದಿಲ್ಲ ಎಂದಾಯಿತೋ ಈ ರೆಡ್ಡಿ ಗಾಬರಿಯಾಗಿ ಅವನ್ನೆಲ್ಲಾ ತನ್ನ ಪಿಎಗಳಾದ ಆಲೀಖಾನ್ ಹಾಗೂ ಮಧುಸೂದನನ ಮನೆಗಳಿಗೆ ಸಾಗಿಸಿಬಿಟ್ಟ.

ಮಜಾ ಅಂದರೆ ಅಧಿಕಾರಿಗಳು ಅಕ್ಟೋಬರ್ 25ರ ಬೆಳಗ್ಗೆ ಸೀದಾ ಆಲೀಖಾನ್ ಹಾಗೂ ಮಧುಸೂದನ್ ಮನೆಗೆ ರೈಡು ಹಾಕಿದರು. ಅವರಿಗೆ ಖದೀಮ ರೆಡ್ಡಿಯ ಪ್ರತಿಯೊಂದು ಚಲನವಲನವೂ ಗೊತ್ತಾಗಿತ್ತು. ಅಧಿಕಾರಿಗಳು ಎಂಥಾ ಕಿಲಾಡಿಗಳೆಂದರೆ ರೆಡ್ಡಿಯ ಅಡುಗೆಯವನ, ಕಾರ್ ಡ್ರೈವರ್ ಮನೆಗೂ ನುಗ್ಗಿ ಕೈಗೆಸಿಕ್ಕ ದಾಖಲೆಗಳನ್ನು ಹೊತ್ತೊಯ್ದರು.



ಮುತ್ತಯ್ಯ-ಶಿವಪ್ಪ-ತಿಮ್ಮಪ್ಪ: ತ್ರಿಮೂರ್ತಿ ವಂಚಕರು ಬಚಾವ್

ರೆಡ್ಡಿಯ ಕ್ರಿಮಿನಲ್ಸ್ ಗ್ಯಾಂಗ್‌ನೊಂದಿಗೆ ನೇರ ಲಿಂಕ್ ಇದ್ದಾಗಲೂ ಈಗಿನ ಐಟಿ ದಾಳಿಗೆ ಸಿಗದೆ ಬಚಾವಾಗಿರುವ ಭ್ರಷ್ಟರೆಂದರೆ ಈ ಮೂವರೇ! ಬಳ್ಳಾರಿ ಡಿಸಿಎಫ್ ಆಗಿದ್ದ ಮುತ್ತಯ್ಯ ಈಗ ಬಳ್ಳಾರಿ ಜಿಲ್ಲಾ ಪಂಚಾಯತಿಗೆ ಸಿಇಓ ಆಗಿದ್ದಾನೆ. ಇನ್ನೊಬ್ಬ ಶಿವಪ್ಪ ಜಿಲ್ಲಾಧಿಕಾರಿ. ಮಗದೊಬ್ಬ ತಿಮ್ಮಪ್ಪ ಬಳ್ಳಾರಿ ನಗರಪಾಲಿಕೆ ಕಮೀಷನರ್. ಮುತ್ತಯ್ಯ ದಾವಣಗೆರೆಯ ಮನೆ ಮೇಲೆ ರೈಡಾಯಿತೆಂಬ ಸುದ್ದಿ ಕೇಳಿ ಬಂತಾದರೂ ಅದು ನಿಜವಿರಲಿಲ್ಲ. ಕಮೀಷನರ್ ತಿಮ್ಮಪ್ಪನ ಮನೆ ರೆಡ್ಡಿಯ ಮನೆ ಎದುರಿಗೇ ಇದೆ. ದಾಳಿಯ ಹಿಂದಿನ ರಾತ್ರಿ ರೆಡ್ಡಿ ಮನೆಯಿಂದ ಅನೇಕ ದಾಖಲೆಗಳ ಬಂಡಲ್‌ಗಳನ್ನು ತಿಮ್ಮಪ್ಪನ ಮನೆಗೆ ಸಾಗಿಸಲಾಯಿತೆಂದು ಹೇಳುವವರಿದ್ದಾರೆ. ಆಲೀಖಾನ್ ಮನೆಗೆ ರೆಡ್ಡಿ ಸಾಗಿಸಿದ ದಾಖಲೆಗಳ ಬಗ್ಗೆ ಕಣ್ಣಿಟ್ಟಿದ್ದ ಐಟಿಯವರಿಗೆ ತಿಮ್ಮಪ್ಪ ಯಾಕೆ ಕಾಣಿಸಲಿಲ್ಲ ಎನ್ನುವುದು ಸದ್ಯಕ್ಕೆ ಆಶ್ಚರ್ಯವೆನಿಸುವ ಸಂಗತಿ. ಆದರೆ ಇಲಾಖೆಯ ಒಳಗೆ ಕೇಳಿಬರುತ್ತಿರುವ ಮಾತೆಂದರೆ ದಾಳಿಯ ಮುಂದಿನ ಸರದಿ ಈ ಖದೀಮ ತ್ರಿಮೂರ್ತಿಗಳದ್ದೇ ಆಗಿದೆ ಎಂದು.

ಆಕಾಶ್ ಅಭಿನವ್‌ನ ಮಾಲೀಕರಾದ ಅಮೋಲ್ ಹಾಗೂ ನೇಹಾ ಖೇರ್ ದಂಪತಿಗಳ ಮೊಬೈಲ್ ನಂಬರ್‌ಗಳಾದ 9820286750 ಹಾಗೂ 9820131260ಗಳ ಕಾಲ್ ರೆಕಾರ್ಡ್ ತೆಗೆಸಿ ರೆಡ್ಡಿ ರಾಜ್ಯಕ್ಕೂ ಆಕಾಶ್ ಹಾಗೂ ಬಳ್ಳಾರಿಯ ಪ್ರಮುಖ ಅಧಿಕಾರಿಗಳಿಗೂ ಇದ್ದ ನಂಟಿನ ಬಗ್ಗೆ ತನಿಖೆಯಾಗುತ್ತಿದೆ. ಈ ಪ್ರಕ್ರಿಯೆಯಲ್ಲಿ ಮುತ್ತಯ್ಯ, ತಿಮ್ಮಪ್ಪ ಶಿವಪ್ಪರ ಫೋನ್ ದಾಖಲೆ, ಆಸ್ತಿ-ಪಾಸ್ತಿ ವಹಿವಾಟು ಹಾಗೂ ವ್ಯವಹಾರಗಳ ಸಮಸ್ತ ಮಾಹಿತಿಯನ್ನು ಸಂಗ್ರಹಿಸುತ್ತಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಆದರೆ ಅಂತಹ ಸಂಭವನೀಯ ದಾಳಿಯ ಐಟಿ ಇಲಾಖೆಯಿಂದಲೇ ನಡೆಯಬೇಕೆಂಬ ನಿಯಮವೇನೂ ಇಲ್ಲ. ಭ್ರಷ್ಟ-ಖದೀಮ ಐಎಎಸ್ ಹಾಗೂ ಐಪಿಎಸ್ ಆಫೀಸರ್‌ಗಳ ವಿರುದ್ಧ ಸಿಬಿಐ ಕೂಡ ಅನೇಕ ಸಾರಿ ದಾಳಿ ನಡೆಸಿರುವ ಉದಾಹರಣೆಗಳಿವೆ ತಾನೇ?

ಆಕಾರ್ ಅಭಿನವ್ ಕನ್ಸಲ್ಟೆಂಟ್ಸ್ ಪ್ರೈ ಲಿ
ಖೇರ್ ದಂಪತಿ-ಖೇಣಿ-ರೆಡ್ಡಿ-ಯಡ್ಡಿ

ಗಣಿ ದಂಧೆಕೋರರಿಗೆ ನೇರವಾಗಿ ಸಂಬಂಧಪಡದೆ ಇರುವ ಆದರೆ ಐಟಿ ದಾಳಿಗೆ ಒಳಗಾದ ಪ್ರಮುಖ ಕಂಪನಿ ಎಂದರೆ ಈ ಆಕಾರ್ ಅಭಿನವ್ ಕನ್ಸಲ್ಟೆಂಟ್ಸ್ ಪ್ರೈವೇಟ್ ಲಿಮಿಟೆಡ್. ಇದು ಮುಂಬೈ ಮೂಲದ ಕಂಪನಿ. ನವಿಮುಂಬೈನ ಬೇಲಾಪೂರ್‌ನಲ್ಲಿ ಇದರ ಹೆಡ್ ಆಫೀಸ್ ಇದೆ. ಅಮೋಲ್ ಎಸ್. ಖೇರ್ ಹಾಗೂ ನೇಹಾ ಎಂಬ ಅನುಮಾನಾಸ್ಪದ ದಂಪತಿಗಳೇ ಹೊರನೋಟಕ್ಕೆ ಕಾಣುವ ಇದರ ಮಾಲೀಕರು. ಆದರೆ ಅನೇಕ ರಾಜಕಾರಣಿಗಳು, ದಂಧೆಕೋರರು ಬೇನಾಮಿ ಪಾಲುದಾರರಾಗಿರುವ ಸಾಧ್ಯತೆ ಇದೆ. ಹಾಲಿ ಬಳ್ಳಾರಿಯಲ್ಲಿ ರಸ್ತೆ ನಿರ್ಮಾಣ ಕಾಮಗಾರಿಯನ್ನು ಈ ಆಕಾರ್ ಕಂಪನಿ ನಡೆಸುತ್ತಿದೆ. 1995 ರಲ್ಲಿ ಶುರುವಾದಾಗ ಇದು ಆಕಾರ್ ಎಂಟರ್‌ಪ್ರೈಸಸ್ ಮಾತ್ರ ಆಗಿತ್ತು, ನಂತರ 2004 ರಲ್ಲಿ ಆಕಾರ್ ಅಭಿನವ್ ಕನ್ಸಲ್ಟೆಂಟ್ಸ್ ಆಗಿ ಲಿಮಿಟೆಡ್ ಕಂಪನಿಯಾಗಿ ಬದಲಾಯಿತು. ಅಂದರೆ ದುಡ್ಡಿರುವ ಕೆಲವರು ಇದರ ಪಾಲುದಾರರಾದರು ಎಂದರ್ಥ.

ಮುಖ್ಯಮಂತ್ರಿ ಯಡ್ಡಿ ಬಳ್ಳಾರಿಯ ರಸ್ತೆಗಳ ಅಭಿವೃದ್ಧಿಗೆಂದೇ ನೂರಾರು ಕೋಟಿ ರೂಪಾಯಿಗಳ ವಿಶೇಷ ಅನುದಾನ ಕೊಟ್ಟಿದ್ದಾರೆ. ಇದೆಲ್ಲಾ ಕಂಟ್ರ್ಯಾಕ್ಟ್ ಆಕಾರ್‌ಗೇ ಸಿಕ್ಕಿದೆ. ಇವರೆಲ್ಲರ ಒಳಸಂಬಂಧಗಳು ಹೇಗಿವೆಯೆಂದರೆ ಅಶೋಕ್ ಖೇಣಿಯ ಬೆಂಗಳೂರು-ಮೈಸೂರು ನೈಸ್ ಕಾರಿಡಾರ್ ಯೋಜನೆಯ ಪ್ಲಾನಿಂಗ್ ಹಾಗೂ ಯೋಜನಾ ವೆಚ್ಚವನ್ನು ಇದೇ ಆಕಾರ್ ಕಂಪನಿ ಮಾಡಿಕೊಟ್ಟಿತ್ತು. ಈಗಿನ ಬಿಜೆಪಿ ಸರ್ಕಾರ ಬಂದ ಮೇಲಂತೂ ರಾಜ್ಯಾದ್ಯಂತ ಸಾವಿರಾರು ಕೋಟಿ ರೂಪಾಯಿಗಳ ಕಾಮಗಾರಿ ಗುತ್ತಿಗೆಯನ್ನು ಆಕಾರ್‌ಗೆ ಕೊಡುತ್ತಿದ್ದಾರೆ. ಬಹಳ ಮುಖ್ಯವಾಗಿ ಬಳ್ಳಾರಿ ರೆಡ್ಡಿಗಳೊಂದಿಗೆ ಆಕಾರ್‌ಗೆ ವ್ಯವಹಾರಿಕ ಲಿಂಕ್‌ಗಳಿವೆ. ಹಾಗಾಗಿಯೇ ಐಟಿ ಮಂದಿ ರೇಡ್ ಮಾಡುವಾಗ ಬಳ್ಳಾರಿಯಲ್ಲಿರುವ ಆಕಾರ್‌ನ ಶಾಖಾ ಕಚೇರಿಗೂ ನುಗ್ಗಿದರು.



ಈ ಆಕಾರ್ ಕಂಪನಿಯು ಮುಂಬೈನಲ್ಲಿ ಏರ್‌ಪೋರ್ಟ್, ಎಸ್‌ಇಜೆಡ್ ನಿರ್ಮಾಣದ ಗುತ್ತಿಗೆ ಹೊಂದಿದೆ. ಗುಜರಾತ್‌ನ ಬಿಜೆಪಿ ಸರ್ಕಾರದ ಮೂಲಕ ಅಹಮದಾಬಾದ್-ದಂಡಿ ನಡುವಿನ ನ್ಯಾಷನಲ್ ಹೈವೇ ಕಾಮಗಾರಿ ನಡೆಸುತ್ತಿದೆ. ದೂರದ ಸಿಕ್ಕಿಂನಲ್ಲಿ ಏರ್‌ಪೋರ್ಟ್ ಕೆಲಸ ಮಾಡುತ್ತಿದೆ. ಬಿಜೆಪಿ-ಜೆಡಿಯು ಮೈತ್ರಿ ಸರ್ಕಾರವಿರುವ ಬಿಹಾರದಲ್ಲೂ ಸಾವಿರಾರು ಕೋಟಿ ರೂಪಾಯಿಗಳ ಸಿವಿಲ್ ಕಾಮಗಾರಿ ಗುತ್ತಿಗೆ ಲಪಟಾಯಿಸಿದೆ.

ಸಾರಾಂಶದಲ್ಲಿ ಬಿಜೆಪಿ ಸರ್ಕಾರಗಳಿರುವ ರಾಜ್ಯಗಳಲ್ಲೇ ಆಕಾರ್‌ನ ವ್ಯವಹಾರಗಳು ಜಾಸ್ತಿ ಇವೆ. ಕರ್ನಾಟಕವೂ ಸೇರಿದಂತೆ ದೇಶದ ಇತರ ರಾಜ್ಯಗಳ ಹಲವು ಬಿಜೆಪಿ ಭ್ರಷ್ಟ ರಾಜಕಾರಣಿಗಳ ಪಾಲುದಾರಿಕೆ ಆಕಾರ್ ಕಂಪನಿಯಲ್ಲಿದೆ. ಇದೇ ಲಿಂಕ್‌ನಲ್ಲೇ ಬಳ್ಳಾರಿಯ ರೆಡ್ಡಿಗಳಿಗೂ ಆಕಾರ್ ಜೊತೆ ಸಂಬಂಧವಿದೆ. ಬಹುತೇಕ ರೆಡ್ಡಿಗಳ ಗಣಿ ಕಳ್ಳತನದ ಸ್ವಲ್ಪ ಭಾಗದ ಹಣದ ಆಕಾರ್ ಅಭಿನವ್ ಕಂಪನಿಯತ್ತ ಹರಿದುಹೋಗಿರುವ ಅನುಮಾನದಿಂದಲೇ ಐಟಿ ದಾಳಿಯಾಗಿದೆ. ಇದರಲ್ಲಿ ಒಂದೋ ಯಡ್ಡಿಯ ಪಾಲುದಾರಿಕೆಯಿದೆ ಅಥವಾ ಕಮಿಷನ್‌ನ ಪಾಲಾದರೂ ಇರುವ ಸಾಧ್ಯತೆಯಿದೆ.

...ಕರ್ ಜೊತೆ ಐಟಿ ...ರಿಗಳ ಕಣ್ಣಾಮುಚ್ಚಾಲೆ



...ವನಕ್ಕೆ ದಾಳಿಯಿಟ್ಟ ಆದಾಯ ತೆರಿಗೆ
...ಮ ಈಗ ವಿವಾದಕ್ಕೆ ಗುರಿಯಾಗಿದೆ.
...ಂಧನ ಅಥವಾ ಅವರ ಕೊಠಡಿಯ
...ಕೆಂದರೆ ಪೊಲೀಸರು ಅಥವಾ ಇತರ
...ಗಳು ವಿಧಾನಸಭಾ ಸ್ಪೀಕರ್‌ರ
ಪಡೆದಿರಬೇಕೆಂಬ ಒಂದು ಹೊಸ
...ಮ ಕೆಜಿಎಫ್ ಶಾಸಕ ಸಂಪಂಗಿಯನ್ನು
ಪೊಲೀಸರು ಶಾಸಕರ ಭವನದಲ್ಲಿ
...ದಾಗ ವಿವಾದವಾಗಿ ಕೊನೆಗೆ ಆ
ಸ್ಪೀಕರ್ ಕೈಗೊಂಡಿದ್ದರು. ಹಾಗೆ ನೋಡಿದರೆ ಆಗ ಸ್ಪೀಕರ್
ಶೆಟ್ಟರ್‌ಗೆ ಮಾಹಿತಿ ನೀಡಿಯೇ ಲೋಕಾಯುಕ್ತರು ಸಂಪಂಗಿಯನ್ನು

...ಷ್ಟಿಯ ಐಟಿ ದಾಳಿ ಸ್ಪೀಕರ್ ಬೋಪಯ್ಯಗೇ ಚಳ್ಳೆಹಣ್ಣು ತಿನ್ನಿಸಿದೆ. ...ಸುರೇಶ್ ಬಾಬುರ ರೂಂ ನಂ. 330 ಹಾಗೂ ಕೂಡ್ಲಿಗಿ ಶಾಸಕ ...ರುವ ರೂಂ ನಂ. 334 ಕ್ಕೆ ಐಟಿ ಅಧಿಕಾರಿಗಳು ದಾಳಿಯಿಟ್ಟರು. ...ನ ಮುನ್ನ ನಿಯಮದಂತೆ ದಾಳಿ ಬಗ್ಗೆ ಸ್ಪೀಕರ್ ಕಚೇರಿಗೆ ...ದ ಒಂದು ಫ್ಯಾಕ್ಸ್ ಕೂಡಾ ಬಂತು. ಆದರೆ ಆ ಫ್ಯಾಕ್ಸ್ ಪೂರಾ ಕಳಿಸಿದವರ ವಿವರವಿತ್ತೇ ವಿನಃ ಮತ್ತಿನ್ನಾವ ಮಾಹಿತಿಯೂ ...ದು ಬೇಕೆಂತಲೇ ಐಟಿಯವರು ಮಾಡಿದ ತಂತ್ರ ಎಂದು ಕಚೇರಿ ಹೇಳುತ್ತಿದೆ. ಆದರೆ ಐಟಿ ಜನ ಮಾತ್ರ "ಫ್ಯಾಕ್ಸ್ ಅದು" ಎಂದು ಹೇಳಿಬಿಟ್ಟಿದ್ದಾರೆ.

...ನುನಿಸಿದರೆ ಸಾಕು. ಐಟಿ ಜನ ಅದೆಂತಾ ಕಿಲಾಡಿಗಳೆಂಬುದು ...ನಿಯಮ ಪಾಲಿಸಿದಂತೆಯೂ ಆಗಬೇಕು. ಶಾಸಕರ ರೂಂಗೆ ಹೊತ್ತೊಯ್ಯುವಂತೆಯೂ ಆಗಬೇಕೆಂಬ ತಂತ್ರವಿದು. ●

...ಖಾನ್‌ಗೆ ಸ್ವಲ್ಪ ಕ್ರಿಮಿನಲ್ ಹಿನ್ನೆಲೆಯೂ ಇದೆ. ಅನಂತಪುರಂನ ...ಬಳ್ಳಾರಿಯಲ್ಲೇ ಛಾ ಓದುತ್ತಿದ್ದ. ಅದ್ಯಾವ ಲಿಂಕ್‌ನಿಂದಲೋ ಮೂರ್ನಾಲ್ಕು ವರ್ಷದಿಂದ ರೆಡ್ಡಿಗೆ ಆಪ್ತಸಹಾಯಕನಾಗಿದ್ದಾನೆ. ...ಹೆಸರಿನಲ್ಲಿ ರೆಡ್ಡಿ ಬೇನಾಮಿಯಾಗಿ ಅದಿರು ಟ್ರೆಂಡಿಗ್ ಹಾಗೂ ... ದಂಧೆ ನಡೆಸುತ್ತಿದ್ದಾನೆ. ಈ ವರ್ಷದ ಮಾರ್ಚ್‌ನಲ್ಲಿ ...ಶ್ ಕೊಲೆಗೆ ನಡೆದ ಯತ್ನದ ಸ್ಕೆಚ್ ಹಾಕಿದ್ದೇ ಈ ಆಲೀಖಾನ್ ...ಮರ್‌ಗಳಿವೆ. ಇದೆಲ್ಲಾ ಮಾಹಿತಿಗಳಿದ್ದ ಐಟಿ ಅಧಿಕಾರಿಗಳು ಆಲೀಖಾನ್ ಮನೆಗೂ ನುಗ್ಗಿದರು. ಅವರ ಲೆಕ್ಕಾಚಾರ ತಪ್ಪಾಗಲಿಲ್ಲ. ...ಡ್ಡಿಯ ಸಹಾಯಕ ಮಧುಸೂದನನಿಗೂ ಐಟಿ ಲಾತ ಬಿದ್ದಿದೆ. ಈ ರೆಡ್ಡಿಯ ಬೇನಾಮಿ ಬ್ಯುಸಿನೆಸ್‌ಮೆನ್

ಖಾರಾಪುಡಿ-ಸ್ವಸ್ತಿಕ್ ಎಲ್ಲಿ?

...ರಿ ಬಂದರಿನಲ್ಲಿದ್ದ ನೂರಾರು ಕೋಟಿ ಬೆಲೆಯ 5 ಲಕ್ಷ ಮೆಟ್ರಿಕ್ ...ದ ಅದಿರನ್ನು ಕದ್ದು ಸಾಗಿಸಿರುವ ಸಾಹಸಿಗಳಾದ ಖಾರಾಪುಡಿ ...ಸ್ತಿಕ್ ನಾಗರಾಜ್ ಹಾಗೂ ಐಎಲ್‌ಸಿ ಸೋಮಶೇಖರ್‌ಗಳಿಗೆ ...ಆಫ್ ಆಗಿ ಹೋಗಿವೆ. ಅಕ್ರಮ ಅದಿರು ಸಾಗಾಣಿಕ, ಅಕ್ರಮ ...ನರ ಮಾಮೂಲಿ ದಂಧೆ ಜೊತೆಗೆ ಅನೇಕ ಕ್ರಿಮಿನಲ್ ಕೆಲಸಗಳಲ್ಲೂ ...ವ ಈ ತ್ರಿಮೂರ್ತಿಗಳು ಈಗ ತಲೆತಪ್ಪಿಸಿಕೊಂಡಿದ್ದಾರೆ.

...ರಾರು ಕೋಟಿಗೆ ತೂಗುತ್ತಿರುವ ಖಾರಾಪುಡಿ ಮಹೇಶ್ ...ವರ್ಷಗಳ ಹಿಂದೆ ಆಟೋ ಡ್ರೈವರ್ ಆಗಿದ್ದ. ಮನೆಯಲ್ಲಿ ... ಹುರಿದು ಖಾರದಪುಡಿ ತಯಾರಿಸಿ ಮಾರಿ ಜೀವನ ನಡೆಸುತ್ತಿದ್ದರು. ಗ್ಯಾಂಗ್ ಸೇರಿಕೊಂಡ ಮಹೇಶ್ ಸ್ವತಃ ಈಗ ಗಣಿಧಣಿ. ...ಕಟೇಶ್ವರ ಮೈನ್ಸ್ ಅಂಡ್ ಮಿನರಲ್ಸ್ ಎನ್ನುವ ಕಂಪೆನಿಯ ...ಹುತೇಕ ಇದೂ ಕೂಡಾ ರೆಡ್ಡಿಯ ಬೇನಾಮಿ ದಂಧೆ.

...ತಿ ಸ್ವಸ್ತಿಕ್ ನಾಗರಾಜ ಎಂಬ ಕ್ರಿಮಿಯ ಮೇಲೂ ದಾಳಿಯಾಗಿದೆ. ... ಹಿಂದೆ ಕಬ್ಬಿಣದ ವ್ಯಾಪಾರ ಮಾಡಿಕೊಂಡಿದ್ದ. ಸ್ವಸ್ತಿಕ್ ಸ್ಟೀಲ್ . ಎನ್ನುವ ಬೋರ್ಡ್ ಹಾಕಿಕೊಂಡು ಸಣ್ಣ ಕುಳವಾಗಿದ್ದವನು ...ಬಳ್ಳಾರಿಯ ಅಕ್ರಮ ಅದಿರು ಸಾಗಾಣಿಕೆಯ ಕಿಂಗ್‌ಪಿನ್ ...ಬೆಳೆದಿದ್ದಾನೆ. ರಿಸ್ಕ್ ಟ್ರಾನ್ಸ್‌ಪೋರ್ಟ್ ಎನ್ನಲಾಗುವ ಒಂದು ...ಗಾಣಿಕೆ ದಂಧೆಯೇ ನಾಗರಾಜನ ಕಂಟ್ರೋಲ್‌ನಲ್ಲಿದ್ದೆ ಎಂದರೆ ...ವರ ಸರ್ಜರಿಗೆ ಬೀಳದೆ ಇರುತ್ತದೆಯೇ?

...ಐಟಿ ದಾಳಿಯ ಬಲೆಗೆ ರೆಡ್ಡಿಯ ಖಾಸಾ ವಕೀಲ ಬೆಂಗಳೂರಿನ ವಿಜಯನಗರ ಶಾಸಕ ಆನಂದ್ ಸಿಂಗ್, ಐಎಲ್‌ಸಿ ಕಂಪೆನಿಯ ...ರೇಮಠ ಹಾಗೂ ಜಿ.ಜಿ.ಗಣಿ ಕಂಪೆನಿಯ ಜೆ.ಜಂಬಣ್ಣ ಕೂಡಾ ... ವರೆಲ್ಲರೂ ನೇರವಾಗಿ ಇಲ್ಲಾ ಪರೋಕ್ಷವಾಗಿ ರೆಡ್ಡಿ ಸಾಮ್ರಾಜ್ಯದ ...ದಿರುವವರೇ ಆಗಿದ್ದಾರೆ.

...ನಿಂದ ರೆಡ್ಡಿ ಮಾಮಾಗಳು ನಿಜಕ್ಕೂ ಹೆದರಿಹೋಗಿದ್ದಾರೆ. ಕಾಂಗ್ರೆಸ್ ...ಂಥರ ಸೇಡು ತೀರಿಸಿಕೊಂಡ ತೃಪ್ತಿ ಕಾಣಿಸುತ್ತಿದೆ. "ಈ ದಾಳಿ ...ಳ ಹಿಂದೆ ನಡೆದಿದ್ದರೆ ಆಪರೇಷನ್ ಕಮಲಕ್ಕೆ ರೆಡ್ಡಿ ಕೈಹಾಕುತ್ತಲೇ ...ದು ಕಾಂಗ್ರೆಗಳು ಈಗ ಲೊಚಗರಿಯುತ್ತಿದ್ದಾರೆ. ಈಗಿನ ದಾಳಿಯು ...ಪ್‌ಚುಪ್ ಮಾಡಲು ನಡೆಸಲಾಗಿದೆಯೋ ಇಲ್ಲ ಯಾವ ರಾಜಕೀಯ ಇರಧೆ ಐಟಿ ಮಂದಿ ತಾವಾಗಿಯೇ ದಾಳಿ ನಡೆಸಿದರೋ ...ಈಗ ಮಹತ್ವ ಇಲ್ಲ.

...ಪರೇಷನ್ ಆಗಿದೆ ಅಷ್ಟೇ.

...ಗೋಲಿ ಆಡುವ ವಯಸ್ಸಿನಿಂದಲೂ ಯಾವುದರಲ್ಲೂ ಸೋತಿಲ್ಲ' ರೆಡ್ಡಿ!

... ಜನರೂ ಇದ್ದಾರೆಂಬುದನ್ನು ರೆಡ್ಡಿ ●

ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್

ಸೂತಕದ ಮನೆಯ ನೂತನ ನಾಯಕ!




ಪರಮೇಶ್ವರ

ಸತತ ಚುನಾವಣಾ ಸೋಲುಗಳು, ಅಂತಃಕಲಹ ಹಾಗೂ ನಾಯಕರೆನ್ನಿಸಿಕೊಂಡವರ ಕಾಲೆಳೆಯುವ ಚಾಳಿಗೆ ಸಿಕ್ಕು ಕಾಂಗ್ರೆಸ್ ಎಂಬ ಪುರಾತನ ಪಕ್ಷ ಅಕ್ಷರಶಃ ಸೂತಕದ ಮನೆಯಂತಾಗಿದೆ. ಅದಕ್ಕೀಗ ಪಕ್ಷದ ಹೈಕಮಾಂಡ್ ಮಾಜಿ ಸಚಿವ ಡಾ.ಜಿ.ಪರಮೇಶ್ವರ್‌ರನ್ನು ಅಧ್ಯಕ್ಷರನ್ನಾಗಿ ನೇಮಿಸಿದೆ.

ಈ ಬೆಳವಣಿಗೆಯ ಬೆನ್ನಿಗೇ ದಲಿತರಿಗೆ ಪಟ್ಟಕೊಟ್ಟ ಸಂಭ್ರಮದಂತಹುದೊಂದನ್ನು ಪಸರಿಸಲು ಕಾಂಗ್ರೆಸ್ ವರಿಷ್ಠರು ಪ್ರಯತ್ನಿಸುತಿದ್ದಾರೆ. ಆದರೆ ಪರಮೇಶ್ವರ್ ಸರಳ ಸಜ್ಜನಿಕೆಯವರೆಂಬ ಸಂತಸ ಹಾಗೂ ಸದ್ಯ ಆರ್.ವಿ.ದೇಶಪಾಂಡೆಯೆಂಬ ಪೀಡೆ ತೊಲಗಿತಲ್ಲ ಎಂಬುದರ ಹೊರತಾಗಿ ಸಂಭ್ರಮಿಸಬಹುದಾದಂಥ ಯಾವ ಕಾರಣಗಳೂ ಕಾಂಗ್ರೆಸ್‌ನೊಳಗಿಲ್ಲ. ದೇವೇಗೌಡರ ಟೀಮು ಅದೆಷ್ಟೇ ತಿಪ್ಪರ ಲಾಗ ಹಾಕಿದರೂ ರಾಜ್ಯ ರಾಜಕೀಯದ ಇಂದಿನ ಸ್ಥಿತಿಯಲ್ಲಿ ಕಾಂಗ್ರೆಸ್‌ಗೆ ನಿರ್ಣಾಯಕ ಪಾತ್ರ ವಹಿಸುವ ಅವಕಾಶಗಳಿವೆ. ಆದರೆ ಅವರವರ ನಡುವೆಯೇ ಇರುವ ಭಿನ್ನಾಭಿಪ್ರಾಯಗಳು ಇಡೀ ಪಕ್ಷವನ್ನೇ ಬಿಡಿದು ಚೆಂಡಾಗಿಸುತ್ತಿವೆ. ತೀರಾ ಗಮನಿಸಿದರೆ, ಬಿಜೆಪಿಯ ಹೊಲಸು ರಾಜಕೀಯದ ಸಂದರ್ಭಗಳಲ್ಲಿ ಕಾಂಗ್ರೆಸ್ ಮಂದಿ ಸಮರ್ಥ ವಿರೋಧಪಕ್ಷವಾಗಿ ನಡೆದುಕೊಂಡ ಘಳಿಗೆಗಳು ಇಲ್ಲವೇ ಇಲ್ಲ.

ಕಾಂಗ್ರೆಸ್‌ನ ರಾಜ್ಯ ನಾಯಕರೆನ್ನಿಸಿಕೊಂಡವರು ಅಧಿಕಾರ ಹಿಡಿಯುವ, ಲಾಭ ಗಿಟ್ಟಿಸಿಕೊಳ್ಳುವ ಪೈಪೋಟಿಯಲ್ಲಿ ಬ್ಯುಸಿಯಾಗಿದ್ದಾರೆ. ಇದರ ನಡುವೆ ಪಕ್ಷ ಸಂಘಟನೆಯೆಂಬುದು ಪ್ರತೀಕ್ಷಣದ ಕೈಂಕರ್ಯವೆಂಬ ಸೂಕ್ಷ್ಮತೆಯೇ ನಾಶವಾಗಿದೆ. ಕಾಂಗ್ರೆಸ್‌ನ ಬಹುತೇಕ ಪ್ರಭೃತಿಗಳು ಚುನಾವಣೆ ಬಂದಾಗ ಬೀದಿಗಿಳಿಯುವುದನ್ನೇ ಸಂಘಟನಾ ಕೈಂಕರ್ಯವೆಂದು ಭಾವಿಸಿದ್ದಾರೆ. ಇಂಥಾ ಸಂದರ್ಭಗಳಲ್ಲಷ್ಟೇ ನಾಯಕ ಶಿಖಾಮಣಿಗಳ ಮುಸುಡಿ ನೋಡುವ ಕಾರ್ಯಕರ್ತರೂ ರೋಸಿಹೋಗಿದ್ದಾರೆ. ಇದೆಲ್ಲದರಿಂದಾಗಿ ಕಾಂಗ್ರೆಸ್ ಎಂಬ ಕೋಟೆ ಕುಸಿದು ಬಿದ್ದಿದೆ.



ದೇಶಪಾಂಡೆ

ಇಂತಹುದೊಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಪರಮೇಶ್ವರ್‌ರನ್ನು ಅಧ್ಯಕ್ಷರನ್ನಾಗಿಸಲಾಗಿದೆ. ಅವರ ಮುಂದೀಗ ಸಾವಿರ ಸವಾಲುಗಳಿವೆ. ಛಿದ್ರಗೊಂಡ ಕೋಟೆಯೊಂದರ ಅವಶೇಷಗಳನ್ನೇ ಆಯ್ದು ಮತ್ತೆ ಕಟ್ಟುವಂಥ ಕಠಿಣ ಕೆಲಸ ಅವರ ಹೆಗಲೇರಿದೆ. ಇಂದಿನ ಪರಿಸ್ಥಿತಿಯಲ್ಲಿ ಇದೆಲ್ಲ ಒಂದೇ ಪಟ್ಟಿಗೆ ಮುಗಿಯುವಂಥ ಸೂಚನೆಗಳು ಖಂಡಿತಾ ಇಲ್ಲ.

ಕಾಂಗ್ರೆಸ್‌ನಲ್ಲೀಗ ಮೂಲ ಭಿನ್ನಾಭಿಪ್ರಾಯಗಳ ಜೊತೆಗೆ ಹೊರಗಿನಿಂದ ಬಂದವರು ಹಾಗೂ ಮೂಲ ಕಾಂಗ್ರೆಸ್ಸಿಗರೆಂಬ ಎರಡು ಬಣಗಳೂ ಅಸ್ತಿತ್ವಕ್ಕೆ ಬಂದಿವೆ. ಒಬ್ಬರ ನಾಯಕತ್ವವನ್ನು ಕನಿಷ್ಠ ಪಕ್ಷದ ಹಿತ ದೃಷ್ಟಿಯಿಂದಲೂ ಒಪ್ಪಿಕೊಳ್ಳದಂಥ ನೀಚ ಮನಸ್ಥಿತಿಯೂ ತಾಂಡವವಾಡುತ್ತಿದೆ. ಪರಮೇಶ್ವರ್ ಈ ಸ್ಥಾನಕ್ಕೆ ಅರ್ಹರಾಗಿದ್ದರೂ ಕೂಡಾ ಕಾಂಗ್ರೆಸ್ ಪಾಳೆಯದೊಳಗೊಂದು ಭಿನ್ನಮತದ ಅಲೆ ಇದ್ದೇ ಇದೆ.

ಇಂಥ ಸಂದರ್ಭದಲ್ಲಿ ಎಲ್ಲರನ್ನೂ ಒಗ್ಗೂಡಿಸಿ ಕರೆದೊಯ್ಯುವ ಪ್ರಯತ್ನ ಹೈಕಮಾಂಡ್ ಕಡೆಯಿಂದಲಾದರೂ ನಡೆಯಬೇಕಿತ್ತು. ಆದರೆ ಭಿನ್ನಾಭಿಪ್ರಾಯದ ಕಂಟಕವಿದ್ದರೂ ಸಹ ಹೈಕಮಾಂಡ್ ಪರಮೇಶ್ವರ್‌ರ ಆಯ್ಕೆ ಸಂದರ್ಭದಲ್ಲೂ ಒಂದು ಯಡವಟ್ಟು ಮಾಡಿಕೊಂಡಿದೆ. ಪಕ್ಷದ ವರಿಷ್ಠರಿಗೆ ಸೂಕ್ಷ್ಮತೆಯಿದ್ದಿದ್ದರೆ, ಪ್ರಮುಖ ನಾಯಕರನ್ನೆಲ್ಲ ಒಳಗೊಂಡು ಚರ್ಚಿಸಿ, ಅಭಿಪ್ರಾಯ ಕೇಳಿ ಈ ಆಯ್ಕೆ ನಡೆಸಬೇಕಿತ್ತು. ಆದರೆ ಅದ್ಯಾವುದನ್ನೂ ಮಾಡದೆ ಏಕಾಏಕಿ ಅಧ್ಯಕ್ಷರ ಆಯ್ಕೆ ನಡೆದಿದೆಯೆಂಬ ತಕರಾರುಗಳೂ ಹಲವರ ತಲೆಯಲ್ಲಿದೆ. ಇದೇ ಇನ್ನೊಂದು ತಲೆನೋವಾಗಿ ಕಾಡಿದರೂ ಆಶ್ಚರ್ಯವಿಲ್ಲ.

ಇಂಥಾ ವಿಷಮ ಸನ್ನಿವೇಶವನ್ನ ಪರಮೇಶ್ವರ್ ಹೇಗೆ ಎದುರಿಸುತ್ತಾರೆಂಬುದೇ ಸದ್ಯದ ಪ್ರಶ್ನೆ. ವೈಯಕ್ತಿಕವಾಗಿ ಪರಮೇಶ್ವರ್ ಸಜ್ಜನರೆಂಬುದರಲ್ಲಿ ಎರಡು ಮಾತಿಲ್ಲ. ಆದರೆ ಕೆಲ ಸಂದರ್ಭಗಳಲ್ಲಿ ಇವರ ಸಜ್ಜನಿಕೆಯೇ ಧಾಡಸೀತನವಾಗಿ ಗೋಚರಿಸಿದ್ದೂ ಇದೆ. ಅಧಿಕಾರವಿರುತ್ತದೋ ಬಿಡುತ್ತದೋ ಅದು ಬೇರೆ ಪ್ರಶ್ನೆ. ಆದರೆ ತಮ್ಮದೇ ಪಕ್ಷ ವಿರೋಧ ಪಕ್ಷದ ಸ್ಥಾನದಲ್ಲಿರುವಾಗ ತಾವೂ ಅದರ ಭಾಗವಾಗಿರಬೇಕೆಂಬ ಪ್ರಜ್ಞೆ ಪ್ರತಿಯೊಬ್ಬ ನಾಯಕನಲ್ಲೂ ಇರಬೇಕಾಗುತ್ತದೆ. ಆದರೆ ಪರಮೇಶ್ವರ್ ಇದರಿಂದ ಕಳಚಿಕೊಂಡೇ ಬದುಕಿದಂತಿದ್ದಾರೆ.

ಯಾಕೆಂದರೆ, ಬಿಜೆಪಿ ಮಂದಿ ಇಷ್ಟೆಲ್ಲಾ ರಾಡಿಯೆಬ್ಬಿಸಿದರೂ, ತನ್ನದೇ ಪಕ್ಷದ ಶಾಸಕರನ್ನು ಆಪರೇಷನ್ ಕಮಲದ ಮೂಲಕ ಸೆಳೆಯಲು ಹವಣಿಸಿದರೂ ಸಹ ಪರಮೇಶ್ವರ್ ಕಡೆಯಿಂದ ಯಾವುದೇ ಪ್ರತಿಕ್ರಿಯೆಗಳಿರಲಿಲ್ಲ. ಇದೆಲ್ಲ ಒತ್ತಟ್ಟಿಗಿರಲಿ, ತಾವೇ ಹಿಂದೊಮ್ಮೆ ಕಳಂಕವಿಲ್ಲದೇ ನಿಭಾಯಿಸಿದ್ದ ಖಾತೆಯನ್ನು ಲಿಂಬಾವಳಿಯೆಂಬ ಆಸಾಮಿ ಕುಲಗೆಡಿಸಿದನಲ್ಲಾ? ಅದರ ಬಗೆಗೂ ಪರಮೇಶ್ವರ್ ಸೊಲ್ಲೆತ್ತಲಿಲ್ಲ. ಇದೆಲ್ಲವುಗಳೇ ಅವರನ್ನು ಅದೊಂದು ರೀತಿಯಲ್ಲಿ ಅಪರಿಚಿತರನ್ನಾಗಿಸಿದೆ.

ಇದೆಲ್ಲ ಏನೇ ಇರಲಿ, ಅಧಿಕಾರಾವಧಿಯಲ್ಲಿ ಯಾವುದೇ ಕಳಂಕ ಮೆತ್ತಿಕೊಳ್ಳದ, ಎಲ್ಲರನ್ನೂ ಜೊತೆಗೆ ಕರೆದುಕೊಂಡು ಹೋಗುವ, ಅಹಂಕಾರವಿಲ್ಲದ ವ್ಯಕ್ತಿತ್ವ ಪರಮೇಶ್ವರದ್ದು. ಸದ್ಯ ಇಂಥ ಸ್ನೇಹಪೂರಿತ ವಾತಾವರಣದಿಂದಲಾದರೂ ಅವರು ಕಾಂಗ್ರೆಸ್‌ನ ಅಧ್ವಾನಗಳನ್ನು ತಹಬದಿಗೆ ತರುತ್ತಾರೆಂಬ ಆಶಯವಿದೆ. ಇದೆಲ್ಲದರ ಜೊತೆಗೆ ತಮ್ಮ ನಾಯಕತ್ವದ ವಿರುದ್ಧ ಮನಸ್ಥಿತಿಯುಳ್ಳವರನ್ನು, ಜಾತೀವಾರು 'ಚಿಂತಕ'ರನ್ನೆಲ್ಲ ಒಗ್ಗೂಡಿಸಿ ಪಕ್ಷ ಕಟ್ಟುವ ಜವಾಬ್ದಾರಿಯೂ ಅವರ ಮೇಲಿದೆ.

'ನಾನು ಎಲ್ಲರನ್ನೂ ಮನ ಒಲಿಸುವ ಪ್ರಯತ್ನ ಮಾಡುತ್ತೇನೆ. ಪಕ್ಷ ಸಂಘಟನೆ ಕಷ್ಟವಲ್ಲ. ನಾನು ಮೂಲತಃ ಹೊಂದಾಣಿಕೆ ಸ್ವಭಾವದವನು. ಅತ್ತ ಎಡವೂ ಅಲ್ಲ, ಇತ್ತ ಬಲವೂ ಅಲ್ಲದ ಮಧ್ಯದ ದಾರಿಯಲ್ಲಿ ಹೋಗುವವನು ನಾನು. ಎಲ್ಲರನ್ನೂ ಒಗ್ಗಟ್ಟಿಂದ ಕರೆದೊಯ್ಯುತ್ತೇನೆ'-ಇವು ಪರಮೇಶ್ವರ್ ಅಧ್ಯಕ್ಷಗಾದಿ ವಹಿಸಿಕೊಂಡ ಬಳಿಕ ಆಡಿದ ಮಾತುಗಳು. ಇವು ಅವರೆಡೆಗಿನ ನಿರೀಕ್ಷೆಗಳನ್ನು ಗಟ್ಟಿಯಾಗಿಸಿವೆ. ಆದರೆ... ಪರಮೇಶ್ವರ್ ಇಂದಿನ ಕಾಂಗ್ರೆಸ್‌ನೊಳಗಿನ ಪರಿಸ್ಥಿತಿಯಿಂದ ಕಂಗೆಟ್ಟು ಹಾಲಿ ಪರಿಸ್ಥಿತಿಯೊಂದಿಗೇ ಹೊಂದಾಣಿಕೆ ಮಾಡಿಕೊಳ್ಳುವಂತಾಗದಿರಲಿ. ಸಮಸ್ಯೆಗಳನ್ನ ಆಚೀಚೆ ಹಾಕಿ ಎಡವೂ ಅಲ್ಲದ ಬಲವೂ ಅಲ್ಲದ ಹಾದಿಯಲ್ಲಿ ನಡೆಯುವಂಥ ಪರಿಸ್ಥಿತಿಯೂ ಬಾರದಿರಲಿ. ಅವರ ಮಾತಿನಂತೆಯೇ ಎಲ್ಲರನ್ನೂ ಒಗ್ಗಟ್ಟಿನಿಂದ ಕರೆದೊಯ್ಯುವಂತಾಗಲಿ.

ಒಟ್ಟಾರೆಯಾಗಿ ಪರಮೇಶ್ವರ್‌ರ ಸಜ್ಜನಿಕೆಯೇ ಅಸಹಾಯಕತೆಯಾಗದೆ ಕಾಂಗ್ರೆಸ್ ಮನೆಯೊಳಗಿನ ಸೂತಕ ಕಳೆದು ಬೆಳೆಯುವಂತಾಗಲಿ.

• ಬಾಗಿಲಗದ್ದೆ




ಮಲಕರೆಡ್ಡಿ

ಲಿಂಗಾಯತರಿಗೆ ಸಮಾಧಾನವಿಲ್ಲ!

ದಲಿತ ಪಂಗಡದ ಪರಮೇಶ್ವರ್ ಕೆಪಿಸಿಸಿ ಅಧ್ಯಕ್ಷಗಾದಿ ಹಿಡಿಯುತ್ತಲೇ ಕಾಂಗ್ರೆಸ್‌ನ ಲಿಂಗಾಯತ ಪಾಳೆಯದಲ್ಲಿ ಅಸಹನೆಯೊಂದು ಕೊತಗುಡಲಾರಂಭಿಸಿದೆ.

ಪ್ರಸ್ತುತ ರಾಜಕೀಯ ಸಂದರ್ಭದಲ್ಲಿ ಪರಮೇಶ್ವರ್ ಅಧ್ಯಕ್ಷತೆಯಲ್ಲಿ ಪಕ್ಷಕ್ಕೆ ಪೆಟ್ಟು ಬೀಳುತ್ತದೆಯೇ ವಿನಃ ಉಪಯೋಗವಾಗಲಾರದು ಎಂಬುದು ಕೆಲ ಲಿಂಗಾಯತ ಲೀಡರುಗಳ ವಾದ.


ಇದರ ಪ್ರಕಾರ ಬಿಜೆಪಿಯ ಲಿಂಗಾಯತ ಕೇಂದ್ರಿತ ರಾಜಕಾರಣಕ್ಕೆ ಸೆಡ್ಡು ಹೊಡೆಯಬೇಕೆಂದರೆ, ಲಿಂಗಾಯತನೊಬ್ಬನನ್ನು ಅಧ್ಯಕ್ಷನನ್ನಾಗಿಸಬೇಕಿತ್ತು, ಯಾಕೆಂದರೆ ರಾಜ್ಯದ ಇನ್ನೂರ ಇಪ್ಪತ್ನಾಲ್ಕು ಮತ ಕ್ಷೇತ್ರಗಳಲ್ಲಿ ಎಂಬತ್ತೈದು ಲಿಂಗಾಯತ ಪ್ರಾಬಲ್ಯವಿರುವ ಕ್ಷೇತ್ರಗಳಾಗಿವೆ. ಇದರಲ್ಲಿ ನಲ್ವತ್ತೈದು ಕ್ಷೇತ್ರಗಳು ನಿರ್ಣಾಯಕವಾಗಿವೆ. ಇದೀಗ 67-68 ಶಾಸಕರೂ ಕೂಡಾ ಲಿಂಗಾಯತರಾಗಿದ್ದಾರೆ. ಇಂಥಾ ಸಂದರ್ಭದಲ್ಲಿ ಲಿಂಗಾಯತ ನಾಯಕರೇ ಕೆಪಿಸಿಸಿ ಅಧ್ಯಕ್ಷರಾಗಿದ್ದಿದ್ದರೆ ಬಿಜೆಪಿಗೆ ಫೈಟ್ ಕೊಡಲು ಸಾಧ್ಯವಾಗುತ್ತಿತ್ತು.



ಅಸಹನೆ ಹೊಂದಿರುವ ಗುಂಪಿನ ಇನ್ನೊಂದು ವಾದದ ಪ್ರಕಾರ, ಪರಮೇಶ್ವರ್ ರಾಜ್ಯದ ಬಹುತೇಕ ಭಾಗದ ಕಾಂಗ್ರೆಸ್ ಕಾರ್ಯಕರ್ತರಿಗೇ ತನ್ನನ್ನು ತಾನು ಪರಿಚಯಿಸಿಕೊಳ್ಳುವ ಪರಿಸ್ಥಿತಿಯಿದೆ. ಬಿಜಾಪುರದಾಚೆಯ ಸೀಮೆಯಲ್ಲಂತೂ ಇವರು ತೀರಾ ಅಪರಿಚಿತ. ಇಂಥಾ ಪರಿಸ್ಥಿತಿಯಲ್ಲಿ ಪಕ್ಷ ಸಂಘಟನೆ ಸಾಧ್ಯವಿಲ್ಲ. ತೀರಾ ಪರಮೇಶ್ವರ್ ದಲಿತರೆಂಬುದೂ ಸಹ ಉಪಯೋಗಕ್ಕೆ ಬರುವಂತಿಲ್ಲ. ಸದ್ಯ ಕಾಂಗ್ರೆಸ್‌ನ ಲಿಂಗಾಯತ ಪಡೆಯ ನಡುವೆ ಶಾಮನೂರು ಶಿವಶಂಕರಪ್ಪ, ವೀರಣ್ಣ ಮತ್ತಿಕಟ್ಟಿ, ಮಲಕರೆಡ್ಡಿ ಹಾಗೂ ಎಸ್.ವಿ.ಸಿದ್ನಾಳ್ ಮುಂತಾದವರ ಹೆಸರುಗಳು ಅಧ್ಯಕ್ಷಗಾದಿಯ ರೇಸ್‌ನಲ್ಲಿದ್ದವು. ಆದರೀಗ ಅದೆಲ್ಲ ತಲೆಕೆಳಗಾಗಿ ಅದೇ ಭಿನ್ನಮತ ಸೃಷ್ಟಿಸುವ ಹಂತಕ್ಕೆ ಬೆಳೆಯುತ್ತಿದೆ.

ಇದೀಗಲೇ ದಲಿತ ಪಂಗಡದ ಮಲ್ಲಿಕಾರ್ಜುನ ಖರ್ಗೆ, ಮೋಟಮ್ಮ, ಮುನಿಯಪ್ಪ, ಹೆಚ್.ಹನುಮಂತಪ್ಪ ಮುಂತಾದವರಿಗೆಲ್ಲ ಸೂಕ್ತ ಸ್ಥಾನಮಾನ ಕಲ್ಪಿಸಲಾಗಿದೆ. ಎಸ್ಸೆಂ ಕೃಷ್ಣ ಡಿ.ಕೆ.ಶಿವಕುಮಾರ್ ಮುಂತಾದ ಒಕ್ಕಲಿಗರಿಗೂ ಸಲ್ಲಬೇಕಾದದ್ದು ಸಂದಿದೆ. ಆದರೆ ಲಿಂಗಾಯತರಿಗೆ ಮಾತ್ರ ಪದೇಪದೆ ಅನ್ಯಾಯವಾಗುತ್ತಿದೆ. ಇದು ಅಸಹನೆಯ ಇನ್ನೊಂದು ಮಗ್ಗುಲು.

ಪರಮೇಶ್ವರ್ ಇದನ್ನೆಲ್ಲ ಹೇಗೆ ಮೀರಿ ಮುನ್ನಡೆಯುತ್ತಾರೆಂಬುದೇ ಸದ್ಯದ ಕುತೂಹಲ.




ಉತ್ತರ ಕನ್ನಡ: ಕಂತ್ರಿ ಕಾಗೇರಿಗೆ ಆಟ ಮಳೆ ಸಂತ್ರಸ್ತರಿಗೆ ಪ್ರಾಣಸಂಕಟ !



ಆ ಪುಟ್ಟ ಮಜರೆಯ ಹೆಸರು 'ಝುರಿವಾಡ' ಉತ್ತರ ಕನ್ನಡದ ಜಿಲ್ಲಾ ಕೇಂದ್ರ ಕಾರವಾರದ ಝುರಿವಾಡದಲ್ಲಿ ಕಳೆದೊಂದು ವರ್ಷದಿಂದ ನೋವಿನ ಝುರಿ ಉಕ್ಕುಕ್ಕುತ್ತಲೇ ಇದೆ! ಇಲ್ಲಿಯ ಮಹಾಮಳೆ ಸಂತ್ರಸ್ತರನ್ನು ಪ್ರಕೃತಿ ವಿಕೋಪಕ್ಕಿಂತ ಪ್ರಭುತ್ವದ ಪಾತಕವೇ ಘೋರವಾಗಿ ಕಾಡುತ್ತಿದೆ!!

ಕಾರವಾರದಲ್ಲಿ ಜಲಪ್ರಳಯವಾಗಿ ಬರೋಬ್ಬರಿ ವರ್ಷ ಒಂದಾಯ್ತು. ಕಳೆದ 2009 ರ ಅಕ್ಟೋಬರ್ 2 ರಂದು ಭಯಾನಕ ಮೇಘ ಸ್ಫೋಟವಾಗಿತ್ತು. ಒಂದೇ ದಿನ ಧೋ ಎಂದು ಸುರಿದ ನಿಕ್ಕಿ 500 ಮಿಮಿ ಮಳೆಗೆ ಇಡೀ ಕಾರವಾರ ಕಂಗಾಲಾಗಿಹೋಗಿತ್ತು. ಆಗ ತಾಲ್ಲೂಕಿನಲ್ಲಾದ ಕಷ್ಟ-ನಷ್ಟ, ಸಾವು-ನೋವು ಒಂದೆರಡಲ್ಲ. ಕಾರವಾರದಿಂದ ಎಂಟೇ ಕಿ.ಮೀ. ದೂರದಲ್ಲಿರುವ ಕಡವಾಡ ಗ್ರಾಮದ ಮಾಡಿಬಾಗ ಏರಿಯಾದ ಝುರಿವಾಡ ಎಂಬಲ್ಲಿ ಎಕರೆಗಟ್ಟಲೆ ವಿಸ್ತಾರದ ದೊಡ್ಡ ಗುಡ್ಡವೊಂದು ಕುಸಿದುಬಿದ್ದಿತ್ತು.



ಗುಡ್ಡದ ತಪ್ಪಲಲ್ಲಿದ್ದ ಒಂದಿಷ್ಟು ಮನೆಗಳು ನೋಡುನೋಡುತ್ತಿದ್ದಂತೆಯೇ ಸಮಾಧಿಯಾಗಿ ಹೋದವು! ಇನ್ನೊಂದಿಷ್ಟು ಧ್ವಂಸವಾಗಿ ಹೋದವು ಅಥವಾ ಜಖಂ ಆಗಿಹೋದವು. ಹತ್ತೊಂಭತ್ತು ಮಂದಿ ಮಣ್ಣಡಿ ಹೂತು ಹೋದರು. ಇವರ ದೇಹಗಳು ಅದೆಷ್ಟು ಅಡಿಯಲ್ಲಿದ್ದವೆಂದರೆ ಎರಡು-ಮೂರು ದಿನ ಜೆಸಿಬಿ ಬಳಸಿ ಹೊರತೆಗೆಯಬೇಕಾಯ್ತು. ಇಡೀ ತಾಲ್ಲೂಕಲ್ಲಿ ಆಕ್ರಂದನ; ಝುರಿವಾಡದಲ್ಲಿ ನರಕಯಾತನೆ! ಈ ದುರಂತದಲ್ಲಿ ಹೆಚ್ಚುಕಮ್ಮಿ 50 ಕುಟುಂಬಗಳು ಬೀದಿಪಾಲಾಗಿ ಹೋದವು!!

ದುರಂತ ಸಂಭವಿಸಿದ್ದೇ ತಡ, ಕಾದು ಕುಳಿತವರಂತೆ ಪುಢಾರಿಗಳ ದಂಡೇ ಕಾರವಾರಕ್ಕೆ ಲಗ್ಗೆಯಿಟ್ಟಿತು! ಸ್ವಯಂಘೋಷಿತ ನೂರಾರು ನಾಯಕಾಗ್ರೇಸರು ಬಂದು ಸಾವಿರಾರು ಭರವಸೆ ಬಿತ್ತಿ ಹೋದರು. ಸಾಕ್ಷಾತ್ ಸಿಎಂ ಯಡ್ಡಿಜೀಯೇ ಬಿಜಯಂಗೈದು ಮೊಸಳೆ ಕಣ್ಣೀರು ಸುರಿಸಿಹೋದರು! ಆರೇ ಆರು ತಿಂಗಳಲ್ಲಿ 50 ನಿರಾಶ್ರಿತ ಕುಟುಂಬಗಳಿಗೆ ಮನೆ ಕಟ್ಟಿಕೊಡುವುದಾಗಿ ವೀರಾವೇಶದಲ್ಲಿ ಘೋಷಿಸಿದ್ದರು. ಆಳುವ ಪಕ್ಷದ ಖೂಳರಾದ ಜಿಲ್ಲಾ ಮಂತ್ರಿ ವಿಶ್ವೇಶ್ವರ ಹೆಗಡೆ ಕಾಗೇರಿ, ಸಂಸದ ಅನಂತ್ಮಾಣಿ ಮತ್ತು ಸ್ಥಳೀಯ ಸಚಿವ ಆನಂದ್ ಅಸ್ನೋಟಿಕರ್ ಆಪದ್ಬಾಂಧವರಂತೆ ಪೋಸು ಕೊಟ್ಟದ್ದೇ ಕೊಟ್ಟದ್ದು! ಸಂತ್ರಸ್ತ ಕುಟುಂಬದ ವಿದ್ಯಾವಂತರಿಗೆ ಸರ್ಕಾರಿ ನೌಕರಿಯ ಸುಳ್ಳು-ಅಸಾಧ್ಯ ಭರವಸೆಯೂ ಟೀಮ್ ಯಡ್ಡಿಯಿಂದ ಬಿತ್ತರವಾಗಿತ್ತು...

ಆದರೆ ಇವತ್ತಿಗೂ ಝುರಿವಾಡದ ಮಹಾಮಳೆ ಸಂತ್ರಸ್ತರಿಗೆ ಬದುಕು ಕಟ್ಟಿಕೊಳ್ಳಲಿಕ್ಕೆ ಆಗಿಲ್ಲ, ಹೊಸ ಜೀವನ ಶುರು ಮಾಡಲು ಯಡ್ಡಿಯ ಭ್ರಷ್ಟ ಸರ್ಕಾರಿ ವ್ಯವಸ್ಥೆ ಈ ನಿರಾಶ್ರಿತರ ಬಿಡುತ್ತಿಲ್ಲ, ಸರ್ಕಾರದಿಂದ ಈ ದಿಕ್ಕೆಟ್ಟ ಮಂದಿಗೆ ಬಿಲ್ಲಿ ಪ್ರಯೋಜನವೂ ಆಗಿಲ್ಲ. ಚಡ್ಡಿ ಗ್ಯಾಂಗಿನ 'ಸೇವಾ ಭಾರತಿ' ಎಂಬ ಸಂಸ್ಥೆಗೆ ತಲಾ ಒಂದು ಲಕ್ಷದಲ್ಲಿ 50 ಮನೆ ಕಟ್ಟಿಕೊಡಲು ಬಿಜೆಪಿ ಸರ್ಕಾರ ಕಂಟ್ರಾಕ್ಟು ಕೊಟ್ಟಿದೆ. ಈ ದೇಶಭಕ್ತ ಸಂಘ ಪರಿವಾರಿಗಳಿಂದ ಬಿಸಿನೆಸ್ ಆಯ್ತು ಹೊರತು ವರ್ಷ ಕಳೆದರೂ ಒಂದೇ ಒಂದು ಮನೆ ಪೂರ್ತಿ ನಿರ್ಮಿಸಲು ಸಾಧ್ಯವಾಗಿಲ್ಲ, ನಿರ್ಮಾಣ ವೆಚ್ಚ ಈಗ ಒಂದೂವರೆ ಲಕ್ಷದಷ್ಟಾಗುತ್ತದೆ ಎಂದು ಸೇವಾ ಭಾರತಿ ಭೂಪರು ಸ್ವಾಹಾ ರಾಗ ತೆಗೆದಿದ್ದಾರೆ. ಈ ಮನೆಗಳು ಮೂರ್ಮೂರು ದನ ಕಟ್ಟಲು ಲಾಯಕ್ಕಾಗಿವೆಯಷ್ಟೇ. ಇಲ್ಲಿ ಮನುಷ್ಯರು ವಾಸಿಸುವುದು ಕಷ್ಟ. ಹಾಗಾಗಿ ನಿರಾಶ್ರಿತರಿಗೆ ಈ ಮನೆಗಳಿಗೆ ಹೋಗುವ ಮನಸ್ಸೇ ಇಲ್ಲ. ಪುನರ್ವಸತಿ ಕೇಂದ್ರದಲ್ಲಿ ಮೂಲಭೂತ ಸೌಕರ್ಯಗಳೂ ಅಷ್ಟಕ್ಕಷ್ಟೇ.

ಸಮರ್ಪಕ ಸೂರಿನ ನಿರೀಕ್ಷೆಯಲ್ಲಿ ಕಾಲ ಕಳೆಯುತ್ತಿರುವ ನಿರಾಶ್ರಿತರ ಗೋಳು ಹೇಳತೀರದು. ಇವರೆಲ್ಲ ಅಕ್ಷರಶಃ ಬೀದಿ ಪಾಲಾಗಿದ್ದಾರೆ. ಕೆಲವರು ಹಿಂಸಾತ್ಮಕವಾದ ಸರ್ಕಾರಿ ಶೆಡ್‌ನಲ್ಲಿ ಕಾಲ ಕಳೆಯುತ್ತಿದ್ದರೆ, ಇನ್ನೊಂದಷ್ಟು ಮಂದಿ ಸಂಬಂಧಿಕರ ಮನೆ ಬಾಗಿಲಲ್ಲಿ ಬಿದ್ದು ಒದ್ದಾಡುತ್ತಿದ್ದಾರೆ. ಶೆಡ್‌ನಲ್ಲಿ ಅನ್ನ-ಮೀನ್ ಪಳ್ದಿ ಬೇಯಿಸುವುದೇ ದೊಡ್ಡ ಯಾತನೆಯ ಕೈಂಕರ್ಯ! ಮನೆ-ಮನ ಕಳೆದುಕೊಂಡವರ ಸಂಕಟದ ಕತೆ ಒಂದಾದರೆ, ಇನ್ನೊಂದೆಡೆ ಗುಡ್ಡ ಮತ್ತೆ ಜರಿವ ಭಯದಿಂದ ಮನೆ-ಮಠ ಬಿಟ್ಟು ಬಂದವರ ವ್ಯಥೆ!! ಬದುಕಿಗೆ ಆಧಾರವಾಗಿದ್ದ ತೆಂಗು, ಹಣ್ಣು-ಹಂಪಲದ ಬಾಯಿತ, ಉಪಕಸುಬಿನ ಸಲಕರಣೆಗಳೆಲ್ಲ ಮಣ್ಣಡಿ ಮಣ್ಣಾಗಿ ಹೋಗಿದೆ! ಇವರ ಪಾಲಿಗೆ ಸರ್ಕಾರ ಇದ್ದೂ ಸತ್ತಂತಾಗಿದೆ. ಬದುಕು ಬವಣೆಯಾಗಿದೆ.



ಝುರಿವಾಡದಲ್ಲಿ ಇವತ್ತಿಗೂ ಸೂತಕ ಹಾಗೇ ಹೆಪ್ಪುಗಟ್ಟಿಕೊಂಡೇಯಿದೆ! ಕಂಗೆಟ್ಟಿರುವ ನಿರಾಶ್ರಿತರಲ್ಲಿನ್ನೂ ಚೈತನ್ಯವೇ ಮೂಡಿಲ್ಲ. ದುಃಸ್ವಪ್ನ ಅವರನ್ನು ಸತಾಯಿಸುತ್ತಲೇ ಇದೆ. ಬೆಂಬಿಡದ ಆ ಸಾವು-ನೋವು ಬದುಕುಳಿದವರನ್ನು ನಿತ್ಯ ಹೈರಾಣಾಗಿಸುತ್ತಿದೆ. ಒಂದೊಂದು ಕುಟುಂಬದಲ್ಲಿ ಒಂದೊಂದು ಬಗೆಯ ಸಂಕಟ-ಸಮಸ್ಯೆ. ಕಳೆದುಕೊಂಡವರ ಉಳಿದುಕೊಂಡಿರುವ ಫೋಟೋ-ನೆನಪು ಎದೆಗವುಚಿಕೊಂಡು ರೋದಿಸುವ ನಿರಾಶ್ರಿತರ ಕಂಡರೆ ಎಂಥ ಕಲ್ಲೆದೆಯೂ ಝುಲ್ಲೆನ್ನದಿರದು!! ಈ ಅಸಹಾಯಕರಿಗೆ ಧೈರ್ಯ ತುಂಬುವ, ಬದುಕು ರೂಪಿಸಿಕೊ... ನೆರವು ಒದಗಿಸುವ ಇಚ್ಛಾಶಕ್ತಿ ಜಿಲ್ಲೆಯನ್ನು ಆಳುತ್ತಿರುವ ಹೊ... ಭಂಡರಿಗಿಲ್ಲ!!

ಝುರಿವಾಡದ ನತದೃಷ್ಟರು ವಿಲಿವಿಲಿ ಒದ್ದಾಡುತ್ತಿದ್ದರೂ ಜಿಲ್ಲಾ ಮಂತ್ರಿ ಮಹಾಶಯ ಕಾಗೇರಿಗೆ ಖಬರೇ ಇಲ್ಲ! ಈ ಮಂದಿ... ನೋಡಲಿಕ್ಕೂ ಕಾಗೇರಿ ಮಾಣಿಗೆ ಪುರುಸೊತ್ತಿಲ್ಲ. ಕಿಕ್‌ಬ್ಯಾಕ್, ಮಂತ್ಲಿ, ಮಾಮೂಲಿ ಸಿಗುವ 'ಮಂತ್ರಿಗಿರಿ ದಂಧೆ'... ಬ್ಯೂಸಿ! ಜತೆಗೆ ಝುರಿವಾಡದ ನಿರಾಶ್ರಿತರ ನೆಗ್ಲೆಕ್ಟ್... ಸ್ಥಳೀಯ ಮಂತ್ರಿ (ಮಾಜಿ) ಅಸ್ನೋಟಿಕರ್ ಎಂಬ ತ... ನರ್ವಸ್ ಆಗ್ತಾನೆಂಬ ಧೂರ್ತ ದೂರಾಲೋಚನೆ... ಅಸ್ನೋಟಿಕರ್‌ನಿಗೋ ಝುರಿವಾಡದ ಸಮಸ್ಯೆ ಜಿಲ್ಲಾ ಮಂತ್ರಿ ಕಾಗೇರಿಯದೆಂದು ಬಿಂಬಿಸಿ ಅದರಲ್ಲಾತ... ತೋರಿಸುವ ಚಪಲ.

ಇಂಥ ಖತರ್‌ನಾಕ್ ಮುಖಂಡರ ಮಧ್ಯೆ ಸಿಕ್ಕಿ... ಬದುಕು ಕಳೆದುಕೊಂಡಿರುವ ಝುರಿವಾಡದ ... ನಿತ್ಯ ಕಣ್ಣೀರಿನಲ್ಲಿ ಕೈತೊಳೆಯುತ್ತಿದ್ದಾರೆ. ಮನೆಮು... ಸರ್ಕಾರಕ್ಕೆ ಹಿಡಿಶಾಪ ಹಾಕುತ್ತಿದ್ದಾರೆ. ತನ್ನ ಹಡಬೆ... ಮಹಾಮಳೆ ಸಂತ್ರಸ್ತರನ್ನು ಬಲಿ ಪಡೆಯುತ್ತಿರು... ಆ ಅಮಾಯಕರ ಶಾಪ ತಟ್ಟದೇ ಹೋದೀತೇ?!

ಸೂತಕದಲ್ಲೂ ಸಂಭ್ರಮ !!



ನಾಲಾಯಕ್ ಜಿಲ್ಲಾ ಮಂತ್ರಿ ಕಾಗೇರಿಗೆ ತನ್ನ ಉಸ್ತುವಾರಿ ಜಿಲ್ಲೆಯಲ್ಲೊಂದು ಮಳೆ ನಿರಾಶ್ರಿತರ ನರಕವಿದೆಯೆಂಬ ಸಣ್ಣ ಕಲ್ಪನೆಯೂ ಇದ್ದಂತಿಲ್ಲ. ಆತ ಸೂತಕದ ಮನೆಯಂತಾಗಿರುವ ಉತ್ತರ ಕನ್ನಡದಲ್ಲಿ ಸಂಭ್ರಮದಿಂದ ಗೂಟದ ಕಾರಲ್ಲಿ ಸವಾರಿ ಮಾಡುವುದು, ಸಿಕ್ಕಿಸ್ಟು ಬಾಚಿಕೊಂಡು ಮುಕ್ಕುವುದು ನೋಡಿದರೆ ಪಕ್ಕಾ ರಕ್ಕಸನಂತೆ ಭಾಸವಾಗುತ್ತಾನೆ. ಅಸಲಿಗೆ ಈ ಕಾಗೇರಿಗೆ ಕಾರವಾರದ ಲೋಕಲ್ ಮಂತ್ರಿಯಂತಾಗಿದ್ದ ಅಸ್ನೋಟಿಕರ್ ಮೇಲಿನ ಜಿದ್ದಿನಿಂದಲೇ ಝುರಿವಾಡದ ನಿರಾಶ್ರಿತರ ಸಮಸ್ಯೆ ಪರಿಹಾರವಾಗದೇ ಉಲ್ಬಣಿಸಿದೆ. ಅಸ್ನೋಟಿಕರ್‌ನ ಹಣಿಯಲೆಂದೇ ಕೊಳಕು ವಿಪ್ರೋತ್ತಮ ಕಾಗೇರಿ ಝುರಿವಾಡದ ಸಂತ್ರಸ್ತರ ಸತಾಯಿಸುತ್ತಿದ್ದಾನೆಂಬುದು ಜಿಲ್ಲೆಯಲ್ಲಿ ಜನಜನಿತ!

ಸೋಗಲಾಡಿ ಸಂಸದ ಅನಂತ್‌ಕುಮಾರ್ ಹೆಗಡೆ ಯಾನೆ ಅನಂತ್ಮಾಣಿಯ ಬಂಡಲ್ ಬಾಜಿ ನಾಟಕ ಇನ್ನೂ ರೋಚಕ. ಈ ಚಡ್ಡಿ ತನ್ನ 'ಕದಂಬ' ಎಂಬ ಗೋಲ್‌ಮಾಲ್ ಟ್ರಸ್ಟ್‌ನಿಂದ ಝುರಿವಾಡಕ್ಕೆ ನೆರವಾಗುತ್ತೇನೆಂದು ಹೇಳಿದ್ದ. ದು... ತಂದೆ-ತಾಯಿ-ಸಹೋದರರನ ಕಳೆದುಕೊಂಡು ಅನಾಥರಾಗಿರುವ ಅಂಜಲಿ, ಪ್ರೀತಿ ಮತ್ತು ಮನೀಷಾ ಎಂಬ ಹುಡುಗಿಯರಿಗೆ ಉದ್ಯೋಗ ಕೊಡಿಸು... ಭೋಂಗು ಬಿಟ್ಟಿದ್ದ. ಆದರೆ ಆ ಹುಡುಗಿಯರಿಗೆ ಯಾವ ಸಹಾಯವೂ ಸಿಗದೆ ತಬ್ಬಲಿಗಳಂತಾಗಿ ಯಾರ್ಯಾರದೋ ಮನೆಯಂಗಳದಲ್ಲಿ ದಿನ ಕಳೆಯು... ಉದ್ಯೋಗ ಒದಗಿಸುವುದಾಗಿ ಹೇಳಿದ್ದ ಮಹಾನುಭಾವನ ಅಡ್ರೆಸ್ಸೇ ಇಲ್ಲ! ಝುರಿವಾಡ ಮರೆತಿರುವ ಅನಂತ್ಮಾಣಿ ಸತ್ತು ಹೋಗಿರುವ ಯಡ್ಡಿಯ ಸ... ಜೀವ ತರುತ್ತೇನೆಂದು 'ಕತ್ತೆ ದಂಧೆ'ಯಲ್ಲಿ ನಿರತನಾಗಿದ್ದಾನೆ. ನಿತ್ಯ ಬೋಗಸ್ ಸುದ್ದಿ ಸೃಷ್ಟಿಸುತ್ತಾ ಹಾಸ್ಯಾಸ್ಪದನಾಗುತ್ತಿದ್ದಾನೆ.


ಈ ಕ್ಷೇತ್ರದ ಶಾಸಕ ಕಂ ಮಾಜಿ ಮಂತ್ರಿ ಆನಂದ್ ಅಸ್ನೋಟಿಕರ್ ಯಡ್ಡಿ ಸರ್ಕಾರದ ವಿರುದ್ಧ ಬಂಡೆದ್ದು 'ದೇಶಭ್ರಷ್ಟ'ನಾಗಿ ರೆಸಾರ್ಟ್‌ನಿಂದ ರೆಸಾ... ಅಂಡಲೆಯುತ್ತಿದ್ದಾನೆ. ಮಂತ್ರಿಯಾಗಿದ್ದಾಗಲೇ ಝುರಿವಾಡದತ್ತ ತಲೆಹಾಕದ ಅಸ್ನೋಟಿಕರ್ ಮಾಜಿಯಾದ ನಂತರ ನಿರಾಶ್ರಿತರ ಬಗ್ಗೆ ಕರುಣೆ ತೋರುವು... ಒಟ್ಟಿನಲ್ಲಿ ಈ ಹಡಬೆ ಮಂತ್ರಿ-ಶಾಸಕ-ಸಂಸದರ ಸಮಯಸಾಧಕ ರಾಜಕಾರಣದಿಂದ ಇಡೀ ಉತ್ತರ ಕನ್ನಡವೇ ಬರ್ಬಾದಾಗಿ ಹೋಗಿದೆ.

ಜಿಲ್ಲೆಯ ಅಧೋಗತಿ-ದುರಂತಕ್ಕೆ ಝುರಿವಾಡ ಸಣ್ಣ ಸಿಂಬಲ್! ಕಾಗೇರಿಯ ಕಳ್ಳಾಟಕ್ಕೊಂದು ಸ್ಯಾಂಪಲ್!

ಬ್ಬಳ್ಳಿ: ರಕ್ತ ಚರಿತ್ರೆಯ ಗ್ಯಾಂಗ್ ವಾರ್
ಜವಾಡನ ಸ್ಕೆಚ್‌ಗೆ ಪಲ್ಲಿ ಫಿನಿಶ್!



ಸತ್ತು ಬಿದ್ದಿರುವ ಪಲ್ಲಿ...



ಪಲ್ಲಿ


ರಜನಿ ಹುಬ್ಬಳ್ಳಿ ಬ್ಲಾಕ್ ಮಟ್ಟದ ಕಾಂಗ್ರೆಸ್ ಅಧ್ಯಕ್ಷನಾಗಿ ಕೂಡಾ ಕೆಲಸ ಮಾಡುತ್ತಿದ್ದ. ಇದರಿಂದಲೇ ರಜನಿ ದಂಧೆ ಕೂಡಾ ಸಲೀಸಾಗಿ ನಡೆಯುತ್ತಿತ್ತು. ವಸೂಲಿ ದಂಧೆಯಲ್ಲಿ ಆದ ಬೆಳವಣಿಗೆಗಳೇ ಇಂದು ಗ್ಯಾಂಗ್‌ವಾರ್‌ಗಳು ಹೆಚ್ಚಲು ಕಾರಣವಾಯಿತು. ಅದರ ಮೊದಲ ಅಧ್ಯಾಯವೇ ಪಲ್ಲಿಯ ರಕ್ತಸಿಕ್ತ ಅಂತ್ಯ.

ಹುಬ್ಬಳ್ಳಿ ಕೋಯಿನ್ ರೋಡಿನ ಅಪ್ಸರಾ ಟಾಕೀಸಿನ ಹೊರಗೆ ತನ್ನ ಗ್ಯಾಂಗಿನೊಂದಿಗೆ ಮುಗಿಬಿದ್ದ ರಜನಿ ಪಲ್ಲಿಯನ್ನ ಫಿನಿಶ್ ಮಾಡಿದ್ದಾನೆ. ಇದರಿಂದ ಇಡೀ ಹುಬ್ಬಳ್ಳಿಯ ಪುಡಿ ರೌಡಿ ಗ್ಯಾಂಗ್‌ಗಳೆಲ್ಲಾ ಗಾಬರಿಗೊಂಡು ಗೂಡು ಸೇರಿವೆ. ಆದರೆ ಇವರು ಕೊಡುವ ಮಾಮೂಲಿ ತಿಂದು ತೆಪ್ಪಗಾಗುತ್ತಿದ್ದ ಖಾಕಿ ಪಿಂಡಗಳು ಮಾತ್ರ ಕೈಚೆಲ್ಲಿ ಕುಳಿತಿರುವುದು ದುರಂತವೇ ಸರಿ.

...ಬಹಗಲೇ ಹುಬ್ಬಳ್ಳಿಯ ಕೋಯಿನ್ ...ಹತ್ತರದ ಕೋಡಿ ಹರಿದಿದೆ. ಸಣ್ಣ ಸಣ್ಣ ...ೊಂಡು ಮೈ ಪರಚಿಕೊಳ್ಳುತ್ತಿದ್ದ ಇಲ್ಲಿಯ ...ರೌಡಿಗಳು ಏಕಾಏಕಿ ...ಗೆ ಕೈಹಾಕಿದ್ದಾರೆ. ...ತಕ ಲೋಕದ ...ಕಾರಪ್ಪ ಬಿಜವಾಡನ ...ಗಳು ಈಗಲೂ ...ಕವನ್ನು ಬಿಟ್ಟಿಲ್ಲ ... ಬಿಜವಾಡ ...ವ ರಜನಿಕಾಂತ ...ತನ್ನ ಪರಮ ...ಇಂದಿರಾನಗರದ ರೌಡಿ ...ರ್ಫ ಪಲ್ಲಿ ವಲ್ಲೂರನ ...ುವ ಮೂಲಕ ...ಳಿಸಿದ್ದಾನೆ.

...ರಣದ ಒಂದು ... ಇಟ್ಟುಕೊಂಡು ...ನ ಒಂದು ರೌಡಿ ಪ್ರಪಂಚವನ್ನು ಹುಟ್ಟು ...ರುವ ರಜನಿಕಾಂತ ಬಿಜವಾಡ ಅಕ್ರಮ ... ಎಗ್ಗಿಲ್ಲದೆ ನಡೆಸಿಕೊಂಡು ಬಂದವನು. ...ಬ್ಬಳ್ಳಿ ತನ್ನದಾಗಬೇಕು, ಇಲ್ಲಿಯ ಮರಿ ... ತನ್ನನ್ನು ಡಾನ್ ಅಂತಾ ...ಳ್ಳಬೇಕು ಎಂಬ ಹುಚ್ಚು ಹಂಬಲಕ್ಕೆ ಬಿದ್ದಿದ್ದ ...ಗ ಹೆಣವಾಗಿ ಬಿದ್ದ ಪಾಲಾಕ್ಷ ಅಲಿಯಾಸ್ ... ಸಾಥ್ ಕೊಟ್ಟಿದ್ದ. ಕ್ರಮೇಣ ...ಲ್ಲಿ ಆದ ಜಗಳವೊಂದರಿಂದ ...ಲಿಸಿಕೊಂಡ ರೌಡಿಗಳಿಬ್ಬರು ...ಗಳ ಮಾಡಿಕೊಂಡು ...ಗಳಿಂದ ಮೈ, ಕೈ ... ತಣ್ಣಗಾಗುತ್ತಿದ್ದರು. ಆದರೆ ... ವ್ಯವಹಾರಕ್ಕೆ ...ಂತೆ ಈ ಇಬ್ಬರು ರೌಡಿಗಳು ...ದು ತಿಂಗಳಿಂದ ...ಗೆ ಸ್ಕೆಚ್ ರೆಡಿ ...ಡಿದ್ದರು.


...ರಜನಿಯ ಸ್ಕೆಚ್ಚು ಪಕ್ಕಾ ...ವರನ್ವಯ ಕೋಯಿನ್ ...ಅಪ್ಸರಾ ಟಾಕೀಸಿನ ಹೊರಗೆ ...ನೊಂದಿಗೆ ಮುಗಿಬಿದ್ದ ರಜನಿ ...ಫಿನಿಶ್ ಮಾಡಿದ್ದಾನೆ. ...ಇಡೀ ಹುಬ್ಬಳ್ಳಿಯ ಪುಡಿ ...ಗ್‌ಗಳೆಲ್ಲಾ ಗಾಬರಿಗೊಂಡು ...ರಿವೆ. ಆದರೆ ಇವರು ...ಮಾಮುಲಿ ತಿಂದು ...ದ್ದ ಖಾಕಿ ಪಿಂಡಗಳು ಮಾತ್ರ ...ಳಿತಿರುವುದು ದುರಂತವೇ.



ರಜನಿ

ಸಿನಿಮಾ ಅಪ್ಸರಾ ಟಾಕೀಸ್ನಲ್ಲಿ ಪ್ರದರ್ಶನವಾಗುತ್ತಿತ್ತು. ಇದನ್ನು ನೋಡಲು ರೌಡಿ ಪಾಲಾಕ್ಷ ಅಲಿಯಾಸ್ ಪಲ್ಲಿ ವಲ್ಲೂರ ತನ್ನ ಇಬ್ಬರು ಶಿಷ್ಯರೊಂದಿಗೆ ಅ. 23ರ ಮಧ್ಯಾಹ್ನದ ಮ್ಯಾಟನಿ ಶೋಗೆ ಹೋಗಿದ್ದಾನೆ. ನಂತರ ಸಿನಿಮಾ ಇಂಟರ್ವೆಲ್ ಬಿಟ್ಟಾಗ ಬಿಜವಾಡನ ಕೆಲ ಶಿಷ್ಯರು ಪಲ್ಲಿಯನ್ನ ನೋಡಿ ಗುರಾಯಿಸಿದ್ದಾರೆ. ಆದರೆ ಪಲ್ಲಿ ಏಕಾಂಗಿಯಾಗಿ ಸಿಗುವುದನ್ನೇ ಕಾಯುತ್ತಿದ್ದ ರಜನಿ ಟೀಮು ತಕ್ಷಣ ಅಲ್ಲಿಂದ ಕಾಲ್ಕಿತ್ತು 'ರಕ್ತ ಚರಿತ' ಚಿತ್ರ ಮುಗಿಯುವುದರೊಳಗೆ ಅಪ್ಸರಾ ಟಾಕೀಸನ್ನು ಸುತ್ತುವರೆದಿದೆ. ಸುಮಾರು ಇಪ್ಪತ್ತೈದು ಜನರ ಗ್ಯಾಂಗ್‌ನೊಂದಿಗೆ ಕಾಯುತ್ತಿದ್ದ ರಜನಿ ಬಿಜವಾಡ ಪಲ್ಲಿ ಹೊರಬಂದು ಬೈಕ್ ಏರಿದ್ದೇ ತಡ ತನ್ನ ಗ್ಯಾಂಗ್‌ನೊಂದಿಗೆ ಅವನ ಮೇಲೆ ಮುಗಿಬಿದ್ದಿದ್ದಾನೆ. ಕ್ಷಣಾರ್ಧದಲ್ಲಿ ಪಲ್ಲಿ ನೆತ್ತರದ ಮಡುವಿನಲ್ಲಿ ಹೊಟ್ಟೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದ ಮಚ್ಚಿನೊಂದಿಗೆ ವಿಲಗುಟ್ಟತೊಡಗಿದ್ದಾನೆ. ಅವನ ಜೊತೆಗಿದ್ದ ಪ್ರದೀಪ ಬಳ್ಳಾರಿಗೂ ತಲೆಗೆ ಏಟು ಬಿದ್ದಿದೆ. ಇನ್ನೊಬ್ಬ ನವೀನ ಹೆರೂರ ಮಾತ್ರ ಎಸ್ಕೇಪ್ ಆಗಿದ್ದಾನೆ.


ಬಿಜವಾಡನ ಗ್ಯಾಂಗಿನಿಂದ ತೀವ್ರ ಹಲ್ಲೆಗೊಳಗಾದ ಪಲ್ಲಿಯನ್ನ ತಕ್ಷಣಕ್ಕೆ ಹುಬ್ಬಳ್ಳಿ ಕಿಮ್ಸ್‌ಗೆ ಸೇರಿಸಲಾಯಿತಾದರೂ ಮಾರನೇ ದಿನ ಬೆಳಗ್ಗೆ ಆಸ್ಪತ್ರೆಯ ಬೆಡ್ ಮೇಲೆ ಕೊನೆಯುಸಿರೆಳೆದ. ನಾಲ್ಕು ವರ್ಷಗಳ ಹಿಂದೆ ಇದೇ ಚಿತ್ರ ಮಂದಿರದ ಹೊರಗಡೆ ನಡೆದ ಸಣ್ಣ ಗ್ಯಾಂಗ್‌ವಾರಿನಲ್ಲಿ ಪಲ್ಲಿ ತನ್ನ ಕಡುವೈರಿ ರಜನಿ ಬಿಜವಾಡನ ಮೇಲೆ ಅಟ್ಯಾಕ್ ಮಾಡಿದ್ದ. ಆಗ ರಜನಿ ಸ್ವಲ್ಪದರಲ್ಲೇ ಬದುಕಿದ್ದ. ನಂತರ "ಅದೇ ಜಾಗದಲ್ಲಿ ನಿನ್ನನ್ನು ಮುಗಿಸುತ್ತೇನೆ" ಅಂತಾ ಪಲ್ಲಿಗೆ ರಜನಿ ಚಾಲೆಂಜ್ ಕೂಡಾ ಮಾಡಿದ್ದನಂತೆ.



ಬಿಜವಾಡ



ದುರ್ಗಪ್ಪ



ಚಾಂದಿರಾಂ

ಪಿಕ್‌ಪಾಕೆಟರ್ಸ್ ಫೈನಾನ್ಸರ್‌ಗಳಾದರು

ಅಸಲಿಗೆ ಬಿಜವಾಡನ ಗ್ಯಾಂಗ್ ಆಗಲಿ ಪಲ್ಲಿಯ ರೌಡಿ ಟೀಮಾಗಲಿ ದೊಡ್ಡ ಮಟ್ಟದ ದರೋಡೆಕೋರರಲ್ಲ. ಇವರ ದಂಧೆ ಶುರುವಾಗಿದ್ದೇ ಪಿಕ್‌ಪಾಕೆಟನಿಂದ. ಮುಂದೆ ಇಸ್ಪೀಟ್ ಕ್ಲಬ್, ನಕಲಿ ಸ್ಪಿರಿಟ್, ಬಾಡಿಗೆಮನೆ ಖಾಲಿ ಮಾಡಿಸುವ ದಂಧೆಗೆ ರಜನಿ ಬಿಜವಾಡ ಎಂಟ್ರಿ ಕೊಟ್ಟ. ಆಗ ಪಲ್ಲಿ ವಲ್ಲೂರ ಕೂಡಾ ರಾಬರಿ, ಸಣ್ಣಮಟ್ಟ ಕಳ್ಳತನ, ಸಾಲ ವಸೂಲಿಯಂತಹ ಕಸುಬು ನಡೆಸುತ್ತಿದ್ದ. ಇತ್ತೀಚೆಗೆ ಇವರಿಗೆ ನಾಲ್ಕು ದುಡ್ಡು ಕಾಣುವಂತೆ ಮಾಡಿದ್ದು ಖಾಸಗಿ ಫೈನಾನ್ಸ್‌ಗಳು. ಬಡ್ಡಿ, ಚಕ್ರಬಡ್ಡಿ, ಮೀಟರ್ ಬಡ್ಡಿ, ದಿನದ ಬಡ್ಡಿಗೆ ಹಣ ಕೊಡುವ ಖಾಸಗಿ ಫೈನಾನ್ಶಿಯರ್‌ಗಳ ಕಡೆಯಿಂದ

...ಸಾಕ್ಕೆ ಹೋಗಿದ್ದೇ ...ುಳುವಾಯ್ತು!

...ನ ರಾಯಲ ಸೀಮೆಯ ...ಸೂರಿತ ಹತ್ಯಾಕಾಂಡದ ...ಹೇಳುವ ಪರಿಟಾಲ್ ರವಿಯ ...ಕಿಯುಸ್ತು ಆಧರಿಸಿ ...ಗಿರುವ 'ರಕ್ತ ಚರಿತ'





ವಸೂಲಿ ಮಾಡುವ ದಂಧೆಯ ಗುತ್ತಿಗೆ ಪಡೆಯಲು ಈ ರೌಡಿ ಗುಂಪುಗಳ ಮಧ್ಯೆ ಪೈಪೋಟಿ ಶುರುವಾಯಿತು. ಈಗಲೂ ಪರಿಸ್ಥಿತಿ ಬದಲಾಗಿಲ್ಲ. ಇದೆಲ್ಲ ಒಂದು ಕಡೆಯಾದರೆ ಕೆಲ ಖಾಸಗಿ ವಲಯದ ಬ್ಯಾಂಕುಗಳು ಈ ರೌಡಿ ಗುಂಪುಗಳ ಮೊರೆ ಹೋಗಿದ್ದವು. ಹೀಗಾಗಿ ಪಲ್ಲಿ ವಲ್ಲೂರ ಮತ್ತು ರಜನಿ ಬಿಜವಾಡ ತಮ್ಮದೇ ಮಾಲೀಕತ್ವದ ಸೀಜಿಂಗ್ ಬಿಜಿನೆಸ್‌ಗೆ ಕೈ ಹಾಕಿದ್ದರು.

ರಜನಿ ಬಿಜವಾಡ ಸೀಜಿಂಗ್ ದಂಧೆಯಲ್ಲಿ ಹುಬ್ಬಳ್ಳಿಯ ಬಹುಪಾಲನ್ನು ಆಕ್ರಮಿಸಿಬಿಟ್ಟಿದ್ದ. ರೌಡಿಸಂ ಜೊತೆಗೆ ಪೊಲಿಟಿಕಲ್ ಇಮೇಜ್ ಬೆಳೆಸಿಕೊಳ್ಳುವ ಕಾತುರದಲ್ಲಿದ್ದ

ಇಷ್ಟೆಲ್ಲಾ ಇದ್ದರೂ ಹುಬ್ಬಳ್ಳಿಯ ಖಾಕಿ ಪಡೆ ಮಾತ್ರ ಅವರು ಕೊಡುವ ಕಿಲುಬು ಕಾಸನ್ನೆ ಗೋಲ್ಡ್ ಮೆಡಲ್ ತರಹಾ ಸ್ವೀಕರಿಸುತ್ತಾ ಬಂದಿದೆ. ಹಿಂದಿನ ಕಮೀಷನರ್ ನಾರಾಯಣ ನಡುಮನಿ ಈ ಸಮಾಜ ಪೀಡಕರ ವಿರುದ್ಧ ರೌಡಿ ಶಿಟ್ ಓಪನ್ ಮಾಡಿದರು. ಆದರೆ ಆ ನಂತರ ಇವರ ರೌಡಿಸಂಗೆ ಅಂತ್ಯ ಕಾಣಿಸುವ ಒಬ್ಬ ಖಡಕ್ ಅಧಿಕಾರಿ ಬಂದುಕೂರದೆ ಇರುವುದು ಹುಬ್ಬಳ್ಳಿಗರ ದೌರ್ಭಾಗ್ಯವೇ ಸರಿ.

ಹುಬ್ಬಳ್ಳಿಯಲ್ಲಿ ಹೆಡೆಬಿಚ್ಚಿರುವ ಗೂಂಡಾಗಿರಿಯಲ್ಲಿ ಸೆಟ್ಲಮೆಂಟಿನದ್ದೆ ಸಿಂಹ ಪಾಲು. ಆರ್.ಜಿ.ಎಸ್, ಹೊಸೂರು, ಗಾಂಧಿವಾಡ, ಇಂದಿರಾನಗರ, ಮಂಟೂರಗಳಲ್ಲೆಲ್ಲ ಗ್ಯಾಂಗುಗಳು ಜನ್ಮ ತಾಳಿವೆ. ಇವರಲ್ಲಿ ಅನೇಕರು ಸುಪಾರಿ ಕಿಲ್ಲರ್‌ಗಳಾಗಿ ಮಹಾರಾಷ್ಟ್ರ, ಆಂಧ್ರಪ್ರದೇಶ, ಗೋವಾ ಹಾಗೂ ತಮಿಳುನಾಡುಗಳಲ್ಲಿ ಕ್ರಿಮಿನಲ್ ಪ್ರಕರಣಗಳನ್ನು ತಲೆ ಮೇಲೆ ಹೊತ್ತುಕೊಂಡಿದ್ದಾರೆ.

ಸರೆಂಡರೋ ಅರೆಸ್ಟೋ?

ಕಣ್ಣೆದುರೇ ನಡೆದ ಸಾಕಷ್ಟು ಪ್ರಕರಣಗಳಿಗೆ ಸಂಬಂಧಿಸಿದಂತೆ ಇವತ್ತಿಗೂ ಈ ರೌಡಿಗಳನ್ನ ಅರೆಸ್ಟ್ ಮಾಡದ ಖಾಕಿಗಳು ಈ ಕೊಲೆಯ ಪಾತಕಿಗಳನ್ನ ಹಿಡಿಯಲು ಕೀಳುಮಟ್ಟದ ಪ್ರಚಾರಕ್ಕೆ ನಿಂತಿದ್ದಾರೆ. ಕಮೀಷನರ್ ಔರಾದ್‌ಕರ, ಡಿಸಿಪಿ ಚಾಂದಿರಾಮ ಸಿಂಗ್‌ಗಳೆಲ್ಲ ರೌಡಿ ಶೀಟರ್ ರಜನಿ ಬಿಜವಾಡ ಸೇರಿದಂತೆ ಆರೋಪಿಗಳಾದ ಆಶೀಶ್ ಕಾಂಬಳೆ, ರಾಘ್ಯಾ ಕಲಾಲ, ಮಂಜುನಾಥ ಜಾಧವರನ್ನ ಮಾರಕಾಸ್ತ್ರ ಗಳೊಂದಿಗೆ ಧಾರವಾಡದಲ್ಲಿ ಬಂಧಿಸಿದ್ದೇವೆ ಎಂದು ಹೇಳಿ ಕೊಂಡಿದ್ದಾರೆ. ಅಸಲಿಗೆ ಇವರ್ಯಾರೂ ಅರೆಸ್ಟ್ ಆಗಿಲ್ಲ. ಮಂಗಳವಾರ ರಾತ್ರಿಯೇ ಆರೋಪಿಗಳು ಸರೆಂಡರ್ ಆಗಿ ದ್ದಾರೆ.

ಕಳೆದ ಎರಡು ತಿಂಗಳಲ್ಲಿ ಹುಬ್ಬಳ್ಳಿಯಲ್ಲಿ ಐದಾರು ಗ್ಯಾಂಗ್‌ವಾರ್‌ಗಳಾಗಿವೆ. ಗಾಂಧಿವಾಡ, ರಮೇಶ ಭವನ ಸರ್ಕಲ್‌ನ ಘಟನೆಗಳು ಇನ್ನೂ ಕಣ್ಮುಂದೆಯೆ ಇವೆ. ಅಷ್ಟಲ್ಲದೇ ರಜನಿ ಬಿಜವಾಡ ಮತ್ತು ಪಲ್ಲಿ ವಲ್ಲೂರನ ನಡುವೆ ಜಗಳಗಳಾದಾಗಲೂ ಇದೇ ಖಾಕಿಗಳು ರಾಜಿ ಪಂಚಾಯತಿ ಮಾಡಿ ಕಳಿಸಿದ್ದರಂತೆ.

ಅದೇ ಖಾಕಿ ಪಡೆಯೀಗ ಸರೆಂಡರಾದವರನ್ನು ಅರೆಸ್ಟ್ ಮಾಡಿದ್ದಾಗಿ ಒದರಹತ್ತಿದೆ. ಇದು ಚಿಲ್ಲರೆ ಪ್ರಚಾರವಲ್ಲದೆ ಮತ್ತೇನು?

• ವಿನಯ್ ಹುರುಳಿಕುಪ್ಪಿ

ಇದೆಂಥಾ ಅಸಹ್ಯ?


ಹುಬ್ಬಳ್ಳಿ ಶಹರದ ಶಾಸಕ ವೀರಭದ್ರಪ್ಪ ಹಾಲಹರವಿ ಈ ಕೇಸಿನಲ್ಲೂ ತನ್ನ ಹಲಕಾ ಬುದ್ಧಿಯನ್ನ ತೋರಿಸಿದ್ದಾನೆ. ಈತ ಪಲ್ಲಿ ವಲ್ಲೂರನಂಥ ಪಾತಕಿಯ ಮೂರ್ತಿಯನ್ನ ಹುಬ್ಬಳ್ಳಿಯ ಬಂಕಾಪೂರ ಚೌಕದಲ್ಲಿ ನಿಲ್ಲಿಸಿ ಅದಕ್ಕೆ ಪಲ್ಲಿ ಸರ್ಕಲ್ ಅಂತ ಹೆಸರು ಕೊಡುತ್ತಾನಂತೆ! ರಾಯಲಸೀಮೆಯ ಪರಿಟಾಲ ರವಿಯ ಸಿನಿಮಾ ನೋಡಿ ಸತ್ತ ಪಲ್ಲಿ ಅವನಂತೆಯೇ ಮಹಾನ್ ನಾಯಕ ಎಂದಿರುವ ವೀರಭದ್ರಪ್ಪ ಹಾಲಹರವಿ ಅದ್ಯಾವ ಹೇಸಿಗೆಯಲ್ಲಿ ಕೂತು ಈ ಹೇಳಿಕೆ ಕೊಟ್ಟನೋ ಅಂತ ಇಡೀ ಹುಬ್ಬಳ್ಳಿ ನಗುತ್ತಿದೆ.

ಇನ್ನೊಂದು ವಿಚಾರ ಅಂದರೆ ರಜನಿ ಬಿಜವಾಡನ ಇಡೀ ಫ್ಯಾಮಿಲಿಯನ್ನೆ ಇದರಲ್ಲಿ ಸಿಲುಕಿಸುವ ತಂತ್ರವನ್ನ ಬಿಜೆಪಿ ಹೆಣೆದಿದೆ. ರೌಡಿಯಾದರೂ ಈ ಪ್ರಕರಣದಲ್ಲಿ ಸಂಬಂಧವಿಲ್ಲದ ಗೌರಿ ಶಿವ್ಯಾನನ್ನ ಎಳೆ ತಂದು ಸೇರಿಸಲಾಗಿದೆ. ಈಗಾಗಲೇ ಶಂಕ್ರಪ್ಪ ಬಿಜವಾಡ, ದುರ್ಗಪ್ಪ ಬಿಜವಾಡ, ಬಂಟಿ ಬಿಜವಾಡರನ್ನ ಮೊದಲು ಅರೆಸ್ಟ್ ಮಾಡಲಾಗಿತ್ತು, ನಂತರ ರಜನಿ ಕೂಡಾ ಸರೆಂಡರ್ ಆಗಿದ್ದಾನೆ. ಉಳಿದ ಬಿಜವಾಡಗಳನ್ನ ಒಬ್ಬೊಬ್ಬರನ್ನಾಗಿ ಅಂದರ್ ಮಾಡುವ ಬಿಜೆಪಿಗಳ ಸಂಚು ಈಗ ಹೊರಬಿದ್ದಿದೆ.

ಅಸಲಿಗೆ ರಜನಿ ಮತ್ತು ಪಲ್ಲಿ ಇಬ್ಬರೂ ಕಾಂಗ್ರೆಸ್‌ನಿಂದ ಬೆಳೆದವರು. ಒಬ್ಬ ನಾಯಕನ ನೆರಳಲ್ಲೇ ನಿಂತವರಾಗಿದ್ದರು. ಆದರೆ ಸತ್ತವನೇನು ಸಾಚಾ ಅಲ್ಲ, ಆದರೂ ಅವನ ಹೆಣವಿಟ್ಟುಕೊಂಡು ಪ್ರತಿಭಟನೆ ಮಾಡಿ ಹುಬ್ಬಳ್ಳಿಯ ಶಾಂತಿ ಕದಡುವಂತೆ ಮಾಡಿದ್ದು, ಅದನ್ನೇ ರಾಜಕೀಯಕ್ಕೆ ಬೆರೆಸಿ ಬಂದ್ ಕರೆ ಕೊಡುವುದು ಎಷ್ಟು ಸರಿ?

ಇದ್ಯಾಕೆ ಈ ಮಂದಿಗೆ ಅಸಹ್ಯ ಅನ್ನಿಸುತ್ತಿಲ್ಲ?

ಗುಲ್ಬರ್ಗ: ಗಬ್ಬೆದ್ದಿರುವ ಎಚ್‌ಕೆಇ ಸೊಸೈ



ಕಲ್ಯಾಣ ಕರ್ನಾಟಕದ ಮಹತ್ವದ ಹಾಗೂ ರಮರಾಡಿ ಎದ್ದಿರುವ ಸಂಸ್ಥೆಗಳಲ್ಲಿ ಪ್ರಮುಖವಾದದ್ದು ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆ. 1958ರಲ್ಲಿ ಮಹಾದೇವಪ್ಪ ರಾಂಪುರೆ ಮುಂತಾದವರ ಪರಿಶ್ರಮದ ಫಲವಾಗಿ ಮೈದಳೆದ ಸಂಸ್ಥೆಗೆ ಆಗ ನೂರಾರು ಕನಸುಗಳಿದ್ದವು. ಹೈದ್ರಾಬಾದ್ ನಿಜಾಮನ ತೊತ್ತಳತುಳಿತಕ್ಕೆ ನಜ್ಜುಗುಜ್ಜಾಗಿದ್ದ ಈ ಪ್ರದೇಶ ನಮ್ಮ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಸರಿಸಮನಾಗಿ ನಿಲ್ಲಬೇಕೆಂದಿದ್ದ ಆ ಸಂದರ್ಭದಲ್ಲಿ ಶಿಕ್ಷಣ ಅತ್ಯವಶ್ಯಕವಾಗಿದ್ದಿತು. ಬಡತನ ರೇಖೆಗಿಂತ ಕೆಳಗಿನ ಜನರೇ ಹೆಚ್ಚಾಗಿ ವಾಸಿಸುವ ಈ ಜಿಲ್ಲೆಯ ಜನತೆಯ ಆಶಾಕಿರಣವಾಗಿ ಸಂಸ್ಥೆ ತಲೆ ಎತ್ತಿತ್ತು. ಅಂದಂತೆ ಆರಂಭದ ದಿನಗಳಲ್ಲಿ ಇಲ್ಲಿನ ಜನತೆಗೆ ಶಿಕ್ಷಣದ ಪರಿಚಯವನ್ನು ಈ ಸಂಸ್ಥೆ ಅತ್ಯಂತ ಆರೋಗ್ಯಪೂರ್ಣವಾಗಿ ಮಾಡಿಕೊಟ್ಟದ್ದು ಸುಳ್ಳಲ್ಲ.


ಲಿಂ.ಮಹಾದೇವಪ್ಪ ರಾಂಪುರೆ ಹಾಗೂ ಸಹಪಾಠಿಗಳು ತಾವು ಕಂಡ ಕನಸುಗಳನ್ನು ಈ ಸಂಸ್ಥೆಯ ಮೂಲಕ ಬಿತ್ತಲು ಬಹಳಷ್ಟು ಶ್ರಮ ಪಟ್ಟಿದ್ದಾರೆ. ಸಹಕಾರದ ಗಂಧಗಾಳಿಯೂ ಗೊತ್ತಿಲ್ಲದ, ಅನಕ್ಷರತೆ ತಾಂಡವ ವಾಡುತ್ತಿದ್ದ ಸತತ ಬರಗಾಲಗಳಿಂದ ತತ್ತರಿಸಿ ಹೋಗಿದ್ದ ಜನತೆಯಲ್ಲಿ ಆಶಾಕಿರಣದ ಬೆಳಕು ಹೊತ್ತಿಸಿ ಅವರಿಂದ ಹೇರು ಸಂಗ್ರಹಿಸಿ ಸಂಸ್ಥೆ ಕಟ್ಟುವುದು ಸಾಮಾನ್ಯ ಮಾತಾಗಿರಲಿಲ್ಲ. ಆದರೂ ತಾವು ಹಿಡಿದ ಛಲವನ್ನು ಸಾಧಿಸಬಲ್ಲ ಆತ್ಮವಿಶ್ವಾಸ ಹೊಂದಿದ್ದ ಜನಪರ ಕಾಳಜಿಯ ಮಹಾದೇವಪ್ಪ ರಾಂಪುರೆ ಹಳ್ಳಿಹಳ್ಳಿಗೂ ತಿರುಗಾಡಿ ರೈತರ ಹೊಲಗಳಿಗೂ ಹೋಗಿ ಅವರಲ್ಲಿನ ದವಸ-ಧಾನ್ಯಗಳನ್ನು ಪಡೆದು ಹೇರು ಸಂಗ್ರಹಿಸಿ ದೊಡ್ಡ ಸಂಸ್ಥೆಯನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿ ಹೋಗಿದ್ದಾರೆ.

ಆದರೆ ಸಮಾಜ ಸೇವೆ ಎಂಬುದು ನಿಸ್ವಾರ್ಥ ಸೇವೆ ಅಲ್ಲ ಎಂದು ಮನಗಂಡಿರುವ ಇತ್ತೀಚಿನ ಕೊಳಕು ರಾಜಕೀಯ ಯಾವಾಗ ಈ ಎಚ್.ಕೆ.ಇ. ಶಿಕ್ಷಣ ಸಂಸ್ಥೆಯನ್ನು ಮುತ್ತಿಕೊಂಡಿತೋ ಅಂದಿನಿಂದ ಇದು ಕೆಲವರ ಕಪಿಮುಷ್ಠಿಯಲ್ಲಿ ಸಿಲುಕಿ ಗಬ್ಬು ನಾರುತ್ತಿದೆ. ಇಂಜಿನಿಯರಿಂಗ್, ಮೆಡಿಕಲ್, ಫಾರ್ಮಸಿ, ಹೋಮಿಯೋಪತಿ, ಆಯುರ್ವೇದ, ಆರೋಗ್ಯ ವಿಜ್ಞಾನ ಹಾಗೂ 40ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಹೊಂದಿದ್ದರೂ ಕೇವಲ ಕೆಲವೇ ಜನರ ಸ್ವತ್ತಾಗಿ ಏದುಸಿರು ಬಿಡುವಂತಾಗಿದೆ.

ಹೊಸ ಹೇರುದಾರರು ಈ ಸಂಸ್ಥೆಯ ಸದಸ್ಯರಾದರೆ ಎಲ್ಲರಿಗೂ ಲೆಕ್ಕಪತ್ರ ತೋರಿಸಬೇಕಾಗುತ್ತದೆ. ಪ್ರತಿ ವರ್ಷ ನಡೆಯುವ ವಾರ್ಷಿಕ ಸಭೆಯಲ್ಲಿ ಪ್ರತಿಯೊಂದು ಸಂಗತಿ ಎಲ್ಲ ಸದಸ್ಯರ ಚರ್ಚಾ ವಸ್ತುವಾಗುತ್ತದೆ ಎಂದು ಮನಗಂಡಿರುವ ಆಡಳಿತ ಮಂಡಳಿಯ ಸದಸ್ಯರು ಕಳ್ಳ ಮೌನತಾಳಿ ಆದಷ್ಟು ಜನ ಸದಸ್ಯರಿಂದ ಮುಕ್ತಿ ಹೊಂದಲು ಹವಣಿಸುತ್ತಿರುವುದು ಸುಳ್ಳೇನಲ್ಲ! ಪ್ರತಿ ವರ್ಷ ಸಾವಿರಾರು ಕೋಟಿ ರೂಪಾಯಿಗಳ ವಹಿವಾಟು ನಡೆಸುವ ಈ ಸಂಸ್ಥೆಗೆ ಇದುವರೆಗೆ ಮಾಜಿ ಸಂಸದ ಡಾ.ಬಿ.ಜಿ. ಜವಳಿ, ಡಾ.ಮಲಕರೆಡ್ಡಿ, ಬಸವರಾಜ ಭೀಮಳ್ಳಿ, ಇದೀಗ ಬಿಜೆಪಿಯ ಶಶೀಲ ನಮೋಶಿ ಅಧ್ಯಕ್ಷರಾಗಿ ಮುನ್ನಡೆದಿದ್ದಾರೆ. ಇವರೆಲ್ಲರಲ್ಲಿ ಒಂದು ಸಾಮಾನ್ಯವಾದ ಅಲಿಖಿತ ಒಪ್ಪಂದ ಇದುವರೆಗೂ ಮುಂದುವರೆದಿದೆ ಅನಿಸುತ್ತದೆ.



ಈ. ಸಂಸ್ಥೆಯ ಅಧ್ಯಕ್ಷರು ಹಾಗೂ ನಿರ್ದೇಶಕ ಮಂಡಳಿಯ ಸದಸ್ಯರಾಗಿ ಯಾರೇ ಆಯ್ಕೆಯಾದರೂ ಅವರೆಲ್ಲರ ಒನ್ ಪಾಯಿಂಟ್ ಪ್ರೋಗ್ರಾಮ್ ಮುಕ್ಕುವುದು ಮಾತ್ರ. ಹಿಂದಿನ ಆಡಳಿತ ಮಂಡಳಿಯವರು ಮಾಡಿದ ಯಾವ ತಪ್ಪುಗಳನ್ನೂ ಈಗ ಆಯ್ಕೆಯಾದವರು ಪ್ರಶ್ನಿಸುವುದಿಲ್ಲ ಹಾಗೆಯೇ ಮುಂದೆ ಬರುವವರೂ ಕೂಡ ಪ್ರಶ್ನಿಸುವಂತಿಲ್ಲ ಎಂಬ ಅಲಿಖಿತ ನಿಯಮವೇ ಈ ಸಂಸ್ಥೆ ರೂಢಿಸಿಕೊಂಡು ಹೊರಟಿದೆ. ಹೀಗಾಗಿ ಸಹಜವಾಗಿಯೆ ಎಚ್.ಕೆ.ಇ. ಶಿಕ್ಷಣ ಸಂಸ್ಥೆ ನಡೆಸುವ ಸಂಸ್ಥೆಗಳೆಲ್ಲ ಬಹುತೇಕ ಕೊಳಕಿನಿಂದ ಗಬ್ಬು ನಾರುತ್ತಿವೆ.



ಆದರೂ ಈ ಭಾಗದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿರುವುದರಿಂದ ಜನ ಅನಿವಾರ್ಯವಾಗಿ ಇದನ್ನು ಆಶ್ರಯಿಸಿಕೊಂಡಿದ್ದಾರೆ. ಇದನ್ನು ಚೆನ್ನಾಗಿಯೆ ಮನಗಂಡಿರುವ ಎಚ್.ಕೆ.ಇ. ಸೊಸೈಟಿಯಲ್ಲಿರುವ ಹೆಗ್ಗಣಗಳೆಲ್ಲ ಮನಬಂದಂತೆ ಸಂಸ್ಥೆಯ ಬೈಲಾಗಳನ್ನು ತಿದ್ದುಪಡಿ ಮಾಡಿಕೊಂಡು ಸಾರ್ವಜನಿಕರಿಗೆ ಮುಕ್ತವಾಗಿರಬೇಕಾದ ಸಂಸ್ಥೆಯನ್ನು ತಮ್ಮದೇ ಪ್ರೈವೇಟ್ ಲಿಮಿಟೆಡ್ ಕಂಪನಿಯಂತೆ ಮಾಡಿಕೊಂಡು ಹೊರಟಿದ್ದಾರೆ. ಹೊಸ ನೀರು (ಸದಸ್ಯರು) ಬಂದರೆ ಹಳೇ ನೀರೆಲ್ಲ (ಹಳೆ ಸದಸ್ಯರೆಲ್ಲ) ಕೊಚ್ಚಿಕೊಂಡು ಹೋಗಿ ಹೊಸ ವ್ಯವಸ್ಥೆ ಬರಬಹುದು. ಆದರೆ ಹೊಸ ಸದಸ್ಯರನ್ನಾಗಿ ಈ ಸಂಸ್ಥೆ ಯಾರನ್ನಾದರೂ ಮಾಡಿಕೊಳ್ಳುವ ಬದಲು ತಾವು ಕುಳಿತಲ್ಲಿಯೆ ಕುಳಬಾನಾ ಆಯ್ದರು ಎಂಬಂತೆ ತಮ್ಮದೆ ಮನೆಯ, ಬಂಧುಬಳಗದ ವ್ಯಕ್ತಿಗಳನ್ನೆ ಸಂಸ್ಥೆಯ ಸದಸ್ಯರನ್ನಾಗಿ ಮಾಡಿಕೊಂಡು ಇಲ್ಲದ ಹುನ್ನಾರ ನಡೆಸಿದ್ದಾರೆ.

ಇವರ ಭಾನಗಡಿಗಳನ್ನು ಗಮನಿಸಿದ ಗುಲಬರ್ಗಾ ಜಿಲ್ಲೆಯ ವಿಲಾಸಕುಮಾರ ಎಂಬ ವಕೀಲ ಮಾತ್ರ ಸುಮ್ಮನೆ ಕೂಡದೆ ಈ ಕುರಿತು ಕೋರ್ಟ ಮೆಟ್ಟಲು ಹತ್ತಿದ್ದಾರೆ. ಇದೀಗ ಹೈಕೋರ್ಟ ಕೂಡ ಈ ಎಚ್.ಕೆ.ಇ. ಸಂಸ್ಥೆಗೆ ನೋಟೀಸ್ ಜಾರಿಗೊಳಿಸಿ ಸದಸ್ಯತ್ವವನ್ನು ಮುಕ್ತವಾಗಿ ಹಾಗೂ ಪಾರದರ್ಶಕವಾಗಿ ಅರ್ಹರಿಗೆ ನೀಡ ನಿರ್ದೇಶನ ನೀಡಿದೆ. ಈಗಾಗಲೇ ಲಕ್ಷಾಂತರ ಈ ಸಂಸ್ಥೆಯ ಸದಸ್ಯರಾಗಲು 100 ರೂ.ಗಳ ಪೋಸ್ಟಲ್ ಆರ್ಡರ್ ಖರೀದಿಸಿ, ಸದರಿ ಸಂ ತಮ್ಮ ಅರ್ಜಿಗಳನ್ನು ಕಳುಹಿಸಿದ್ದಾರೆ. ಸುಮಾ ಹತ್ತೆಂಟು ಹದಿನೈದು ಇಪ್ಪತ್ತು ದಿನಗಳಿಂದ ಗುಲ್ಬರ್ಗಾ, ಬೀದ ರಾಯಚೂರು, ಯಾದಗಿರಿ, ಕೊಪ್ಪಳ ಜಿಲ್ಲೆಗಳ ಅಂಚೆ ಕಚೇರಿಗಳಲ್ಲಿ ಪೋಸ್ಟಲ್ ಆರ್ಡರ್‌ಗಳು ಭರಪೂರವಾಗಿ ಮಾರಾಟಗೊಂಡವು. ಇದು ಸಾಲದೆಂಬಂತೆ ದೂರದ ಬೆಂಗಳೂರು-ಹುಬ್ಬಳ್ಳಿ, ಮೈಸ ಮುಂತಾದ ಕಡೆಗಳಿಂದಲೂ ಪೋಸ್ಟಲ್ ಆರ್ಡರ್ ತರಿಸಿ ಸದಸ್ಯತ್ವಕ್ಕಾಗಿ ಹಂಬಲಿಸಿ ಕ್ಯೂ ನಿಂತು ಅರ್ಜಿ ಸಲ್ಲಿಸಿದ್ದಾರೆ.

'ಸಂಸ್ಥೆಗೆ ಹೊಸ ಸದಸ್ಯರನ್ನು ಸೇರ್ಪಡೆ ಕೊಳ್ಳುವಾಗ ಪತ್ರಿಕೆಗಳ ಮೂಲಕ ಪ್ರಕಟನೆ ಹೊ ಎಂದು ಹೈಕೋರ್ಟ್ ಹೇಳಿದೆ. ಅದರಂತೆ ಈಗ ಸದಸ್ಯ ಅರ್ಜಿಯನ್ನು ಜಾಹೀರುಗೊಳಿಸಿದ್ದೇವೆ. ಆದರೆ ಆ ಆಟ ಏನೇ ಇದ್ದರೂ ಅದು ನಮ್ಮದೇ' ಎಂದು ಯಾ ನಾಚಿಕೆ ಇಲ್ಲದೆ ಇದರ ಅಧ್ಯಕ್ಷ ಶಶೀಲ ನಮೋಶಿ ತ ಆಡಳಿತಾಧಿಕಾರಿ ಡಾ. ಚಿಟ್ಟ ಹೇಳುತ್ತಾರೆ.

ಲಿಂ. ಮಹಾದೇವಪ್ಪ ರಾಂಪುರೆ ಕನಸಿನ ಕ ಈ ಎಚ್.ಕೆ.ಇ. ಸೊಸೈಟಿ ಹಿಂದೆ ಬೆಳೆದದ್ದು ಜನಸಾ ಮೂಲಕ ಎಂಬ ಪ್ರಜ್ಞೆ ಇಂದಿನ ಆಡಳಿತ ಮಂ ಇದ್ದಿದ್ದರೆ ಬಹುಶಃ ಇಂಥ ನೀಚ ಮಾತುಗಳು ಬಾಯಿಂದ ಬರುತ್ತಿರಲಿಲ್ಲ. ಸರಕಾರ ಇನ್ನಾದರೂ ಪ್ರವೇಶಿಸಿ ಈ ಸಂಸ್ಥೆಯ ಸದಸ್ಯತ್ವವನ್ನು ಮುಕ್ತ ಕೊಳ್ಳುವಂತೆ ನೋಡಿಕೊಳ್ಳಬೇಕಾದ್ದು ಅದರ ಜವಾ ಯಾಗಿದೆ. ಆದರೆ ಮಸಿಯೇ ಇದ್ದಲಿಗೆ ಬುದ್ಧಿ ಹೇಳಬ ಎಂಬುದೇ ಸದ್ಯದ ಪ್ರಶ್ನೆಯಾಗಿದೆ.

• ವಿಶ್ವಾರಾಧ್ಯ ಸತ್ಯಂಪೇ

ಮೂಡಿಗೆರೆ: ಜರೀನಾಳ ಜಬರ್ದಸ್ತಿಗೆ ಪ್ರಥಮ ದರ್ಜೆ ಕಾಲೇಜು ಜಖಂ!



ಜರೀ

ಮಲೆನಾಡು ಭಾಗದಲ್ಲಿ ಪ್ರತಿಷ್ಠಿತವೆನ್ನಿಸಿಕೊಂಡಿರುವ ಡಿ.ಎಸ್. ಬಿಳಿಗೌಡ ಪ್ರಥಮ ದರ್ಜೆ ಕಾಲೇಜು ಕುಲಗೆಟ್ಟು ಹೋಗಿದೆ. ಅದರಲ್ಲೂ ಜರೀನಾ ಕೌಸರ್ ಎಂಬಾಕೆ ಪ್ರಾಂಶುಪಾಲೆಯಾಗಿ ವಕ್ಕರಿಸಿದ್ದೇ ಅವ್ಯವಹಾರ, ಸ್ವೇಚ್ಛೆಗಳು ವಿಜೃಂಭಿಸಲು ಶುರುವಿಟ್ಟವು.



ಅಶೋಕ್

ಅದೆಂತಹುದೇ ಅಧ್ವಾನಗಳು ನಡೆದರೂ ಈ ಕಾಲೇಜಿಗೊಂದು ಪ್ರತಿಷ್ಠೆಯಿದೆ. ಆದರೆ ಇದರ ಪ್ರಾಂಶುಪಾಲರಾಗಿ ಬರುವ ಆಸಾಮಿಗಳಿಗೆ ಒಂದಲ್ಲ ಒಂದು ವೈಕಲ್ಯಗಳಿದ್ದೇ ಇರುತ್ತವೆ. ಇದರ ಪರಿಣಾಮಗಳು ಸಾರ್ವಜನಿಕ ಚರ್ಚೆಗೆ ಗ್ರಾಸವಾಗುವಷ್ಟು ವಿಪರೀತಕ್ಕೆ ಹೋಗಿದ್ದವು. ಇಂಥಾ ಸಂದರ್ಭದಲ್ಲಿ ಶಾಸಕ ಕುಮಾರಸ್ವಾಮಿಯೆಂಬ ಮಹಾನುಭಾವ ಬೇಲೂರು ಪ್ರಥಮದರ್ಜೆ ಕಾಲೇಜಿನಲ್ಲಿದ್ದ ಜರೀನಾಳನ್ನ ಕರೆತಂದಿದ್ದ. ಕಾಲೇಜು ಗಬ್ಬೆದ್ದು ಹೋಗುತ್ತಿರುವುದನ್ನ ಕಂಡು ಕಂಗೆಟ್ಟಿದ್ದ ಜನರೂ ಗಟ್ಟಿಗಿತ್ತಿಯಂತೆ ಕಾಣುತ್ತಿದ್ದ ಜರೀನಾಳೆಡೆಗೆ ತುಂಬು ಭರವಸೆಯಿಟ್ಟಿದ್ದರು.

ಈಕೆಯಾದರೂ ಬಂದ ಹೊಸತರಲ್ಲಿ ಪಕ್ಕಾ ಸಾಚಾ ಎಂಬಂತೆ ತೋರಿಸಿಕೊಳ್ಳತೊಡಗಿದಳು. ಆದರೆ ಬರುಬರುತ್ತಾ ಜರೀನಾಳ ಅಸಲಿಯತ್ತುಗಳು ಒಂದೊಂದಾಗಿ ಹೊರಬೀಳಲಾರಂಭಿಸಿದವು.

ಈಕೆ ಅದೆಂಥಾ ಸ್ವೇಚ್ಛೆ ಬೆಳೆಸಿಕೊಂಡಳೆಂದರೆ ವಾರಕ್ಕೆರಡು ದಿನ ಮಾತ್ರ ಕಾಲೇಜಿನತ್ತ ಮುಖ ಹಾಕತೊಡಗಿದಳು. ಅರ್ಥಶಾಸ್ತ್ರ ಉಪನ್ಯಾಸಕರಾದ ಅಶೋಕ್, ಬಸವರಾಜು ಮತ್ತು ವಾಣಿಜ್ಯ ಶಾಸ್ತ್ರ ಶಿವಾನಂದ್ ಎಂಬ ಮುಖೇಡಿಗಳನ್ನು ತನ್ನ ಅಂದಾದುಂದಿಯ ದಂಡನಾಯಕರಂತೆ ಬಳಸಿಕೊಳ್ಳಹತ್ತಿದಳು. ಇದರಲ್ಲಿ ಅಶೋಕ್ ಕಳಸ ಪ್ರಥಮ ದರ್ಜೆ ಕಾಲೇಜಿಗೆ ನಿಯೋಜನೆಗೊಂಡಿದ್ದಾನಾದರೂ ರಾಜಕೀಯ ಪ್ರಭಾವ ಬಳಸಿ ಇಲ್ಲೇ ಉಳಕೊಂಡಿದ್ದಾನೆ. ಸದ್ಯದ ಪರಿಸ್ಥಿತಿಯಲ್ಲಿ ಈತನೇ ಮೂಡಿಗೆರೆ ಕಾಲೇಜಿಗೆ ಅನಧಿಕೃತ ಪ್ರಾಂಶುಪಾಲ.

ಜರೀನಾ ಸಹಿ ಹಾಕಬೇಕಾದ ಹಾಜರಾತಿ ಪುಸ್ತಕದಲ್ಲೂ ಮೂರು ರೀತಿಯ ಸಹಿಗಳು ಗೋಚರಿಸುತ್ತವೆ. ಆದರೆ ವಾರದಲ್ಲಿ ಎರಡೇ ಸರ್ತಿ ಕಾಲೇಜಿಗೆ ಬಂದರೂ ಸಂಬಳ ಮಾತ್ರ ಸರಿಯಾಗಿ ಪಡೆಯುತ್ತಿದ್ದಾಳೆ. ಇನ್ನೂ ಎಡವಟ್ಟು ಸಂಗತಿಯೆಂದರೆ ತನ್ನ ಕಾರಿನ ಡ್ರೈವರನ್ನೇ ಗ್ರಂಥಾಲಯ ಮೇಲ್ವಿಚಾರಕನಾಗಿ ನೇಮಿಸಿ ಬಿಟ್ಟಿದ್ದಾಳೆ. ಆದರೀತನೂ ಬರುವುದು ವಾರಕ್ಕೆರಡು ಸಲ ಮಾತ್ರ. ಆದರೆ ಎರಡೂ ಸಂಬಳವನ್ನ ಅಂಜಿಕೆಯಿಲ್ಲದೆ ಗುಂಜಿಕೊಳ್ಳುತ್ತಿದ್ದಾನೆ. ಇನ್ನು ಕಾಲೇಜಿನ ಕೆಲಸಗಳಿಗೆ ನಾಲ್ಕು ಮಂದಿ 'ಸಿ' ದರ್ಜೆ ನೌಕರರನ್ನ ಅನಗತ್ಯವಾಗಿ ನೇಮಿಸಲಾಗಿದೆ. ಕೆಲಸವಾದರೂ ಸರಿಯಾಗಿ ನಡೆಯುತ್ತಿದೆಯಾ ಅಂದರೆ ಅಲ್ಲೂ ಅಧ್ವಾನಗಳೇ ಕಣ್ಣಿಗೆ ರಾಚುತ್ತವೆ.



ಎಂ.ಪಿ.ಕುಮಾರಸ್ವಾಮಿ

ಜರೀನಾಳ ನೆರಳಲ್ಲಿ ನಡೆಯುತ್ತಿರುವ ಇನ್ನೊಂದು ಕರ್ಮಕಾಂಡ ಅರೆಕಾಲಿಕ ಉಪನ್ಯಾಸಕರಿಗೆ ಸಂಬಂಧಿಸಿದ್ದು. ಇಲ್ಲಿ ಸುಮಾರು 24 ಅರೆಕಾಲಿಕ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ. ನಿಯಮದ ಪ್ರಕಾರ ಇವರ್‍ಯಾರೂ ಮೂರ್‍ನಾಲ್ಕು ಕಾಲೇಜುಗಳಲ್ಲಿ ಏಕಕಾಲಕ್ಕೆ ಕೆಲಸ ಮಾಡುವಂತಿಲ್ಲ. ಆದರೆ ಈ ಉಪನ್ಯಾಸಕರು ಮೂಡಿಗೆರೆ ಸುತ್ತಲ ಅಷ್ಟೂ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇದರಿಂದ ವಿದ್ಯಾರ್ಥಿಗಳು ಎಷ್ಟೇ ಬಾಧೆಪಟ್ಟರೂ ಜರೀನಾ ಮೇಡಂ ಕೇರ್ ಮಾಡಿಕೊಳ್ಳುತ್ತಿಲ್ಲ.

ಜರೀನಾಳ ದರ್ಬಾರಿನಲ್ಲಿ ಹಿರಿಯ ಉಪನ್ಯಾಸಕರನ್ನ ಕಾಲಕಸ ಮಾಡಿ ಕಿರಿಯರಿಗೆ ಮಣೆ ಹಾಕುವ ಅಂದಾದುಂದಿಯೂ ಎಗ್ಗಿಲ್ಲದೆ ನಡೆದಿದೆ. ಈ ಸಂಬಂಧ ನೊಂದ ಮಂದಿ ನಿರ್ದೇಶಕರಿಗೆ ದೂರು ನೀಡಿದ್ದೂ ಆಗಿದೆ.

ಇದಿಷ್ಟು ಜರೀನಾಳ ಬೇಜವಾಬ್ದಾರಿತನದ ಒಂದು ಮಜಲಾದರೆ ಆಕೆಯ ಹಣಬಾಕತನದ್ದು ಮತ್ತೊಂದು ಹೀನ ವೃತ್ತಾಂತ. ಇದರಿಂದಾಗಿ ಎನ್‌ಎಸ್‌ಎಸ್ ಶಿಬಿರಗಳು ಹಣ ಹೊಡೆಯುವ ದಂಧೆಯಾಗಿವೆ. ಶಿಬಿರಾರ್ಥಿಗಳ ವಾರದ ಖರ್ಚಿನ ಹಣವನ್ನೂ ನುಂಗಿ ನೊಣೆಯಲಾಗುತ್ತಿದೆ. ಕಳೆದ ವರ್ಷ ಹಳ್ಳಿಯೊಂದರಲ್ಲಿ ಎನ್‌ಎಸ್‌ಎಸ್ ಶಿಬಿರವೊಂದು ನಡೆದಿತ್ತು, ಇದಕ್ಕಾಗಿ ಚಂದಾ ಎತ್ತಿದ 30 ಸಾವಿರ ರೂ.ಗಳ ಲೆಕ್ಕ ಇಂದಿಗೂ ಸಿಕ್ಕಿಲ್ಲ. 679 ಬಿಎ, ಬಿಕಾಂ, ಬಿಬಿಎಂ ವಿದ್ಯಾರ್ಥಿಗಳ ಪ್ರವೇಶ ಶುಲ್ಕದೊಂದಿಗೆ ಸಿಡಿಸಿ ಹೆಸರಲ್ಲಿ ತಲಾ ಇನ್ನೂರು ರೂ.ಗಳನ್ನು ಪೀಕಲಾಗುತ್ತಿದ್ದರೂ ಇದರ ಲೆಕ್ಕವನ್ನೂ ಜರೀನಾ ಮೇಡಂ ಕೊಡುತ್ತಿಲ್ಲ. ವೈದ್ಯಕೀಯ ಶುಲ್ಕ, ಕಂಪ್ಯೂಟರ್ ದುರಸ್ತಿ ಹೆಸರಲ್ಲಿ ಅದೆಷ್ಟು ಹಣ ಕೊಳ್ಳೆಹೋಗಿದೆಯೋ ಭಗವಂತನೇ ಬಲ್ಲ.

ಹಲವಾರು ಸಂಘಸಂಸ್ಥೆಗಳಿಂದ ಪ್ರತೀವರ್ಷ ವಿದ್ಯಾರ್ಥಿವೇತನ ಬರುತ್ತಿದ್ದರೂ ಅರ್ಜಿಗಳನ್ನೇ ನೀಡ ವಿದ್ಯಾರ್ಥಿಗಳನ್ನು ವಂಚಿಸಲಾಗುತ್ತಿದೆ. ಇನ್ನು ಕ್ರೀಡಾ ಸಾಮಗ್ರಿಗಳ ಖರೀದಿಯಲ್ಲಿ ಜರೀನಾ ಬೇಕಾದಷ್ಟು ಗೆಬರಿಕೊಂಡಿರುವ ಕುರುಹುಗಳಿವೆ.

ಸದ್ಯ ಕೊಳ್ಳೆ ಹೊಡೆದ ದುಡ್ಡಿನಲ್ಲಿ ಮೆಕ್ಕಾ ಯ ಹೊರಡುವ ಸನ್ನಾಹದಲ್ಲಿರುವ ಜರೀನಾ ವಾರಕ್ಕೆರ ದಿನ ಕಾಲೇಜಿಗೆ ಹಾಜರಾಗುವುದನ್ನು ಬಿಡದೇ ಪಾಲಿಸುತ್ತಿದ್ದಾಳೆ. ಪ್ರಾಂಶುಪಾಲರು ದಿನವೊಂದಕ್ಕೆ ಎಂಟು ವಿಷಯಗಳ ಉಪನ್ಯಾಸ ನೀಡಬೇಕೆಂಬುದು ನಿಯಮ. ಆದರೀಕೆಗೆ ಕಾಲೇಜು ಹೊತ್ತುತ್ತಲೇ ಮಂಪರಾವರಿಸಿ ಬಿಡುತ್ತದೆ. ಎಚ್ಚರವಾದಾಕ್ಷಣ ಮ ನಡೆಯುತ್ತಾಳೆ.

ಇಂಥಾ ಅವಿವೇಕಿಗಳು ಪ್ರಾಂಶುಪಾಲರಾದರೆ ವಿದ್ಯಾರ್ಥಿಗಳ ಗತಿಯೇನು? ಈ ಕಾಲೇಜಿನ ಅಭಿ ಮಂಡಳಿ ಅಧ್ಯಕ್ಷನಾಗಿರುವ ಕುಮಾರಸ್ವಾಮಿ ಇನ್ನಾ ಇತ್ತ ಗಮನ ಹರಿಸಿ ತಾನೇ ತಂದಿಟ್ಟ ಪಿಂಡವನ್ನ ಕ ಬಿಸಾಕಿದರೊಳಿತು. ಇಲ್ಲವಾದಲ್ಲಿ ನೊಂದ ವಿದ್ಯಾರ್ಥಿಗಳಿಂದಲೇ ಪ್ರತಿಭಟನೆ ಎದುರಿಸಬೇಕಾಗುವುದು ಖಚಿತ.

• ಅಜೀಜ್ ಕಿರಗು

ಡಿವುಡ್ ಮುದಿಯರ ಪ್ರಣಯ ರಾಜ್ಯದಲ್ಲಿ...

ರೆಯುವುದನ್ನು ಭಾರತೀಯ ಚಲನಚಿತ್ರಪ್ರೇಮಿ ಣೆ ಒಪ್ಪುವುದಿಲ್ಲ ಎಂದಂತೂ ಗೊತ್ತು. ಬವು 'ಇಂಡಿವುಡ್' ನಟರನ್ನು (ರಜನೀಕಾಂತ್, ರಾಜ್ ಇತ್ಯಾದಿ ಇತ್ಯಾದಿ) ಮತ್ತು 2000ದ ಕೆಲವು ಚಿತ್ರಗಳನ್ನು ನೋಡುತ್ತಿದ್ದಾಗ ಆಪ ವಲ್ಲಿ ತತ್ತರಿಸಿಹೋಗಿದ್ದಂತೂ ನಿಜ. ಅಥವಾ ತ್ತಿದ್ದ ಜಿಗುಪ್ಸೆಯನ್ನು ತಡೆಯಲಾಗದೇ ಹೊಟ್ಟೆ ಅಷ್ಟೇ ಸತ್ಯ. ಅರವತ್ತರ ಪಕ್ಕ ವಯಸ್ಸಿಗೆ ಈ 'ನಾಯಕರು' ಹದಿವಯಸ್ಸನ್ನು ಈಗಷ್ಟೇ ಹುಡುಗಿಯರೊಂದಿಗೆ ಕುಣಿಯುತ್ತಾ ಕುಣಿ ಅರ್ಧ ವಯಸ್ಸನ್ನು ತೆರೆಯ ಮರೆಗೆ ನೂಕ ಭ್ರಮೆಯಲ್ಲಿ ಸ್ವವಂಚನೆಯನ್ನು ಮಾಡಿಕೊಳ್ಳುತ್ತಿ ನ್ನು ನೋಡಿದರೆ ಯಾರಿಗೆ ಮರುಕ ಹುಟ್ಟು ." ವಯಸ್ಸಾದವರು ಪ್ರೀತಿಯಲ್ಲಿ ಸಿಕ್ಕಿಹಾಕಿಕೊಳ್ಳ ಮ ಯಾರೂ ಹೇಳಿಲ್ಲ. ಆದರೆ ಯದ್ವಾತದ್ವಾ ಅಂತೆನ್ನಿಸುವ ಗಂಡುಹೆಣ್ಣಿನ ಜೋಡಿಯನ್ನು ಣ್ಣೊಳಗೆ ತುರುಕುವ ಕ್ರಿಯೆಯ ಮೂಲಕವೇ ರ್ಮಲ್' ಮಾಡುವ, ಮುದಿತನವನ್ನು ಪ್ರಯತ್ನ ಮಾತ್ರ ಅತ್ಯಂತ ಹಾಸ್ಯಾಸ್ಪದವೇ. ದರೂ ಸತ್ಯ' ಹೊಟ್ಟೆಯನ್ನೂ ತೊಳೆಸುತ್ತದೆ, ಯನ್ನೂ ಬರಿಸುತ್ತದೆ.

ಬದ್ದರೆ 'ನೋಡಿ ತಿಳಿ' ಪ್ರಯತ್ನವನ್ನಂತೂ ು. 'ಶಿವಾಜಿ ದ ಬಾಸ್' (2008, ರಜನಿ), ಜಾ ಎಂಬಿಬಿಎಸ್' (2005, ಕಮಲ್), " (2005, ಸತ್ಯರಾಜ್) ನೋಡಲು ಪ್ರಯತ್ನಿಸಿ. ಕಾರಿಕೊಂಡರೆ ನಾನಂತೂ ಹೊಣೆಯಲ್ಲ,







ಪಾತ್ರಗಳಲ್ಲಿ ಅಲ್ ಪಾಚಿನೊನ, ಬೆನ್ ಕಿಂಗ್‌ಸ್ಲಿ ಮತ್ತು ಪೀಟರ್ ಓ ಟೂಲ್........

ಂಜೀವಿ, ಕನ್ನಡದ ವಿಷ್ಣುವರ್ಧನ್, ಅಷ್ಟೇ ಾಳಂ, ಹಿಂದಿ ನಟರೂ ಸಹ 'ಮುದಿಯರ ಪ್ರಾಕಾರಕ್ಕೆ ತಮ್ಮ ಕೊಡುಗೆಯನ್ನೂ ಈ ಚಿತ್ರಗಳು ಭರ್ಜರಿ ಯಶಸ್ಸನ್ನೂ ಗಳಿಸಿವೆ ಮಾತ್ರ ನಮ್ಮನ್ನು ಕಕ್ಕಾಬಿಕ್ಕಿಯಾಗಿಸುತ್ತದೆ. ಪೀಳಿಗೆಯವರೂ ಸಹ ಈ ಅಟ್ಟಹಾಸಕ್ಕೆ ಕುಮ್ಮಕ್ಕು ನೀಡಿರುವುದೂ ಅಷ್ಟೇ ಸ್ಪಷ್ಟ. ವಿಷ್ಟೇ: ಭಾರತೀಯ ಮಧ್ಯಮವರ್ಗದ ಪ್ರತಿಸಂಸ್ಕೃತಿಯ ಸುಳಿವೇ ಇಲ್ಲ. ಅಪ್ಪ, ದೊಡ್ಡಪ್ಪ, ದೊಡ್ಡಣ್ಣಂದಿರು ಸಹ ಅದರಲ್ಲಿ ಎನ್ನುವಷ್ಟು ಮೌನ ನೆಲೆಸಿದೆ. ಎಪ್ಪತ್ತರ ಯ ಮೇಲೆ ಮೂಡಿದ ತಾರೆಗಳು (ರಜನಿ, ತ್ಯರಾಜ್, ವಿಷ್ಣುವರ್ಧನ್) ಹಾಯೆನ್ನಿಸುವ ತರುವುದರಲ್ಲಿ ಯಶಸ್ವಿಯಾಗಿದ್ದರು. ಹಳೆಯ ವಾಲೆಸೆದು ಹೊಸ ಹಾದಿಯ ತೋರಿಸಿದ್ದರು. ಡಿದ್ದ ನಾಯಕಮಣಿಗಳಿಗೆ ನಿರ್ಗಮನದ ತೋರಿಸಿ, 'ಪಿತೃಹತ್ಯೆಯೇ ಸೃಜನಶೀಲತೆಗೆ ದ್) ಎಂದು ಸಾಬೀತುಮಾಡಿದ್ದರು. ಹೊಸತ ಚಿತ್ರಮಂದಿರಗಳಲ್ಲಿ ಅಷ್ಟೇ ಅಲ್ಲ, ಮನೆಗಳ ತ್ತು, ಯುವ ಪೀಳಿಗೆ ಅಜ್ಜನ ಆಲದಮರವನ್ನು ಾಹಸವನ್ನಂತೂ ಮಾಡಿತ್ತು.

ದ್ದು ಈಗ ಆಗಿಲ್ಲ, ಆಗುವ ಸುಳಿವೂ ಇಲ್ಲ. ಕಾಲುಗಳನ್ನು ಕುಣಿಸುತ್ತಾ, ಹದಿವಯಸ್ಸಿನ ೊಂಟ ಹಿಡಿದು ನರ್ತಿಸುವ ಈ ತಲೆ ನೆರೆತ ರೋಗಳಿಗೆ ಭರ್ಜರಿ ಚಪ್ಪಾಳೆಯಿಕ್ಕುವ ೀಳಿಗೆಗೆ ಏನೆನ್ನಬೇಕು? ಶೂಂಪೀಟರನ ಮ'ವೆಂಬ ಪರಿಕಲ್ಪನೆ ಭಾರತೀಯ ಸಿನಿಮಾ ಾಂಸ್ಕೃತಿಕ ಲೋಕದಲ್ಲಿ ಸಲ್ಲುವ ಹಾಗೇ ಥವಾ ಹಳೆಯ ಪೀಳಿಗೆಯಿಂದ ಬಂದ ಗಳಿಗೆ ಹೊಸ ಪೀಳಿಗೆ ತಮ್ಮ ಸೃಜನಶೀಲತೆ ವನ್ನೇ ಆಡವಿಟ್ಟಿರಬಹುದು ಎಂಬ ಗುಮಾನಿ ಕಾರಣಗಳಿಲ್ಲದೇ ಇಲ್ಲ. ವಯಸ್ಸಿನ ಹಂಗಿಲ್ಲದ ಇಲ್ಲ ಎಂದು ಹೇಳುವುದು ಈ ಬರಹದ ಅಂತಹ ಪ್ರೀತಿಯನ್ನು ಬಿಂಬಿಸುವಾಗ ಉದ್ದೇಶ, ಯಾವ ತರಹದ್ದಾಗಿರಬೇಕು ಎಂದು ಕೆಲವು ಳ ಮೂಲಕ ಹೇಳುವ ಪ್ರಯತ್ನವನ್ನು ಮಾತ್ರ ು.

ಭಾರತೀಯ ಸಿನಿಮಾವನ್ನೇ ತೆಗೆದು ಮಿತಾಭ್ ಬಚ್ಚನ್ ತನ್ನನ್ನು ಮರು-ಆವಿಷ್ಕಾರ ಸುವ ಬಗೆ ಯಾರಿಗೂ ಬೆರಗು ಮೂಡಿಸು ಆವಿಷ್ಕಾರಕ್ಕೆ, ತಕ್ಕ ಕಥಾವಸ್ತುವನ್ನು ಹುಡುಕುವ ನಿರ್ಮಾಪಕ, ನಿರ್ದೇಶಕರೂ ಬೇರೊಂದು ಹುಡುಕಾಟದಲ್ಲಿ ತೊಡಗುತ್ತಾರೆ. ಒಬ್ಬ ಅದ್ಭುತ ಕಲಾಕಾರನಿಗೆ ಇರುವ ಶಕ್ತಿ ಅದು. ಅಮಿತಾಭನ ಹೊಸ 'ಅವತಾರ'ಕ್ಕೆ ಸರಿಹೊಂದುವ ಚಿತ್ರ ಮಾಡುವ ಪ್ರಯತ್ನದಲ್ಲಿ ಹೊಸಬಗೆಯ ತಲ್ಲಣಗಳನ್ನು ತೆರೆಗೆ ತರಲಾಯಿತು. ಉದಾಹರಣೆಗೆ 'ಚೀನಿ ಕಮ್' ಚಿತ್ರವನ್ನೇ ತೆಗೆದುಕೊಳ್ಳಿ. ನಾಯಕಿ ತಬು ನಾಯಕನ ಮುಂದಿನ ಪೀಳಿಗೆಯವಳು. ಈ ವಯಸ್ಸಿನ ಅಂತರವೆಂಬ ಭೂತವನ್ನು ತೆರೆಯ ಮರೆಗೆ ತಳ್ಳದೇ ಅದರ ಜೊತೆ ನಡೆಸುವ ಸಂಧಾನದ ಪ್ರಕ್ರಿಯೆಯಲ್ಲಿ ಇರುವ ತಲ್ಲಣಗಳನ್ನು ರಂಗದ ಮಧ್ಯಕ್ಕೇ ತಂದು ಅದರ ಕಣ್ಣಲ್ಲಿ ಕಣ್ಣಿಟ್ಟು ನೋಡುವುದು ಚಿತ್ರದ ಉದ್ದೇಶ. 'ನಿಶ್ಯಬ್ದ' ಚಿತ್ರದಲ್ಲಿ ಆತ ಮಗಳ ಸ್ನೇಹಿತೆಯ ಜೊತೆ ಪ್ರೇಮದಲ್ಲಿ ಸಿಲುಕಿ ಒದ್ದಾಡಿ ಹೋಗುತ್ತಾನೆ. ಆ ಅದ್ಭುತ ಕಥಾವಸ್ತು ರಾಮಗೋಪಾಲ ವರ್ಮನಂತಹ ರದ್ದಿ ನಿರ್ದೇಶಕನ ಕೈಯಲ್ಲಿ ಕಿಚಡಿಯಾಗಿ ಹೋಗಿದೆ ಎನ್ನುವುದು ನಿಜವಾದರೂ ಮಧ್ಯವಯಸ್ಸನ್ನು ದಾಟಿದ ಗಂಡಸೊಬ್ಬನ ಲೈಂಗಿಕತೆ ಆಗಬಾರದ ರೀತಿಯಲ್ಲಿ ಎಚ್ಚೆತ್ತು ತಲ್ಲಣಿಸುವ, ಅದರಿಂದ ಉಂಟಾಗುವ ಕೌಟುಂಬಿಕ ತೊಡಕುಗಳನ್ನು ನಿಭಾಯಿಸುವಲ್ಲಿ ಜರ್ಝರಿತನಾಗುವ ವೇದನೆಯಂತೂ ಅದರಲ್ಲಿ ಇದೆಯೆನ್ನುವುದನ್ನು ಒಪ್ಪಿಕೊಳ್ಳಬೇಕು. (ಈ ಚಿತ್ರಕ್ಕೆ ಪ್ರೇರಣೆ ಒದಗಿಸಿದ್ದು ಸ್ಯಾಮ್ ಮೆಂಡೆಸ್ ನಿರ್ದೇಶಿಸಿದ 'ಅಮೆರಿಕನ್ ಬ್ಯೂಟಿ' ಎಂಬ ಹಾಲಿವುಡ್ ಚಿತ್ರ. ತನ್ನ ಮಗಳ ಸ್ನೇಹಿತೆಯ ಜೊತೆ ಪ್ರೇಮದಲ್ಲಿ ಸಿಲುಕುವ ಕೆವಿನ್ ಸ್ಪೇಸಿಯ ನಟನೆಯಲ್ಲಿ ಹೇಗೋ ಕಥೆಯಲ್ಲೂ ಹಾಗೆಯೇ ಹೆಚ್ಚು ನವಿರಿತ್ತು ಎನ್ನುವುದು ಮಾತ್ರ ಸ್ಪಷ್ಟ.) ಅಮಿತಾಭನ ಈ ಚಿತ್ರಗಳಲ್ಲಿ ದಟ್ಟವಾಗಬಹುದಾದ ಕಥಾವಸ್ತುವನ್ನು ಜಾಳಾಗಿಸಲಾಗಿದೆ ಎಂಬ ವಾದದಲ್ಲಿಯೂ ಹುರುಳಿದೆ. ಸೂಕ್ಷ್ಮಜ್ಞತೆ ಸಾಧ್ಯವಿತ್ತೋ ಏನೋ ಅಂತ ಅನ್ನಿಸಿದರೆ ಅದಕ್ಕೆ ಪೂರಕವಾದ ಉದಾಹರಣೆಗಳಿವೆ. ಕೆಲವನ್ನು ನೋಡಬಹುದು.

1972ರಲ್ಲಿ ತೆರೆ ಕಂಡ ಮಾರ್ಲನ್ ಬ್ರಾಂಡೋನ 'ಲಾಸ್ಟ್ ಟ್ಯಾಂಗೋ ಇನ್ ಪ್ಯಾರಿಸ್' (Last Tango in Paris) ತೆಗೆದುಕೊಳ್ಳಿ. ಆತ ಹೆಂಡತಿಯನ್ನು ಕಳೆದುಕೊಂಡವನು. ಸಾಕಷ್ಟು ಬೋಳು ತಲೆ, ನೆರೆತ ಕೂದಲು, ಢಾಳಾಗಿ ಕಾಣಿಸುವ ಮುಖದ ಸುಕ್ಕುಗಳು, ಸ್ವಲ್ಪ ಡುಮ್ಮಗಾಗಿರುವ ಹೊಟ್ಟೆ, ಎಲ್ಲವೂ ಆತನ ಅರೆ ಶತಮಾನದ ವಯಸ್ಸನ್ನು ಆಡಿ ತೋರಿಸುತ್ತಿರುತ್ತವೆ. ನಾಯಕಿ ಮರಿಯಾ ಶ್ನೈಡರ್ ಇಪ್ಪತ್ತರ ಹಸಿಹಸಿ ಯೌವ್ವನಕ್ಕೆ ಕಾಲಿಟ್ಟವಳು. ಈ ಚಿತ್ರಕ್ಕೆ ಸಿಕ್ಕ ರೇಟುಗಳದ್ದೇ ಒಂದು ಪುರಾಣ. X ರೇಟನ್ನು ಪಡೆದುಕೊಂಡ ಮೊಟ್ಟ ಮೊದಲ ವ್ಯಾಪಾರೀ ಚಿತ್ರ ಇದು. ಜೊತೆಗೆ ವಯಸ್ಕರು ಮಾತ್ರ ನೋಡಬಹುದೆಂಬ R ಎಂಬ ಪಟ್ಟಿ ಬೇರೆ. (ಅದೂ ಸರಿಯೆ! ಅದರಲ್ಲಿ ಬರುವ ಸ್ನಾನದ, ಬೆಣ್ಣೆಯ ದೃಶ್ಯ ನೋಡಿದರೆ ಸಾಕು!) ಸುಪ್ರಸಿದ್ಧ ನಿರ್ದೇಶಕ ರೊಮಾನ್ ಪೊಲಾನ್ಸ್ಕಿ ನಿಜ ಜೀವನದಲ್ಲಿ ಹದಿವಯಸ್ಸಿನ ಹುಡುಗಿಯೊಂದಿಗೆ ಪ್ರೀತಿಯಲ್ಲಿ ಸಿಲುಕಿದಾಗ ಎದ್ದಷ್ಟೇ ಗುಲ್ಲು ಈ ಚಿತ್ರದ ವಿಷಯದಲ್ಲೂ ಎದ್ದಿತ್ತು. ಮಡಿವಂತರು ಹಾಹಾಕಾರವೆಬ್ಬಿಸಿದರೂ ಚಿತ್ರದ ಕೊನೆಯಲ್ಲಿ ಬರುವ ದೃಶ್ಯ ಮಾತ್ರ ನಿಜವಾದ ಚಿತ್ರಪ್ರೇಮಿಗಳ ಕಣ್ಣನ್ನು ಒದ್ದೆ ಮಾಡುವ ಶಕ್ತಿಯನ್ನು ಹೊಂದಿತ್ತು ಎನ್ನುವುದು ಉತ್ಪ್ರೇಕ್ಷೆಯಲ್ಲ.

ಈ ಚಿತ್ರದಲ್ಲಿ ಮಾರ್ಲನ್ ಬ್ರಾಂಡೋ ತನ್ನ ವಯಸ್ಸನ್ನು ಮರೆಮಾಚುವುದೇ ಇಲ್ಲ. ಬೆತ್ತಲೆ ದೃಶ್ಯಗಳಲ್ಲಿ ಬಿಡುಬೀಸಾಗಿ ತೋರಿಸಿರುವ ಅವನ ಲಳಲಳ ದೇಹವೇ ಸಾಕು. ಗಂಡು ಅಹಂ ಅನ್ನು ಕ್ಯಾರೆ ಎನ್ನದೇ ಕೊಚ್ಚಿ ಹಾಕುವ ಚಿತ್ರದುದ್ದದ ಪ್ರಕ್ರಿಯೆಯಲ್ಲಿ ವಾಸ್ತವದ ಪ್ರಜ್ಞೆ ಇದೆ. ವ್ಯಕ್ತಿತ್ವದ ಎಲ್ಲೆಗಳ ಅರಿವಿದೆ. ದೌರ್ಬಲ್ಯಗಳ ನೆನಪಿದೆ. ಬಾಗುವ ವಿನಯಶೀಲತೆ ಇದೆ. ನಮ್ಮ ಹೀರೋಗಳಂತೆ ಅವನು ಎಲ್ಲವನ್ನೂ ಜಯಿಸಿ ನಿಲ್ಲುವ ಎಂಟೆದೆಯ ಭಂಟನಲ್ಲ. ಅವಳು ಸಿಂಗರಿಸಿಕೊಂಡು ನಿಲ್ಲುವ ಬೊಂಬೆಯೂ ಅಲ್ಲ. ಇಬ್ಬರಲ್ಲೂ ನಿಜವಾದ ಪ್ರೀತಿಯ ತಹತಹವಿದೆ. ಹಿಂದೆ ಮಾಡಿದ ತಪ್ಪುಗಳನ್ನು ಒಪ್ಪಮಾಡಿಕೊಳ್ಳುವ ನಿರೀಕ್ಷೆಯಿದೆ. ಹತ್ತಿರವಾಗಿಸಬಲ್ಲ ವೇದನೆಯಿದೆ. ಅವರ ನಡುವಿನ ದೈಹಿಕ ಆತ್ಮೀಯತೆ ವಾಕರಿಕೆಯೇನೂ ಬರಿಸುವುದಿಲ್ಲ. ಅಲ್ಲಿ ಗೆದ್ದೆನೆಂಬ ವಿಜೃಂಭಣೆಯಿಲ್ಲ. ಸುಸಂಗತ ಸಮಾಪ್ತಿಯೂ ಇಲ್ಲ. ಇದ್ದರೆ ಹೊಸ ಬಗೆಯ ಸಂದೇಹಗಳು ಮಾತ್ರ. ಅವನಲ್ಲೂ, ಅವಳಲ್ಲೂ.

ಸಂದೇಹಗಳು ಎಂದೆನಲ್ಲಾ? 'ಗಾಂಧಿ' ಪಾತ್ರವನ್ನು ಸಮರ್ಥವಾಗಿ ನಿಭಾಯಿಸಿದ ಬೆನ್ ಕಿಂಗ್‌ಸ್ಲಿಯ 'ಎಲಿಜಿ' (Elegy) ಯನ್ನು ತಪ್ಪದೇ ನೋಡಿ.

ಈ ಚಿತ್ರ ಬಂದದ್ದು 2008ರಲ್ಲಿ. ಆಗ ಕಿಂಗ್‌ಸ್ಲಿಗೆ ಅರವತ್ತೈದರ ವಯಸ್ಸು. ನಾಯಕಿ ಪೆನೆಲೊಪೆ ಕ್ರೂಜ್ (ಆ ಗಂಧರ್ವ ಸುಂದರಿ!)ಗೆ ಮೂವತ್ತ ನಾಲ್ಕು. ಅವನ ಮದುವೆ ಯಾವಾಗಲೋ ಮುರಿದು ಬಿದ್ದಿದೆ. ಹೆಚ್ಚು ಕಡಿಮೆ ಅವನದೇ ವಯಸ್ಸಿನ ಒಬ್ಬ ಪ್ರೇಮಿ ಸಹ ಇದ್ದಾಳೆ. ಅಷ್ಟೇ ಅಲ್ಲ, ಪೆನೆಲೊಪೆಗಿಂತ ವಯಸ್ಸಿನಲ್ಲಿ ಹಿರಿಯನಾದ ಮಗನೂ ಇದ್ದಾನೆ. ಅರವತ್ತೈದರ ಹರೆಯದವನ ಹಿಂದೆ ಉದ್ದಕಿನ ಚರಿತ್ರೆಯಿರುವುದು ಸಹಜವೇ. ಚಿತ್ರ ಅದ್ಯಾವುದನ್ನೂ ಮರೆಮಾಚುವುದಿಲ್ಲ. ವಿದ್ಯಾರ್ಥಿಯಾದ ಪೆನೆಲೊಪೆ ತನ್ನ ವಯಸ್ಸಿನವರಿಂದ ಆಕರ್ಷಿತಳಾಗುವುದೂ ಸಹಜವೇ. ಆದರೂ ಮೂವತ್ತು ವರುಷದ ಅಂತರದವರ ನಡುವೆ ಪ್ರೀತಿ ಉದ್ಭವಿಸುತ್ತಲ್ಲಾ, ಅದಕ್ಕೆ ಯಾರು ಹೊಣೆ? ಅದು ಹೊತ್ತು ತರುವ ತಲ್ಲಣ, ತಳಮಳಕ್ಕೆ ಯಾರ ಹಂಗು? ದೈಹಿಕ ಆಕರ್ಷಣೆಯಷ್ಟೇ ಈ ದ್ವಂದ್ವಗಳೂ ವಾಸ್ತವದ ಭಾಗವೇ.

ಕಿಂಗ್‌ಸ್ಲಿಯ ಎದೆಯ ಮೇಲಿನ ಬಿಳಿಯ ರೋಮವನ್ನು ಮಾಯವಾಗಿಸಲು ಯಾವ ವಿಶೇಷ ಕಸರತ್ತನ್ನೂ ಬಳಸಿಲ್ಲ. ಆಸಾಮಿ ಹೇಗಿದ್ದಾನೋ ಹಾಗೇ ಕಾಣಿಸಿಕೊಳ್ಳುತ್ತಾನೆ. ಆದರೆ ತನ್ನ ವಯಸ್ಸಿನ ಅರಿವು ಅವನನ್ನು ಕಾಡದೇ ಇಲ್ಲ. ಆಕೆಗೆ ಮಾತ್ರ ಅದು ಮುಖ್ಯವೇ ಅಲ್ಲ. ತನ್ನ ಕುಟುಂಬದವರನ್ನು ಆತನಿಗೆ ಭೆಟ್ಟಿಯಾಗಿಸಲು ತಹತಹಿಸುತ್ತಾಳೆ. ಅವನಿಗೆ ಅರ್ಥವಾಗದ ಮುಜುಗರ, ಅಳುಕು. ಅದೇ ಅಳುಕು ಇಬ್ಬರನ್ನೂ ದೂರವಾಗಿಸುತ್ತದೆ. ಬದುಕಿನಲ್ಲಿ ಅಪೂರ್ವವಾದ ಪ್ರೀತಿಯ ಅನುಭವವೊಂದಕ್ಕೆ ತೆರೆದುಕೊಳ್ಳದೇ ಹುಂಬನಾದೆನೇ ಎಂಬ ಕೊರಗು ಅವನ ವೇದನೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ.

'ಎಲಿಜಿ' ನಿಜವಾಗಿಯೂ ಒಂದು ಮನಮುಟ್ಟುವ ಪ್ರೇಮ ಕಥೆ.

ಇವಷ್ಟೇ ಅಲ್ಲ, ಸುಪ್ರಸಿದ್ಧ ನಟ ಅಲ್ ಪಾಚಿನೊನ 'ಸೆಂಟ್ ಆಫ್ ಅ ವುಮನ್' (Scent of a Woman), ಡಸ್ಟಿನ್ ಹೊಫ್ ಮನ್‌ನ 'ಲಾಸ್ಟ್ ಚಾನ್ಸ್ ಹಾರ್ವಿ' (Last Chance Harvey), ಜಾಕ್ ನಿಕಲ್ ಸನ್‌ನ 'ಆಸ್ ಗುಡ್ ಆಸ್ ಇಟ್ ಗೆಟ್ಸ್' (As Good as it Gets) ... ಇತ್ಯಾದಿ ಚಿತ್ರಗಳು ವಯಸ್ಸಾದ ತಾರೆಯೊಬ್ಬ ನಾಯಕನಾಗಿ ನಟಿಸುವಾಗ ಹೊಮ್ಮಬಹುದಾದ ಸಾಧ್ಯತೆಗಳತ್ತ ಗಂಭೀರವಾದ ಗಮನ ಹರಿಸುತ್ತವೆ. ಹಠಾತ್ತಾಗಿ ಎರಗಿದ ಎದೆ ನೋವಿನಿಂದ ಬಳಲಿದ ಹೊಫ್‌ಮನ್ ತನ್ನ ವೃತ್ತಿಜೀವನದಲ್ಲಿ ಒಮ್ಮೆ ಬಾರಿ ಸಿಗಬಹುದಾದ ಅವಕಾಶದಿಂದ ಸಹ ವಂಚಿತನಾಗುತ್ತಾನೆ. ವಯಸ್ಸು ತರುವ ಆಯಾಸ, ದ್ವಂದ್ವ, ಹತಾಶೆ, ಎಲ್ಲವಕ್ಕೂ ಈ ಪಾತ್ರಗಳು ಪಾತ್ರವೇ. ಕಾಲ ತಮ್ಮನ್ನು ಮುಟ್ಟದೇ ದಾಟಿಕೊಂಡು ಹೋಗಿದೆ ಎನ್ನುವ ಭ್ರಮೆಯನ್ನು ಅವು ಮೂಡಿಸಲು ಹೆಣಗುವುದಿಲ್ಲ. ಹಾಗೆ ಹೆಣಗುವ ನಮ್ಮ ಮುದಿ ನಾಯಕರು ನಮ್ಮಲ್ಲಿ ಅಯ್ಯೋ ಪಾಪವೆಂಬ ಭಾವವನ್ನು ಮೂಡಿಸದೆ ಇರುವುದಿಲ್ಲ.

ಅದಕ್ಕಿಂತ ಮುಖ್ಯವಾಗಿ, ಆ ಪಾತ್ರಗಳಿಗೆ ಎದುರಾಗುವ ನಾಯಕಿಯರು ದೇಹ ಬಿಟ್ಟರೆ ಬೇರೇನೂ ಇಲ್ಲ ಅಂತನ್ನಿಸುವಂತೆ ಮಾಡುವ ಲೊಳಲೊಟ್ಟೆಯರಲ್ಲ. ಗಂಭೀರವಾಗಿ, ಸ್ವತಂತ್ರವಾಗಿ ಯೋಚಿಸಬಲ್ಲ ಪ್ರಬುದ್ಧ ಮನೋಭಾವದವರು. ಹರಿತ್ವಗಳನ್ನು ಮೀರಿದ ಪ್ರೀತಿಯನ್ನು ನೀಡಬಲ್ಲ ಶಕ್ತಿಯುಳ್ಳವರು. ನಾಯಕರ ಸುತ್ತ ಗಿರಕಿ ಹೊಡೆಯುತ್ತಾ ಕುಣಿಯುತ್ತಾ ಭ್ರಮೆಗಳನ್ನು ಸೃಷ್ಟಿಸುವ ಕೊನೆಗೆ ಪ್ರೇಕ್ಷಕರ ಮನಸ್ಸಿನಲ್ಲಿ ಉಳಿಯದೇ ಭ್ರಮೆಯಾಗಿ ಕರಗಿಹೋಗುವ ಬರೀ ಶರೀರಗಳಲ್ಲ.


ಡಾನ್ಸ್‌ಗೆ ಸಂಬಂಧಪಟ್ಟಂತೆ ಹೋಲಿದ ಒಂದು ವ್ಯತ್ಯಾಸವನ್ನು ಹೇಳಲೇಬೇಕು. ಅಲ್ ಪಾಚಿನೋ, ಮಾರ್ಲನ್ ಬ್ರಾಂಡೊ ಅವರ ಟ್ಯಾಂಗೊ ನೃತ್ಯ ಎಮ್ಮಾ ಥಾಂಪ್ಸನ್ ಜೊತೆಗಿನ ಹೊಫ್‌ಮನ್ ನೃತ್ಯ ಅದೆಷ್ಟು ಆತ್ಮೀಯವೆನ್ನಿಸುತ್ತದೆ! ಅಲ್ಲಿ ವಯಸ್ಸಿಗೆ ಪಕ್ವಾಗಿರುವ ವಾಸ್ತವವನ್ನು ತೋರಿಸಲು ನೃತ್ಯವೂ







ಯುವತಿಯರೊಂದಿಗೆ ಮುದಿ ನಟರು......



ಒಂದು ಸಾಧನವಾಗಿ ಒದಗಿ ಬರುತ್ತದೆ. ಕೈಕಾಲುಗಳನ್ನು ವಿಚಿತ್ರವಾಗಿ ತಿರುಚುತ್ತಾ, ಹೊಟ್ಟೆಯನ್ನು ಅಶ್ಲೀಲವಾಗಿ ತಿರುಗಿಸುತ್ತಾ, ಅದೇ ಹಳಸಲು ಸಂಗೀತಕ್ಕೆ ಅಷ್ಟೇ ಹಳಸಲು ಹೆಜ್ಜೆಗಳನ್ನು ಹಾಕುತ್ತಾ, ಹತ್ತಾರು ಮಂದಿ ಸಹ ನರ್ತಕರ ನಡುವೆ ಅಜೇಯರಂತೆ ಕುಣಿಯುವ ನಮ್ಮ ನಾಯಕಮಣಿಗಳಂತೆ ಜಿಗುಪ್ಸೆ ಹುಟ್ಟಿಸುವುದಿಲ್ಲ.

ಪೀಟರ್ ಓ ಟೂಲ್‌ನ 'ವೀನಸ್' (Venus) ಇನ್ನೊಂದು ಬೆಚ್ಚಿ ಬೀಳಿಸುವ ಚಿತ್ರ. ಸುಪ್ರಸಿದ್ಧ ನಿರ್ದೇಶಕ ಡೇವಿಡ್ ಲೀನ್‌ನ 'ಲಾರೆನ್ಸ್ ಆಫ್ ಅರೇಬಿಯಾ' (Lawrence of Arabia) ದಲ್ಲಿ ನಟಿಸಿದ ಅಂದಿನ ಹಸಿ ಯೌವ್ವನಿಗನಿಗೆ ಈಗ ಎಪ್ಪತ್ನಾಲ್ಕು ವರುಷದ ಮುದಿತನ. ಕ್ಯಾನ್ಸರ್ ರೋಗ ಬೇರೆ. ತನ್ನ ಗೆಳೆಯನ ಸಂಬಂಧಿಕಳಾಗಿರುವ ಇಪ್ಪತ್ತು ವರುಷದ ಹುಡುಗಿಯಲ್ಲಿ ಅಸಹಾಯಕನೆನ್ನಿಸುವಷ್ಟು ಅನುರಕ್ತಿ ಮೂಡಿರುತ್ತದೆ. ಅದು ತರುವ ತಲ್ಲಣಗಳಿಗೆ ಒಡ್ಡಿಕೊಳ್ಳುವ ಓ ಟೂಲ್ ಕಾಣಿಸಿಕೊಳ್ಳುವುದು ಮುದಿಯಾಗಿಯೇ. ತನ್ನ ವಯಸ್ಸಿನ ಬಗ್ಗೆ ಅವನಿಗೂ ಭ್ರಮೆಯಿಲ್ಲ. ಬೇರೆಯವರಲ್ಲಿ ಭ್ರಮೆಯನ್ನು ಮೂಡಿಸುವ ಹುಂಬತನವನ್ನೂ ಅದು ತೋರುವುದಿಲ್ಲ.

ಸಾಹಿತ್ಯದಲ್ಲಿ ಈ ವಾಸ್ತವವನ್ನು ಬಿಂಬಿಸುವ ಪ್ರಯತ್ನದ ಹಲವಾರು ಸುಪ್ರಸಿದ್ಧ ಕೃತಿಗಳನ್ನು ಉದಾಹರಿಸಬಹುದು. ಕೂತ್ಸೆಯ 'ಡೈರಿ ಆಫ್ ಅ ಬ್ಯಾಡ್ ಇಯರ್' (Diary of a Bad Year), ಗಾರ್ಸಿಯಾ ಮಾರ್ಕ್ವೆಸ್‌ನ 'ಮೆಮೊರಿಸ್ ಆಫ್ ಮೈ ಮೆಲಂಖಲಿಕ್ ಓರ್ಸ್' (Memory of my Melancholic Whores) ಕೇವಲ ಎರಡು ಉದಾಹರಣೆಗಳು ಅಷ್ಟೇ. ದಾಸ್ತೊವೆಸ್ಕಿಯ 'ದಿ ಇಡಿಯಟ್' (The Idiot), 'ದಿ ಬ್ರದರ್ಸ್ ಕರಮಜೊವ್' (The Brothers Karamazov) ಗಳಲ್ಲೂ ಅದೇ ದ್ವಂದ್ವ ಕಾಣಿಸಿಕೊಳ್ಳುತ್ತದೆ. ಅರವತ್ತರ ದಶಕದಲ್ಲಿ ಬರೆದ ತ್ರಿವೇಣಿಯವರ ಕಾದಂಬರಿ 'ಹೃದಯಗೀತ'ದಲ್ಲಿ ಅಂತಹ ಸಂಬಂಧವನ್ನು ಅತ್ಯಂತ ಸೂಕ್ಷ್ಮಜ್ಞತೆಯಿಂದ ಚಿತ್ರಿಸಲಾಗಿದೆ. ದಾಸ್ತೊವೆಸ್ಕಿ ಒಂದು ಕಡೆ ನೇರವಾಗಿ ಚುಚ್ಚುತ್ತಾನೆ: 'ವಯಸ್ಸಿಗೆ ಪಕ್ವಾಗುವ ಸತ್ಯವನ್ನು ಮರೆಮಾಚುವುದು ಹೇಗೆ? ವಯಸ್ಸಾಗುತ್ತಿರುವಂತೆ ಮನುಷ್ಯನ ವಾಸ್ತವದ ಪ್ರಜ್ಞೆಯೂ ಮಂಕಾಗುತ್ತಾ ಹೋಗಿ ಭ್ರಮೆಯ ಮೇಲೆ ಬದುಕನ್ನು, ಭರವಸೆಯನ್ನು ಕಟ್ಟಿಕೊಳ್ಳುತ್ತಾ ಹೋಗುತ್ತದೆ. ಹಿಂದೆ ಅವನೆಷ್ಟೇ ಮೇಧಾವಿಯಾಗಿದ್ದರೂ ಈಗ ಬಾಲಿಶತನಕ್ಕೆ ಪಕ್ಕಾಗುತ್ತಾನೆ.'

ನಮ್ಮ ನಾಯಕಿಯರು ಮುದಿಯಾಗುತ್ತಿರುವ ನಾಯಕರ ಅಜೇಯತನದ ಭ್ರಮೆಗೆ ತಾಳಹಾಕುವ ಕರ್ಮಕ್ಕೆ ಸಿಲುಕಿದವರು. ಹಾಡು, ಕುಣಿತದ ಸನ್ನಿವೇಶವನ್ನು ನಿಭಾಯಿಸಲಂತೂ ನಿರ್ಮಾಪಕ ತನ್ನ ದುಡ್ಡೆಲ್ಲವನ್ನೂ ಖರ್ಚುಮಾಡುತ್ತಾನೆ. ಭರ್ಜರಿ ಸೆಟ್ಟು, ಸುತ್ತಮುತ್ತ ನೂರಾರು ಸಹ ನರ್ತಕರು, ಚಕಚಕನೆ ಸಾಗುವ ದೃಶ್ಯಗಳು, ಸ್ಪೆಷಲ್ ಎಫೆಕ್ಟ್ಸ್ ಎಂಬ ಕಸರತ್ತು ಎಲ್ಲವೂ ಮುದಿ ನಾಯಕನನ್ನು ಕಾಲದ ಕೈಯಿಂದ ಪಾರು ಮಾಡಲು ಹೆಣಗುತ್ತವೆ. ಪ್ರೇಕ್ಷಕರಿಗೆ ಮಂಕು ಹಿಡಿಸುವಲ್ಲಿ ಯಶಸ್ವಿಯಾಗುತ್ತವೆ.

ಮತ್ತೆ ವಯಸ್ಸಾದ ಹೆಂಗಸು ಕಿರಿಯ ವಯಸ್ಸಿನ ಗಂಡಸೊಂದಿಗೆ ಪ್ರೇಮದಲ್ಲಿ ಸಿಲುಕುವ ಪರಿಸ್ಥಿತಿ ಬಂದರೆ?

ಭಾರತೀಯ ಚಿತ್ರರಂಗಕ್ಕೆ ಬಹುಶಃ ಅಂತಹದೊಂದು ಸಾಧ್ಯತೆ ಕಂಡೇ ಇಲ್ಲವೇನೋ. ಇತ್ತೀಚೆಗೆ ಬಂದ 'ವೇಕ್ ಅಪ್ ಸಿದ್' (Wake Up Sid!) ಒಂದು ಅಪವಾದವಿರಬಹುದು. ಎಷ್ಟು ಮಹಾ ಅಂತರ ಅಂತೀರಿ? ಕೊಂಕಣಾ ಸೇನ್‌ಗೆ ಇಪ್ಪತ್ತೇಳು, ಅವನಿಗೆ ಇಪ್ಪತ್ತು! ಕೊಟ್ಟರೆ ಅಬ್ಬಬ್ಬಾ ಹತ್ತು ವರುಷ! ಅದಕ್ಕಿಂತ ಹೆಚ್ಚು ಚೌಕಾಸಿ ಮಾಡುವುದೇ! ಎಂಬತ್ತರ ದಶಕದಲ್ಲಿ ಬಂದ 'ಅಪೂರ್ವ ರಾಗಂ' ಚಿತ್ರ ಈ ದಿಕ್ಕಿನಲ್ಲಿ ಹೊಸದನ್ನು ಹೇಳುವ ಪ್ರಯತ್ನವನ್ನೇನೋ ಮಾಡಿತ್ತು. ಅದರಲ್ಲಿ ಅಪ್ಪ ಯುವತಿಯಲ್ಲಿ ಅನುರಕ್ತನಾದರೆ, ಅವನ ಮಗ ಆ ಯುವತಿಯ ಅಮ್ಮನಲ್ಲಿ ಆಕರ್ಷಿತನಾಗಿರುತ್ತಾನೆ. ಈ ಯದ್ವಾತದ್ವ ಗೋಜಲನ್ನು ಬಿಡಿಸಲಾಗದ ನಿರ್ದೇಶಕ ಕೊನೆಗೆ ಯಥಾಸ್ಥಿತಿವಾದದತ್ತಲೇ ವಾಲುತ್ತಾನೆ. ಆದರೆ ಫಾಸ್ ಬೈಂಡರ್‌ನ Ali: Fear Eats the Soul, ತನ್ನ ಅಭಿನಯಕ್ಕೆ ಹಲವಾರು ಪುರಸ್ಕಾರಗಳನ್ನು ಗೆದ್ದುಕೊಂಡ ಕೇಟ್ ವಿನ್ಸ್‌ಲೆಟ್‌ಳ ('ಟೈಟಾನಿಕ್' ನಾಯಕಿ) The Reader, ಪ್ರಬುದ್ಧ ನಾಯಕಿ ಸೂಸನ್ ಸ್ಯಾರಂಡೋನ್ ಅಭಿನಯದ White Palace ಆ ದಿಕ್ಕಿನಲ್ಲಿ ಬೇರೆ ರೀತಿಯ ಕಥೆ ಹೇಳುವ ಧೈರ್ಯ ಮಾಡಿದ ಕೆಲವು ಚಿತ್ರಗಳು.

ನಮ್ಮ ಮುದಿ ನಾಯಕರ ಸ್ವ-ವಿಜೃಂಭಣೆಯ ಚಿತ್ರಗಳು ನಮ್ಮ ಸಾಂಸ್ಕೃತಿಕ ಲೋಕಕ್ಕೆ ತಗುಲಿಕೊಂಡಿರುವ ಕಾಯಿಲೆಯಂತೆ ಕಾಣಿಸಲಾರಂಭಿಸಿವೆ. ಕಮಲ್ ನಂತಹ ಅದ್ಭುತ ಕಲಾಕಾರನನ್ನೂ ಅದು ಆವರಿಸಿಕೊಂಡಿರುವುದು ನಮ್ಮ ದುರಾದೃಷ್ಟವೇ? ಅಥವಾ ಪ್ರೇಕ್ಷಕರ ಬೇಜವಾಬ್ದಾರಿತನದ ಕುರುಹೇ?

• ಹರಿ ಮತ್ತು ಸುಕನ್ಯಾ ಕನಾರಳ್ಳಿ

ಕಡೂರು ಸೂರ್ಯನಾರಾಯಣರ ನಿರ್ಗಮನ

ಕಡೂರಿನ ಹಿರಿಯ ಪತ್ರಕರ್ತ ಎಚ್.ಎಸ್.ಸೂರ್ಯನಾರಾಯಣ ತುಂಬು ಜೀವನ ಮುಗಿಸಿ ನಿರ್ಗಮಿಸಿದ್ದಾರೆ. ಅವರ ಓದಿಗೆ ಸರ್ಕಾರಿ ಸೇವೆಯಲ್ಲಿದ್ದರೆ ಕನಿಷ್ಠ ಇಪ್ಪತ್ತೆರಡು ವರ್ಷ ಪಿಂಚಣಿ ಪಡೆದಿರುತ್ತಿದ್ದರು. ಆದರೆ ಅವರ ವ್ಯಕ್ತಿತ್ವದಲ್ಲಿ ಸರ್ಕಾರಿ ಗುಮಾಸ್ತಗಿರಿಗೆ ಜಾಗವಿರಲಿಲ್ಲ. ಆದರೆ ಯಾವುದಾದರೂ ಪತ್ರಿಕೆಗೆ ಗುಮಾಸ್ತನಿಗಿಂತಲೂ ಕೆಳದರ್ಜೆ ನೌಕರನಾಗಿ ನೂರಾರು ವರ್ಷ ಸೇವೆ ಸಲ್ಲಿಸುವ ಒಳ್ಳೆಯ ಮನಸ್ಸಿತ್ತು. ಬದಲಾಗಿ ಅವರ ಬರವಣಿಗೆಯ ಶೈಲಿ ರಾಷ್ಟ್ರೋತ್ಥಾನ ಬಳಗದವರ ಶೈಲಿಯಂತಿತ್ತು. ಇದೇನು ರೂಢಿಸಿಕೊಂಡಿದ್ದಲ್ಲ. ಅವರ ಕಾಳಜಿಗಳೆಲ್ಲ ಆ ದಿಕ್ಕಿನಲ್ಲಿ ಸ್ಫುರಿಸುತ್ತಿದ್ದವು. ಸೂರ್ಯನಾರಾಯಣರು ನಾಲ್ಕು ದಶಕಗಳ ಕಾಲ ಬರೆದ 'ಕನ್ನಡ ಪ್ರಭ' ಪತ್ರಿಕೆ ಅವರ ನಿಧನದ ಬಗ್ಗೆ ಹತ್ತು ಸಾಲಿನ ಸಂತಾಪ ಬರೆದು ಕೈತೊಳೆದುಕೊಂಡರೆ ಅದರ ಅಣ್ಣನಂತಿರುವ ಇನ್ನೊಂದು ಪತ್ರಿಕೆ ಕಾಲುಪುಟ ಬರೆದಿರುವುದಲ್ಲದೇ ಸೂರ್ಯನಾರಾಯಣರ ಮಕ್ಕಳಂತಿದ್ದ ಇಬ್ಬರು ಪತ್ರಕರ್ತರು ಅವರ ಶವದ ಮೇಲೆ ಹೂಗುಚ್ಛವಿಡುವ ಫೋಟೋ ಕೂಡಾ ಹಾಕಿದೆ.

ಸತ್ತವರ ಬಗ್ಗೆ ಹಗುರವಾಗಿ, ಕೆಟ್ಟದಾಗಿ ಮಾತನಾಡಬಾರದೆಂದು ಲಂಕೇಶ್ ಹೇಳಿದ್ದರೂ ಸೂರ್ಯನಾರಾಯಣರ ಬಗ್ಗೆ ಯಾವ ಕಡೆಯಿಂದ ನೋಡಿದರೂ ಹೃದಯ ತುಂಬಿ ಮಾತನಾಡಲು ಸಾಧ್ಯವಾಗುತ್ತಿಲ್ಲ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಹತ್ತಿಕೊಂಡ ಬಾಬಾ ಬುಡನ್‌ಗಿರಿ ಬೆಂಕಿಯಿಂದ ಅವರ ಮನಸ್ಸು ನಚ್ಚಗಾಗಿತ್ತು. ಬಾಬಾಬುಡನ್‌ಗಿರಿ ಎಂಬ ಹೆಸರನ್ನು ಅಳಿಸಿ ದತ್ತ ಪೀಠವೆಂದೇ ಬರೆಯಬೇಕೆಂದು ಚಡ್ಡಿ ಹೋರಾಟಗಾರರು ಫತ್ವಾ ಹೊರಡಿಸಿದಾಗ ಇವರು ಅದನ್ನು ಚಾಚೂತಪ್ಪದೆ ನಿರ್ವಹಿಸಿದರು. ಪೇಜಾವರಶ್ರೀ ಹೋರಾಟ ಕಂಡು ರೋಮಾಂಚನಗೊಳ್ಳುತ್ತಿದ್ದ ಸೂರ್ಯನಾರಾಯಣರ ಮಹತ್ತರವಾದ ಕನಸ್ಸು ಯಾವುದೆಂದರೆ ಈ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಬೇಕು. ಅದರಂತೆ ಅವರ ಕನಸು ನನಸಾಯಿತು. ಆದರೆ ಸರ್ಕಾರವನ್ನಾಗಲೀ, ಮುಖ್ಯಮಂತ್ರಿ ಮತ್ತವರ ಮಂತ್ರಿಗಳನ್ನಾಗಲೀ ಅವರು ಮೆಚ್ಚಲಾಗಲಿಲ್ಲ. ಹಾಗೆಂದು ಸಣ್ಣಪುಟ್ಟ ವಿಷಯಕ್ಕೆಲ್ಲಾ ವಾಚಕರವಾಣಿ ಮೊರೆಹೋಗುತ್ತಿದ್ದ ಅವರು, ಅಪ್ಪಿತಪ್ಪಿ ಈ ಸರ್ಕಾರವನ್ನು ಟೀಕಿಸಲಿಲ್ಲ. ತಮ್ಮ ಕರ್ಮಭೂಮಿಯಾದ ಕಡೂರಿನಲ್ಲಿ ಬಿಜೆಪಿ ಗೆಲ್ಲಲಿಲ್ಲವಲ್ಲಾ ಎಂಬ ಕೊರಗಿತ್ತು. ಆದರೆ ಗೆದ್ದ ಖುಷಿಯನ್ನು ಬಹಳ ದಿನ ಅನುಭವಿಸಲಾಗದೆ ಅಸುನೀಗಿದರು.



ಸೂರ್ಯನಾರಾಯಣರು ಪ್ರಾಮಾಣಿಕರು. ಅಷ್ಟೇ ಪ್ರಾಮಾಣಿಕತೆಯಿಂದ ತಮ್ಮವರ ಸೇವೆ ಮಾಡಿದರು. ತಾವು ನಂಬಿದ ತತ್ವಗಳ ಅನುಷ್ಠಾನಕ್ಕೆ ಶ್ರಮಿಸಿದರು. ಧರ್ಮ ಜಾಗೃತಿ ಸಭೆಗಳೆಂದರೆ ಅವರ ಮುಖದಲ್ಲಿ ಬ್ರಹ್ಮತೇಜಸ್ಸು ಎದ್ದು ಕಾಣುತ್ತಿತ್ತು. ಆ ಸ್ಫೂರ್ತಿಯಿಂದ ಪುಟಗಟ್ಟಲೇ ಬರೆಯುತ್ತಿದ್ದರು. ಅವನ್ನ ಎಷ್ಟು ಓದಿದರೂ ಮನಸ್ಸಿಗೆ ಏನೂ ಅನ್ನಿಸುತ್ತಿರಲಿಲ್ಲ. ಈ ತರಹದ ಹಲವಾರು ಜನ ಹಳೆಪತ್ರಕರ್ತರು 'ಸಂಯುಕ್ತ ಕರ್ನಾಟಕ'ದಲ್ಲಿ ಬರೆಯುತ್ತಿದ್ದರು. ಅಲ್ಲಿಂದ ಬಡ್ತಿ ಹೊಂದಿದವರು 'ಕನ್ನಡ ಪ್ರಭ'ಕ್ಕೆ ಹೋಗುತ್ತಿದ್ದರು. ಅಲ್ಲಿಂದಲೂ ಬಡ್ತಿ ಹೊಂದಿದವರು ಈಗ 'ವಿಕ' ಭಟ್ಟರ ಪತ್ರಿಕೆಯಲ್ಲಿ ಕೆರೆಯುತ್ತಿದ್ದಾರೆ. ಆ ಪೈಕಿ ಎಚ್.ಎಸ್.ಸೂರ್ಯನಾರಾಯಣ ತಮ್ಮ ಬದುಕಿನ ಕಡೆಯ ಹನ್ನೆರಡು ವರ್ಷ ಭಟ್ಟರ ಪತ್ರಿಕೆಗೆ ಕೆರೆದು ಮಡಿದಿದ್ದಾರೆ. ಆರು ದಶಕಗಳಷ್ಟು ದೀರ್ಘವಾಗಿ ಪೆನ್ನು ಹಿಡಿದಿದ್ದ ಸೂರ್ಯನಾರಾಯಣರ ಮನಸು ಯಾವ ದಿಕ್ಕಿನಲ್ಲಿ ಹರಿಯುತ್ತಿತ್ತು ಎಂಬುದು ಇದರಿಂದ ಗೊತ್ತಾಗುತ್ತದೆ.

• ಬಿಚಂ

ಮದರ್ V/s ಅ

ಶಿಕ್ಷಕರಿಗೆ ಬೇಕಿದೆ ಸೃಜನಶೀಲ ಓದ

ಮೊನ್ನೆ ಕೊಪ್ಪಳಕ್ಕೆ ಭೇಟಿ ನೀಡಿದ್ದ ರಾಜ್ಯ ಸರ್ಕಾರದ ಅಪರ ಆಯುಕ್ತರು ಮ
ವೃದ್ಧಿಸಿಕೊಳ್ಳಲು ಶಿಕ್ಷಕರು ನಿರಂತರ ಓದಿನಲ್ಲಿ ತೊಡಗಬೇಕು ಮತ್ತು ತಿಂಗಳಿಗೆ ಎ
ಪಠ್ಯೇತರ, ಸೃಜನಶೀಲ, ಮೌಲಿಕ ಕೃತಿಗಳನ್ನು ಓದಬೇಕು ಎಂಬ ಸೂಚನೆಯ ಆದ
ಪ್ರಸ್ತಾಪಿಸಿದ್ದರು. ಈಗಾಗಲೇ ಎಲೆಕ್ಷನ್ ಕೆಲಸ, ಗಣತಿ ಕೆಲಸ ಇತ್ಯಾದಿ ಕ್ಲರ್ಕ್ ಕೆಲಸಗಳಿಂದ
ಶಿಕ್ಷಕರಿಗೆ ಇದು ಮುನಿಸು ತಂದಿರಬಹುದೇನೋ? ಆದರೆ ಶಿಕ್ಷಕರ ವ್ಯಕ್ತಿತ್ವ ಬೆಳವಣಿಗೆ ದ
ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಯ ದೃಷ್ಟಿಯಿಂದ ಮೌಲಿಕ ಅಧ್ಯಯನದ ಅಗತ್ಯ ಇದ್ದೇ ಇ

ನಾನು ಎಸ್ಸೆಸೆಲ್ಸಿಯಲ್ಲಿದ್ದಾಗ 'ಮೈ ಮದರ್' ಎಂಬ ಕವನ ಪಠ್ಯವಾಗಿತ್ತು, ನ
ಮಾಡುತ್ತಿದ್ದ ಶಿಕ್ಷಕರು ಅದನ್ನು ತಾಯಿ ಕುರಿತ ಸರ್ವಶ್ರೇಷ್ಠ ಕಾವ್ಯ ಎಂಬಂತೆ ಬಿಂಬಿಸಿ ಒತ್ತಿ ಹೆ

ಮುಂದೆ ನಾವು ಕಾಲೇಜಿಗೆ ಸೇರಿ ಲಂಕೇಶರ 'ಅವ್ವ' ಓದಿದಾಗಲೇ ಅದು ನಮ್ಮೆಲ್ಲರ
ಕವನವಾಗಿತ್ತು ಎಂದೆನಿಸಿತ್ತು. ಏಕೆಂದರೆ 'ಅವ್ವ' ಕವನದಲ್ಲಿ ಆಪ್ತತೆ ಇತ್ತು, ಹಸಿಮಣ್ಣಿನ ವಾ
ಅವ್ವನ ಬೆವರಿತ್ತು....

ಬನದ ಕರಡಿಗೆ ನಿಮ್ಮ ಭಗವದ್ಗೀತೆ ಬೇಡ
ನನ್ನವ್ವ ಬದುಕಿದ್ದು
ಕಾಳುಕಡ್ಡಿಗೆ, ದುಡಿತಕ್ಕೆ, ಮಕ್ಕಳಿಗೆ;
ಮೇಲೊಂದು ಸೂರು, ಅನ್ನ, ರೊಟ್ಟಿ, ಹಚಡಕ್ಕೆ;
ಸರೀಕರ ಎದುರು ತಲೆಯೆತ್ತಿ ನಡೆಯಲಿಕ್ಕೆ....

ಒಂದ
ಪತ್ರ

ನಮಗೆ 'ಮೈ ಮದರ್' ಕಲಿಸಿದ ಶಿಕ್ಷಕರಿಗೆ ಈ 'ಅವ್ವ' ಗೊತ್ತೇ ಇರಲಿಲ್ಲ,
ಸೃಜನಶೀಲ ಓದಿನಲ್ಲಿ ತುಸುವಾದರೂ ಆಸಕ್ತಿ ಇದ್ದಿದ್ದರೆ, ಅವರು 'ಮೈ ಮದರ್' ಮತ್ತು
ಎದುರು ಬದುರಾಗಿಸಿ 'ಅವ್ವ'ನ ಘನತೆಯನ್ನು ವಿವರಿಸುತ್ತಿದ್ದರೋ ಏನೋ?

ಇವತ್ತಿಗೂ ಪರಿಸ್ಥಿತಿಯಲ್ಲಿ ಅಷ್ಟು ವ್ಯತ್ಯಾಸವಾಗಿಲ್ಲ. 'ಕೈಗಾರಿಕೆಗಳು ಆಧುನಿಕ ದೇವಾ
ಎಂದು ಪಾಠ ಮಾಡುವ ಶಿಕ್ಷಕರು ಎಸ್‌ಇಝೆಡ್‌ಗಳ ಅವಾಂತರದ ಕುರಿತೂ ಹೇಳುವಂತಾಗ
'ರಾಮಾಯಣ'ದ ಕುರಿತು ಕತೆ ಹೇಳುವ ಮಾಸ್ತರು ರಾಮನ ಹೆಸರಲ್ಲಿ ನಡೆಯುತ್ತಿರುವ ದುರ
ವಿದ್ಯಾರ್ಥಿಗಳಿಗೆ ಗೊತ್ತು ಮಾಡಬೇಕಲ್ಲವೇ?


ಹೀಗಾಗಿ ರಾಜ್ಯ ಸರ್ಕಾರದ ಅಪರ ಕಾರ್ಯದರ್ಶಿಯವರು ಹೇಳಿದಂತೆ ಶಿಕ್ಷಕರಿಗೆ ನಿ
ಪಠ್ಯೇತರ ಅಧ್ಯಯನ ಅಗತ್ಯವಿದೆ. ಅದು ಎಂದಿಗಿಂತ ಇಂದು ಹೆಚ್ಚು ಜರೂರಾಗಿದೆ. ಸರ್ಕಾ
ಒಂದು ಮಾತನ್ನು ನೆನಪಿಡಬೇಕು. ಬರೀ ಆದೇಶದ ಮೂಲಕ ಒತ್ತಡ ಹೇರಿ ಓದಿಸಲಾ

ಬಿ.ಇ.ಓ. ಆಫೀಸ್‌ಗಳಲ್ಲಾದರೂ ಉತ್ತಮ ಮೌಲಿಕ, ಸೃಜನಶೀಲ ಪುಸ್ತಕಗಳು ದೊ
ಮಾಡಬೇಕು. ಶಿಕ್ಷಕರಿಗೆ ಜನಗಣತಿ, ಚುನಾವಣಾ ಕೆಲಸಗಳ ಹೊರೆ ತಗ್ಗಿಸಿ, ಅವರನ್ನು
ಶಿಬಿರಗಳಲ್ಲಿ ತೊಡಗಿಸುವಂತಾಗಬೇಕು. ಆಗ ಶಿಕ್ಷಕರು ಸ್ವಇಚ್ಛೆಯಿಂದ ಹೊಸಹೊಸ
ಆಕರ್ಷಿತರಾಗುತ್ತಾರೆ. ನಮ್ಮ ಮಕ್ಕಳ ಜ್ಞಾನಾಭಿವೃದ್ಧಿಗೂ ಇದು ಪೂರಕವಾಗುತ್ತದೆ.

ಇಲ್ಲದಿದ್ದರೆ 'ಮೈ ಮದರ್'ಗಳ ಕೃತಕ ಧ್ಯಾನದಲ್ಲಿ ಈ ಮಣ್ಣಿನ 'ಅವ್ವ' ಮರೆತೇ ಹೋ

-ವಿಜಯ್ ಅಮೃತರಾಜ್

ನಮ್ಮೂ
ಹೆಣದ ಮೇ



ನಮ್ಮೂರಲ್ಲಿ,
ಚಡ್ಡಿ ತೊಟ್ಟ ಹೆಣ್ಣುಗಳ ಜೊತೆ
ಕುಣಿದು, ಕುಡಿಯಲು
ಸಾರಾಯಿ ಅಂಗಡಿಗಳಿವೆ.
ನಮ್ಮೂರಲ್ಲಿ,
ನನ್ನಪ್ಪನ ದಿನದ ಕೂಲಿಗೆ
ಒಂದೇ ಒಂದು ಕಪ್ ಚಾ ದೊರೆಯದ
ಹೋಟೆಲುಗಳಿವೆ.
ನಮ್ಮೂರಲ್ಲಿ,
ಹಳ್ಳಿಯ ಕಾಯಿಲೆಗೆ ಇಂಗ್ಲಿಷ್ ಹೆಸರು
ಹಚ್ಚಿದರೆ ಮಾತ್ರ ಚಿಕಿತ್ಸೆ ದೊರೆಯಬಲ್ಲ
ಗಾಜಿನೊಳಗೆ ಬಚ್ಚಿಟ್ಟುಕೊಂಡ ಆಸ್ಪತ್ರೆಗಳಿವೆ.
ನಮ್ಮೂರಲ್ಲಿ,
ಡೆಬಿಟ್ ಕಾರ್ಡ್ ತೋರಿಸಿದರೇನೇ
ಅಕ್ಕಿಸಾಮಾನು ಸಿಗುವಂತ
ಕಿರಾಣಿ ಅಂಗಡಿಗಳಿವೆ.
ನಮ್ಮೂರಲ್ಲಿ,
ಲೀಟರಿಗಿಂತಿಷ್ಟೆಂದು ನಿಗದಿಯಾದ
ಬಾಗಿಲಿಗೇ ಸರಬರಾಜು ಮಾಡುವ
ಕುಡಿವ ನೀರಿನ ವ್ಯವಸ್ಥೆಯಿದೆ.
ನಮ್ಮೂರಲ್ಲಿ,
ಹೊಲಸು ಪಾದಗಳನ್ನು ಜಾರಿಸುವ,
ನಡಿಗೆಗೂ ಸುಂಕ ಕೊಡಬೇಕಾದ
ನೈಸಾದ ರಸ್ತೆಗಳಿವೆ.
ನಮ್ಮೂರಲ್ಲಿ
ಈ ಎಲ್ಲಾ ಗೋಸುಂಬೆಗಳ
ನಡುವೆಯೂ 'ನಾವು',
ನಾವೇ ಆಗಿ ಜೀವಂತವಾಗಿದ್ದೇವೆ!
ನಮ್ಮೂರ ಪಡುವಣಕೆ
ದೇವರಗುಡ್ಡ ಅಲ್ಲಿಂದ ಬಿಸಿಲು
ಕಡಲೊಳಗೆ ಕಂತುವುದು ಚಂದವಂತೆ
ಅಜ್ಜನ ಕಾಲದಿಂದಲೂ
ನಾವ್ಯಾರೂ ದೇವರಗುಡ್ಡದತ್ತ
ಸುಳಿದವರಲ್ಲ; ಹಿರಿಯರ ಪ್ರಕಾರ
ಬ್ರಹ್ಮರಾಕ್ಷಸನ ನೆಲೆಯಂತೆ.
***
ಅನಿಲ ರತನ ವಿಜಯ ಲಕ್ಷ್ಮೀ
ನಿರ್ಮಿಸುತ್ತಾರಂತೆ ಹಳ್ಳಿಗುಡಿಯ
ದೇವರಗುಡ್ಡದ ಮೇಲೆ.
ಅದಕ್ಕೇ ನಮ್ಮೂರು ಮಾರ್ಪಾಡಾಗುತ್ತಿದೆ.
ಜೀವಂತವಾಗಿರುವ
ನಮ್ಮ ನಾಲ್ಕೈದು ಗುಡಿಸಲುಗಳಿರುವುದು
ಇಲ್ಲೇ ಇವೆಲ್ಲವುಗಳ ಜೀವಂತಿಕೆಯ
ವಿಮರ್ಶೆಯಂತೆ ಸದಾ ದುರ್ನಾತ
ಬೀರುತ್ತಾ
ಹರಿಯುವ ಹಳ್ಳದಾಚೆಗೆ.
ನಾವು ಗುಡಿಸಲಿನವರು
ನಮ್ಮೊಡನಿದ್ದ ತೆಂಗಿನ ಮರವ ಕಡಿದು
ಸಂಕ ಮಾಡಿಕೊಂಡಿದ್ದೇವೆ
ಹಳ್ಳ ದಾಟುವುದಕ್ಕೆ.
ಒಡೆಯರ ಮನೆಯ ದಿಕ್ಕಿಂದ
ಹುಲ್ಲುಬಂದಿದೆ ಬಂಡಿಯ ತುಂಬ.
ಊರಾಚೆ ಸುಂಕದ ಕಟ್ಟೆಯಲ್ಲಿ
ಎತ್ತುಗಳು ನೈಸಿನ ಮೇಲೆ
ಉಚ್ಚೆಮಾಡಿ, ಸಗಣಿಹಾಕಿವೆ
ಸುಂಕ ಕಟ್ಟಲು ಆಗದೆ ನಿಂತು!
ನಾಲ್ಕೈದು ಗುಡಿಸಲುಗಳು
ನಡುಗಿವೆ
ಸುಂಕ ಕಟ್ಟದೆ ಧಾವಿಸುತ್ತಿರುವ
ಮಳೆಯ ಮೋಡಗಳ ಕಂಡು
***
ಬ್ರಹ್ಮರಾಕ್ಷಸನೀಗ
ನಮ್ಮೂರ ಬಗ್ಗೊಂದು ಬ್ಲಾಗು
ದೇವರಗುಡ್ಡದ ರಮಣೀಯತೆಯ
ಕುರಿತೊಂದು ವೆಬ್ ಸೈಟ್ ತೆರೆದುಕೊಂಡು
ತೆರಿಗೆ ವಿನಾಯಿತಿ ಪಡೆದು
ಪ್ರವಾಸೋದ್ಯಮದಲ್ಲಿ ತೊಡಗಿಕೊಂಡಿದ್ದಾನೆ.
ಒಂದು ಮುಸ್ಸಂಜೆಗೆ
ರಾಶಿ ರಾಶಿ ಕಾರುಗಳು
ದೇವರಗುಡ್ಡ ಸೇರಿಕೊಂಡು
ಮುಂಜಾನೆ
ಹಳ್ಳ ಉಕ್ಕಿಹರಿದು
ನಮ್ಮ ನಾಲ್ಕೈದು ಜೀವಂತ ಗುಡಿಸಲುಗಳ
ತೇಲಿಸಿಕೊಂಡು ಸಮುದ್ರದ ಕಡೆಗೆ
ಒಯ್ದುಬಿಟ್ಟವು.

• ಸಂತೋಷ ಗುಡ್ಡಿಯಂಗಡಿ

ಜಡಜಿಗಳೆ ಹಿಂಗಾದ್ರೆ ನಾವ್ಯಂಗ್ಲ ಕೋರ್ಟಿಗೋಗದು!

ಮಾವನಿಗೆ ಉಗ್ರಿಯಂತವರನ್ನು ನೋದಿ ಸಿಟ್ಟು

ಕಂಡ್ರ, ಎಡೂರಪ್ಪನ ಕತೆ ಆಯ್ತು. ಇನ್ನವುನು ಟೆ ಕಟ್ಟದೆಯಾ ಅನ್ನಕಿಡುದು ತಿಂಗಳಾಯ್ತು. ಗೂ ಹೇಳ್ತರೇನ್ಲ" ಎಂದ.

ರಸ್ವಾಮಿ ಲಕ್ಯಾಚಾರದಲ್ಲಿ ಅವುನು ಮನಿಗೋಗಿ ಗಳಾಗಬೇಕಾಗಿತ್ತು ಕಣಮಾವ. ಅದೇನಾಯ್ತಪ್ಪ ಕ್ಯಾರ್‌ಪೇಟೆ ಕಿಷ್ನನ್ನ ಕುಮಾರಸ್ವಾಮಿ, ದೇವೇ ಗಂಡು ಆಟ ಆಡಿದ್ರುಲ್ಲಾ, ಅದೇ ಆಟವ ಈ ಆಡಕ್ಕೆ ಸುರುಮಾಡಿದ್ದನಂತೆ."

ಹಳ್ಳಿಪುರಾಣ

ಲು ಸೀ ಮೆ

ಬಿ. ಚಂದ್ರೇಗೌಡ

ಅಲ್ಲ ಕಂಡ್ರ, ಕೋಟ್ ಜಡಜಿ ಸಾಯೇಬ್ರನ್ನೇ ಡಿದ್ದನಂತೆ ಕಂಡ್ರ ಈ ಎಡೂರ, ನೋಡು ದ ಸೀರ.

ಯೋ ಮಾವ ನಿನಿಗೇಳಿದೊರು?"

ಊರು ದಸರಾಕ್ಕೋಗಿ ಬಂದ ಮಂಜೇಗೌಡ ದೆ ಹೇಳತಾಯಿದ್ದ ಕಂಡ್ರ. ಜಡಜಿಗಳು ಅಂಗ್ಯಲ್ಲ ತೆ ಹೋಗದಿಲವಂತೆ. ಆದ್ರೆ ಈ ಎಡೂರಪ್ಪ ಸರ ನೋಡಕ್ಕೆ ಕರಕಂಡು ಬಂದಿದ್ನಂತೆ."

ನನಿಗೂ ಗೊತ್ತು ಕಣೊ. ಅಂಗಂತ ಜಡಜಿ ಗೆ ಈಲ್ಡಾಗ್ಯವುನೆ ಅನ್ನಂಗೆ ಮಾತಾಡ್ತಿಯಲ್ಲೊ?"

ಜಗಳ ಮ್ಯಾಲೆ ಅಂಗ್ಯಲ್ಲ ಹೇಳಬಾರ್ದು ಕಂಡ್ರ. ರ್ ಮ್ಯಾಲೇಳು ಒಪ್ಪಿಗತ್ತಿನಿ. ಅವ್ರುರು ಯಂಗಾರ ಅದ್ರೆ ಜಡಜಿ ಅವುನೆ ನೋಡು ಅವುನು ಮಾನ. ಕೋಟಲ್ಲಿ ಕೂತಗಂಡು ಯಲ್ಲಾನು ಿ, ತೂಕ ಮಾಡಿ ನ್ಯಾಯ ಅನ್ಯಾಯ ಅಳಿದು ಕೊಟ್ಟು ಎದ್ದು ಹೋಯ್ತಾಯಿರತನೆ. ಅಂಥೊರ ನ್ಯಾಯ ಹೇಳಬಾರ್ದು. ಅದ್ಕೆ ನಾನು ದು ಭಾಗೆ, ಅವ್ರುರೊಂದು ಭಾಗ ಅಂತ ು" ಎಂದು ಕಾಳಮಾವ ಬಹು ಗಂಭೀರವಾಗಿ

ು ದೊಡಪ್ಪ ದೇವಾಂಸ ಸಂಭೂತರು" ಎಂದು ಂದ.

ಜಗಳು ದೇವರ ಸಮಾನ ಅಂತ ಕಾಳಮಾವ ವುನೆ ಕಣೋ" ಎಂದ ಉಗ್ರಿ.

ನಮ್ಮ ದ್ವಡಪ್ಪನ ನಂಬುಕೆ. ಯಾಕೆ ಅಂದ್ರೆ ಲ್ಲಿ ಅವುನು ಪಂಚಾಯ್ತಿ ಮಾಡಿ ತೀರ್ಪು ಯಲ್ಲಾ ಜಾತಿಯೋರಿಗೂ ಒಂದೇ ತರ ವುನೆ. ಆದ್ರೆ ಒಬ್ಬರಿಗೆ ಮಾತ್ರ ದಂಡ ಹಾಕಲಿಲ್ಲ" ಟಿಸ್ಸೆ.

ರಿಗಾಕಲಿಲ್ಲಾ?" ಎಂದಳು ಜುಮ್ಮಿ.

ರ ಕ್ಯಾಶಣ್ಣ ಗ್ಯಂಡಣ್ಣ ತಿಮ್ಮೇಗೌಡನ ಜ್ವತೆ ಪಟೇಲ್ರುವ ಮೂರು ಕುರಿ ಕುಯ್ಕಂಡು ತಿಂದಿದ್ರಂತೆ. ತಿಂದೋನ್ಯಾರು ಅಂದ್ರೇ ತಿಮ್ಮೇಗೌಡ ವಬ್ಬನೆ. ಆದ್ರೆ ನಾನೊಬ್ಬನೆ ಕದ್ದು ಕುರಿ ತಿಂದೆ ಅಂತ ಹೇಳಕ್ಕೆ ಅವುಮಾನಾಗಿ ಕ್ಯಾಶಣ್ಣ ಗ್ಯಂಡಣ್ಣನ ಹೆಸರುನೂ ಹೇಳಿಬುಟ್ಟ. ಅವತ್ತಿನ ದಿನಕೆ ತಲಾ ಮೂರು ಸಾವುರುಪಾಯಿ ದಂಡ ಹಾಕಿದ್ರು. ಆದ್ರೆ ತಿಮ್ಮೇಗೌಡನಿಗೆ ಒಂದು ಪೈಸನೂ ಹಾಕಲಿಲ್ಲ, ಅಲವೆ ದ್ವಡಪ್ಪ?"

"ಅದಿನ್ನೂ ಗೆತ್ತಿ ಮಡಿಕಂಡಿದ್ದಿಯೇನ್ಲ ನೀನು?"

"ಅವತ್ತಿನ ದಿನ ನಾನು ಸಣ್ಣುಡಗ ಆಗಿರಬೌದು. ಆದ್ರೆ ಪ್ರತಿ ಡೈಲಾಗು, ಸೀನಗಳು ನ್ಯನಪಲ್ಲವೆ ದ್ವಡಪ್ಪ, ಪಾಪ ಇಬ್ಬರು ಹರಿಜನರಿಗೆ ದಂಡ ಹಾಕಿ ನಿಮ್ಮ ಸಂಬಂಧಿ ತಿಮ್ಮೇಗೌಡನ್ನ ಅಂಗೇ ಬುಟ್ರಿ. ಇದು ಸರಿನೆ?"

"ಸರಿಯಲ್ಲ ಕಣ್ಲ ನಾನು ಒಪ್ಪಿಗತ್ತಿನಿ. ಅವತ್ತೇನಾಯ್ತಪ್ಪ ಅಂದ್ರೇ ತಿಮ್ಮನಿಗೆ ದಂಡ ಹಾಕಿದ್ರೆ ಆ ದುಡ್ಡ ನಾನು ಕೊಡ್ತಿನಿ ಅಂದ ಬ್ಯಾರಣ್ಣ, ಯಾಕಂದ್ರೆ ಕುರಿಕಳ್ಳನ್ನ ಹಿಡುದು ಕೊಟ್ಟವುನೆ, ಆದ್ರಿಂದ ಅವುನಿಗೆ ದಂಡ ಹಾಕಬ್ಯಾಡಿ ಅಂತ ಭೈರೇಗೌಡ, ಹಾಳಪ್ಪ ಗೌಡ ಯಲ್ಲ ನನಿಗೇಳಿದ್ರು. ಅವುರು ಕಡೆ ಬವುಮತಿತ್ತು. ನಾನಾಕಲಿಲ್ಲ."

"ಆದ್ರು ಹಾಕಬೇಕಾಗಿತ್ತು ದ್ವಡಪ್ಪ ನೀನು. ನೋಡಿವತ್ತು ಹೋಯ್ತರೆ ಅಂದ್ರೆ, ಅವುರು ಸರಿಲ್ಲ ಅಂತ. ಸರಿಲ್ಲ ಅನ್ನದಾದ್ರೆ ಎಡೂರಪ್ಪನ ಪರ ತೀರ್ಪು ಬತ್ತದೆ ಅಂತ. ಬಂದಮ್ಯಾಲೆ ನ್ಯಾಯಾಂಗದ ಮೇಲಿರೊ ನಂಬುಕೆ ವಂಟೊಯ್ತದೆ. ಅಲ್ಲಿಗೆ ಡೆಮಾಕ್ರಸಿ ಕ್ವಲ್ಯಾಪ್ಸಾತ್ತಾಯ್ತು ಅಂತ್ಲೆ ತಿಳಕಬೇಕು."

"ಫೂಟ್ ಲಾಯರಿಯಂಗೆ ಮಾತಾಡ್ತನಂಗೆಯ."

"ಫೂಟ್ ಲಾಯರಿ ಅಲ್ಲ ಕಣಕ್ಕ, ನಾನು ಚುನಾವಣೆಲಿ ಓಟು ಮಾಡಿರೊ ಒಬ್ಬ ಸಾಮಾನ್ಯ ಪ್ರಜೆ. ಕೇಳೊ ಹಕ್ಕದೆ ಕೇಳ್ತಿನಿ. ಜಡಜಿಗಳು ಎಡೂರಪ್ಪನ ಪರ ಆಗದೆ ಆದ್ರೆ ನಾವ್ಯಂಗೆ ಕೋರ್ಟಿಗೋಗದು? ನಾನು ಈ ಕ್ಷಣ ಒಂದು ಕರೆ ಕೊಡ್ತಿನಿ. ನೀವ್ಯಾರು ಇನ್ನು ಮ್ಯಾಲೆ ಕೋರ್ಟಿಗೂ ಹೋಗಬೇಡಿ, ಪೊಲೀಸ್‌ಟೇಶನಿಗೂ ಹೋಗಬೇಡಿ."

"ಅಲ್ಲಾ ಕಣೊ ವಾಟಿಸ್ಸೆ, ಕಾಳಮಾವ, ಸೀರಮಾವ, ನಮ್ಮ ಜುಮ್ಮಿ ಇವತ್ತಿನವರಿಗೂ ಕೋರ್ಟು ಹೋಗ್ಲಿ ಪೊಲೀಸ್‌ಸ್ಟೇಷನ್ ಹತ್ರಕೋಗಿಲ್ಲ, ಅಲ್ಯಲ್ಲ ಹೋಗಿ ಬಂದಿರೊನು ನೀನೆಯ. ಇವತ್ತೂ ಹೋಯ್ತಾಯಿದ್ದಿಯೇನೂ" ಎಂದು ಉಗ್ರಿ ನಕ್ಕ.

"ಅದ್ಯಾವು ಕೇಸ್ಗ ನೀನು ಕೋಟಿಗೋಗದು?"

"ಅದಾಗ್ಲೆ ಹದ್ನೈದು ವರ್ಸದ ಮೇಲಾಯ್ತು ಕಣಕ್ಕ. ಎಸ್.ಡಿ. ಜಯರಾಮು ಗಣಿ ಮಂತ್ರಿಯಾಗಿದ್ನಲ್ಲ, ಅವುನು ನಾಗಮಂಗಲಕ್ಕೆ ಬಂದಾಗ ಪ್ರತಿಭಟನೆ ಮಾಡಿ ಅಂತ ಶಿವರಾಮೇಗೌಡ ಹೇಳಿದ್ದ, ನಾವು ಅಂಗೆ ಮಾಡಿದೊ. ಪೊಲೀಸ್‌ನೋರು ಹಿಡಕಂಡೋಗಿ ಕೇಸಾಕಿದ್ರು. ಆ ಕೇಸು ಜಯರಾಮಣ್ಣ ಸತ್ರ ಇನ್ನು ನ್ಯಡಿತಾ ಅದೆ. ಆದ್ರಿಂದ ನಮ್ಮ ನ್ಯಾಯಾಂಗದ ವ್ಯವಸ್ಥೆ ಪೈಲೂರಾಗಿದೆ ಅನ್ನೊ ತೀರ್ಮಾನಕ್ಕೆ ಬಂದಿದ್ದಿನಿ. ಬೇರೆ ಆಲ್ಟರ್‌ನೇಟ್ ಮಾಡಲಿಲ್ಲ ಅಂದ್ರೆ ದೇಸ ಉಳಿಯಲ್ಲ ಕಣಕ್ಕ. ಯಾಕಂದ್ರೆ ಜಡಜಿಗಳೆ ಹಿಂಗಾದ್ರೆ ಇನ್ನೆಲ್ಲಿ ದೇಸ ಉಳಿತದಕ್ಕ?"

"ನೋಡೊ ವಾಟಿಸ್ಸೆ, ಯಾರೊ ಅಂಗಾದ್ರು ಅಂತ ಬಾಯಿಗೆ ಬಂದಂಗೆ ಮಾತಾಡಬ್ಯಾಡ. ಸಂತೋಸ್ಯಗಡೆ ಅಂಥೋರು ಹತ್ತು ಜನಿದ್ರೆ ಸಾಕು ದೇಸ ನ್ಯಡಕಂಡೋಯ್ತದೆ" ಎಂದ ಉಗ್ರಿ.

"ಮಿಸ್ಟರ್ ಉಗ್ರಿ, ನಾನೇಳ್ತಯಿರದು ಅದಲ್ಲ ಕಣೊ. ಆಪರೇಷನ್ ಕಮಲಕ್ಕೆ ನಾರಾಯಣಸ್ವಾಮಿ, ಗುತ್ತೇದಾರ್, ಚಿಂಚನಸೂರು ಅನ್ನೊ ಶಾಸಕರು ಸಿಕ್ಕಲಿ, ಆದ್ರೆ ನ್ಯಾಯಂಗ ಸಿಗಬಾರದಲವೇನೊ."

"ಸುರೇಶ್‌ಗೌಡ್ನು ಸಿಗಾಯ್ಕಂಡಿದ್ದನಂತಲ್ಲಾ?" ಎಂದಳು ಜುಮ್ಮಿ.

"ಅಂಗರಿವುನು ವಂಟಿದ್ದನೆ?"

"ಇವುನಲ್ಲ ಕಣಮಾವ. ಸುರೇಶ್ ಗೌಡ ಅನ್ನೊ ಯಮ್ಮೆಲ್ಲೆ ಗುಬ್ಬಿ ಎಮ್ಮೆಲ್ಲೆ ಮನಿಗೋಗಿ ಕೇಳಿದೋಟು ಹಣಕೊಡ್ತಿವಿ ಬತ್ತಿಯಾ ಅಂದನಂತೆ. ಅದ್ಕೆ ಶ್ರೀನಿವಾಸ ಹೋಗಿ ಅವುನೆದ್ದಿ ಕೇಳಿದ್ನಂತೆ. ಈತರಕೀತರ ಕರೀತಾ ಅವುರೆ ಹೋಗ್ನೆ ಅಂತ. ಅದಕವುನೆದ್ದಿ ನೀನೇನಾರ ಹೋದ್ರೆ ನಾನು ನಿನ್ನೆಬುಟ್ಟೊಯ್ತಿನಿ ಅಂದ್ಲಂತೆ."

"ಅವುಳ ಕಂಡ್ರ ನಿಜವಾದ ಹೆಣ್ಣುಮಗಳು" ಎಂದ ಕಾಳಮಾವ.

"ಅಂಗಂದ್ಲಂತೆ ಕಣಮಾವ. ಅದ್ಕೆ ಶ್ರೀನಿವಾಸ ಹೆದ್ರಿಕಂಡು ಸುಮ್ಮನಾದನಂತೆ."

"ಆ ನಾರಾಯಣಸ್ವಾಮಿ, ಗುತ್ತೇದಾರ, ಚಿಂಚನಸೂರೆಡ್ತಿರು ಅಂಗೆ ಅಂದಿದ್ರೆ ಎಷ್ಟು ಚನಾಗಿರದು" ಎಂದಳು ಜುಮ್ಮಿ.

"ಅದ್ಯಂಗನ್ತಕ್ಕ? ಯಲ್ಲಾ ಲೇಡೀಸು ನಿನ್ನಂಗೆ ಇರತರ? ಅಥವ ಶ್ರೀನಿವಾಸ್ ಮಿಸಸ್ ತರ ಇರತರ? ಗಂಡ ತಪ್ಪು ಮಾಡದೆ ಆದ್ರೆ ಹೆಂಡ್ತಿಗೆದುರು ಬೇಕು. ಅಂಗಿದ್ರೆ ರಾಜಕಾರಣಿಗಳು ಮಾಡೊ ಅಪರಾಧ ಕಡಮೆ ಆಗ್ತವೆ. ಬಿಜೆಪಿ, ಎಡೂರಪ್ಪ ಕೋಟ್ಯಂತರುಪಾಯಿ ಕೊಡ್ತನೆ ಏನು ಮಾಡದೆ ಅಂತ ಗಂಡ ಕೇಳಿದಾಗ, ಅಂತ ದುಡ್ಡ ಮನಿಗೆ ತರಬ್ಯಾಡ ಅಂದ್ರೆ ಸರಿ. ಆದ್ರೆ ತಗುಂಬಾ ಮಕ್ಕಳಿಗ್ಯಲ್ಲ ಮನೆ ಕಟ್ಟಿಸಿ, ಕಾಂಪ್ಲೆಕ್ಸ್ ಕಟ್ಟಿಸಿ, ಕಾರು ತಗೊಡನ ಅಂತ ಈ ನಾರಾಯಣಸ್ವಾಮಿ, ಗುತ್ತೆದಾರ, ಚಿಂಚನಸೂರನೆಡ್ತಿ ಅನ್ನದೆ ಆದ್ರೆ ಈ ಮುಂಡೆಮಕ್ಕಳು ಸುಮ್ಮನಿದ್ದರಾ? ಕದೀಮರಂಗೆ ಹೋಯ್ತರೆ."



ಅಂಗೆ ಆಗ್ಯದೆ. ಇಬ್ಬರು ಜಡ್‌ಜಿಗಳು ಎಡೂರಪ್ಪನ ಪರ ಇದ್ದರಂತೆ. ಇನ್ನಬ್ಬರು ಮಾತ್ರ ನ್ಯಾಯದ ಪರ ಗಟ್ಟಿಯಾಗಿದ್ದರಂತೆ. ಅದಕ್ಕೆ ನೋಡು ಎಡೂರಪ್ಪಾಗ್ಲೆ ಕೋರ್ಟು ತೀರ್ಪು ನಮ್ಮ ಪರ ಬತ್ತದೆ ಅನ್ನಕ್ಕೆ ಶುರು ಮಾಡ್ಯವುನೆ. ಬಿಜೆಪಿ ಜನಗಳು, ಲಾಯರಗಳ್ಯಲ್ಲ ಕೋರ್ಟು ತೀರ್ಪು ನಮ್ಮ ಪರನೆ ಬತ್ತದೆ ಅಂದ್ರೆ ಜಡ್‌ಜಿಗಳ ನಡವಳಕೆ ಡವುಟಾಗ್ಯದೆ."

"ಅಂಗರೇನ್ಲ ನೀನೇಳದು, ಜಡಜಿಗಳು ಹಾಳಾಗಿದ್ದರೆ?"

"ಅದರಲ್ಲಿ ಪರಸಂಟೇಜದೆ ದ್ವಡಪ್ಪ, ಇನ್ನು ಸಿಕ್ಸ್‌ಟಿಪರ ಸೆಂಟು ಜಡ್‌ಜಿಗಳು ನ್ಯಾಯದ ಪರ ಇದ್ದರಂತೆ. ಇನ್ನುಳದ ಪರಸಂಟೇಜಿನೋರು ಮೈಸೂರು ದಸರ ನೋಡಕ್ಕೋಗಿದ್ರಲ್ಲ ಅವುರಂಗಾಗಿದ್ದರಂತೆ."

"ಅವುರೇನಾಗಿದ್ದರ್ಲ?" ಎಂದಳು ಜುಮ್ಮಿ.

"ಅವುರೇನು ಆಗಿಲ್ಲ ಕಣಕ್ಕ. ಸದ್ದಿಕೆ ಅಪರಾಧಿ ಸ್ಥಾನದಲ್ಲಿರೊ ಎಡೂರಪ್ಪನ ಜ್ವತೆ ಕುಂತಗಬಾರ್ದು, ಮಾತಾಡಬಾರ್ದು, ಮುಖ್ಯವಾಗಿ ಅಲ್ಲಿಗೋಗಬಾರ್ದು. ಆದ್ರೂ

"ಹೆಡತಿ ಮಾತ ಯಾರು ಕೇಳ್ತರ್ಲ? ನೀನು ನಿನ್ನೆಡ್ತಿ ಮಾತ ಕೇಳ್ತಿಯಾ?" ಎಂದಳು ಜುಮ್ಮಿ.

"ಕೆಲವುರು ಕೇಳ್ತರೆ, ಕೆಲವುರು ಕೇಳದಿಲ್ಲ ಕಣಕ್ಕ. ಆದ್ರೂವೆ ಎಡೂರಪ್ಪ ಕೊಡೋ ಇಪ್ಪತ್ತೈದು ಕೋಟಿ ತಗಂಡು ಮುಂದೆ ಜೀವನ ಮಾಡ್ತರಲ್ಲಾ ಅದು ಹಂದಿ ಜೀವನ ಕಣಕ್ಕ. ಮನುಸರ ಜೀವನ ಅನ್ನಕ್ಕೆ ಸಾಧ್ಯವೇಯಿಲ್ಲ. ಒಂಥರಾ ಹೇಸಿಗೆ ತಿಂದ ಹೇಸಿಗೆ ಜೀವನ."

"ಹಂದಿ ಹೇಸಿಗೆ ತಿಂದ್ರುವೆ ಕಿತಗಂಡು ತಿನ್ನದಿಲ್ಲ, ಅಲ್ಲಿ ಬದ್ದಿದ್ರೆ ತಿಂತದಷ್ಟೆಯ. ಆದ್ರೆ ಎಮ್ಮೆಲ್ಲೆಗಳು ಮಾರಿಕಂಡು ಮಾಡದು ಹೇಸಿಗೆ ಜೀವನ ಕಣೊ ವಾಟಿಸ್ಸೆ."


"ಎಜ್ಜಾಟ್ಲಿ ಕರಟ್ ಕಣೊ ಉಗ್ರಿ." ●

ಭೇಟಿ ಮತ್ತು ಅಗಲಿಕೆ

ಈ ಪುಟ್ಟ ಅಂಕಣದಲ್ಲಿ ಬರೆದದ್ದನ್ನು ಯಾರೂ ತಮಗೇ ಅನ್ವಯಿಸಿಕೊಂಡು ಬಾರದು. ನನ್ನ ಡೈರಿಯಲ್ಲೂ ಬರೆಯದೆ ಇರುವುದನ್ನು ಇಲ್ಲಿ ಬರೆಯುತ್ತಿರುತ್ತೇನೆ. ಸಗೆ, ನನ್ನನ್ನ ನೋಡುವುದಕ್ಕೆಂದು ಬಂದವರಿಗೆ ನನ್ನ ಸಹಾಯಕರು ಹೇಳಿರುತ್ತಾರೆ, ್ಯಯಲ್ಲಿ ಸರಿ ಇಲ್ಲ, ಹತ್ತು ನಿಮಿಷ ಮಾತ್ರ ಮಾತಾಡಲು ಸಾಧ್ಯ, ಅದಕ್ಕಿಂತ ತ್ತು ಕೂತುಕೊಳ್ಳದೆ ನೀವೇ ಎದ್ದುಬನ್ನಿ." ಆದರೆ ನೋಡಲು ಬಂದವರಿಗೆ ರ್ಥವಾಗುವುದೇ ಇಲ್ಲ. ನಾನು ಪರೋಕ್ಷವಾಗಿ, "ಸರಿಬಿಡಿ, ಅಷ್ಟು ಯಿತು" ಎಂದು ಮಾತುಮುಗಿಸುವ ವರಸೆಯಲ್ಲಿ ಹೇಳಿದರೆ ಅವರಿಗೆ ವುದಿಲ್ಲ, ಕೂತೇ ಇರುತ್ತಾರೆ. "ನೀವು ತುಂಬ busy ಅಂತ ಕಾಣುತ್ತೆ" ಏಳುವುದಿಲ್ಲ. "ನಾನೀಗ ಹೆಚ್ಚು ಮಾತಾಡುವುದು ಕಷ್ಟ. ಏಕಾಗ್ರತೆ ನನ್ನನ್ನು ಸುಸ್ತು ಅಂದರೂ ಅವರಿಗೆ ತಿಳಿಯುವುದಿಲ್ಲ. ಅದೆಲ್ಲ ನಾನು ವೈಯಕ್ತಿಕವಾಗಿ ತೋಡಿಕೊಳ್ಳುತ್ತಿರುವ ತಿಳಿಯುತ್ತಾರೆ. ಹೀಗಾಗಿ "ಸರಿ, ಹೋಗಿಬನ್ನಿ" ಎಂದು ಹೇಳಬೇಕಾಗುತ್ತದೆ. ಇದನ್ನು ನನ್ನ ಗೆಳೆಯರು ಕೆಲವರು, "ಹೀಗೆ ನೇರವಾಗಿ ಹೇಳೋದು ನೀವೊಬ್ಬರೇ ಅಂತ ಅಂದರು.

ಹೇಳೋಲ್ಲವಾ? ನೀವು ಅವರಿಂದ ಹೇಗೆ ಬಿಡುಗಡೆ ಪಡೆಯುತ್ತೀರಿ?" ಅಂದೆ. ಗೆ ಅಂಥ ಸಂದರ್ಭಗಳೇ ಬರೋಲ್ಲ. ಆದರೆ ಪುರಸೊತ್ತಿಲ್ಲದ ಕೆಲವರು ಮುಂಚೆಯೇ ರ್ಶಿಗೆ ಹೇಳಿರುತ್ತಾರೆ; ಆತ (ಅಥವಾ ಆಕೆ) ನೆನಪಿಸುತ್ತಾನೆ; ಬಾಸ್ ಆದವನು ನಿಮ್ಮ ಜೊತೆಗೆ ಇನ್ನೂ ಮಾತಾಡಲು ಇಷ್ಟ. ಸಾಧ್ಯವಾಗುತ್ತಿಲ್ಲ, ಕ್ಷಮಿಸಿ' ಎಂದು ಹೇಳಿ ಅವರನ್ನು ಬೀಳ್ಕೊಡುತ್ತಾನೆ," ಅಂದರು.


ನಾನು ನಕ್ಕೆ, "ಅಷ್ಟೆಲ್ಲ ನಾಟಕವಾಡಿದರೆ ತುಂಬ energy ಖರ್ಚಾಗುತ್ತೆ ಅಲ್ಲವೆ? ನೋವಾಗದ ರೀತಿಯಲ್ಲಿ ಇನ್ನೊಮ್ಮೆ ನೋಡೋಣ. ದಯವಿಟ್ಟು ಹೋಗಿಬನ್ನಿ' ಎಂದು ಸೂಚಿಸುವುದು ಸರಳವಾದ ರೀತಿಯಲ್ಲವೆ?" ಅಂದೆ. ಅವರಿಗೆ ನನ್ನ ಮಾತು ಅರ್ಥವಾಗಲಿಲ್ಲ.



ಇದೆಲ್ಲ ತುಂಬ ವಿಚಿತ್ರ. ನೋಡಲು ಬಂದ ಅಥವಾ ನೋಡಲ್ಪಡುವ ಮನುಷ್ಯರು ಅನೇಕ ಬಗೆಯವರಾಗಿರುತ್ತಾರೆ. ಲಾಭದಾಯಕ ಮನುಷ್ಯರು, ಸ್ನೇಹಪರರು, ಪ್ರೀತಿಯವರು, ವ್ಯವಹಾರಕ್ಕೆ ಅಗತ್ಯವಾದವರು, ಸುಮ್ಮನೇ ಜೊತೆಗಿದ್ದು ಖುಷಿ ಕೊಡುವವರು. ನಾನಂತೂ ದೊಡ್ಡ boss ಅಲ್ಲ; ವೇಳೆಯ ಬಗ್ಗೆ ಕಾಳಜಿ ಉಳ್ಳವನಾದರೂ ವೇಳೆಯೇ ಪರಮಮೌಲ್ಯ ಎಂದು ತಿಳಿದವನು ಕೂಡ ಅಲ್ಲ. ಅಲ್ಲದೆ ವೇಳೆಗೆ ಬದ್ಧವಾದ ಈ ಜೀವನದಲ್ಲಿ ಭೇಟಿ ಮತ್ತು ಅಗಲಿಕೆ ನೀಡುವಷ್ಟು ಸಂತೋಷ ಮತ್ತು ನಿರಾಶೆಯನ್ನು ಯಾವುದೂ ಕೊಡುವುದಿಲ್ಲ. ಕಾಲ ಸರಿಯುತ್ತದೆ; ಪ್ರತಿಯೊಬ್ಬನೂ ನಿರಂತರ ಅಗಲಿಕೆಗೆ ಸಿದ್ಧವಾಗಬೇಕಾಗುತ್ತದೆ.


ಇಷ್ಟೆಲ್ಲ ಗೊತ್ತಿದ್ದವರು ಒಬ್ಬರಿಗೊಬ್ಬರು ಭೇಟಿ ಅಥವಾ ಅಗಲಿಕೆಯಿಂದ ತೊಂದರೆ ಕೊಡದಿದ್ದರೆ ಒಳ್ಳೆಯದು....

-ಜುಲೈ 13, 1994



ಏನ್ ಸಾಯಾನ ಹೇಳಿ

ಅಣಕ



▸ ಎಚ್.ಎಲ್. ಕೇಶವಮೂರ್ತಿ

ಪಾಪ ಶಾಸಕರು ಅಮಾಯಕರು ಕಣ್ರಿ. ಅವರದ್ದೇನೂ ತಪ್ಪಿಲ್ಲ, ಎಲ್ಲ ಹಾಳಾದ ತತ್ವಸಿದ್ಧಾಂತಗಳ ಕಾಟ. ನಿಮ್ ಸಾವಾಸ ಬ್ಯಾಡ ಅಂದ್ರೂ ಕೇಳೂಲ್ಲೊ. ಒಂದರ ತತ್ವ ಒಂದು ಬಂದು ಅಟಕಾಯಿಸಿಕೊಳ್ಳೋವು. ತತ್ವಕ್ಕೆ ಹಟಾ ಹಟಾ ಅಂದ್ರೆ ಸಿದ್ಧಾಂತ ಬೆನ್ನತ್ತೋದು. ಬ್ಯಾಡ ಕನ್ರೋ ನಿಂ ಸಾವಾಸ, ನಿಂ ಜಾಯಮಾನಕ್ಕೂ ನಮ್ಮದ್ಕೂ ಹೊಂದಾಣ್ಕೆ ಆಗೊಲ್ಲ ಅಂದ್ರೂ ಬುಡೊಲ್ಲೊ. ಒಸಿದಿಸ ಬಂದು ರುಚಿ ನೋಡು. ಬ್ಯಾಸರ ಆದ್ರೆ ಬುಡೀವಂತೆ. ಇಲ್ಲ ಸಾಕಾದ್ರೆ ನಾವೇ ಕಳುಸಿ ಕೊಡ್ತೀವಿ ಅಂತ ಹಿಂದಿ ಹಿಪ್ಪೇಕಾಯಿ ಮಾಡೋವು. ಇದನ್ನೆಲ್ಲ ಹೆಂಗೋ ನಿಭಾಯಿಸಾನ ಅಂದ್ರೆ ಅವರ ಪಕ್ಷ ಅನ್ನೊ ಮನ್ಲೇ 'ಥೂ ಕುರ್ರೋ' ಅಂತಿರ್ಲಿಲ್ಲ ಅನೋದು ಧುತ್ತನೆ ನೆಪ್ಗೆ ಬರೋದು. 'ಕವಡೆ ಕಾಸಿನ ಕಿಮ್ಮತ್ತೂ ಇಲ್ಲದ ಪಕ್ಷದಲ್ಲಿರಲು ನಾನೇನು ನಾಮರ್ದನೆ' ಎಂದು ಬಯಲು ನಾಟಕದ ಪಾತ್ರದಂತೆ ಆತ್ಮಗೌರವ ಅನ್ನೋ ಆತ್ಮಗೌರವವು ಎದ್ದೆದ್ದು ಕುಣಿಯಲಾರಂಭಿಸೋದು. ಹಂಗಂತ ಏಕ್‌ದಂ ತತ್ವ ಸಿದ್ಧಾಂತಗಳ ಸೆಳೆತಕ್ಕೆ ಸಿಗಲು ಅವರೇನು ಸ್ವಾಭಿಮಾನಿಗಳಲ್ಲವೆ? ಅದಕ್ಕೇ ಮೊದಲು ಶಾಸಕಸ್ಥಾನಕ್ಕೆ ರಾಜೀನಾಮೆ ನೀಡಿ... ನಂತರ.....

ಅರೆರೆ ರಾಜೀನಾಮೆ ನೀಡಿದರಾಗೋಯ್ತಾ? ಅದನ್ನ ಒಪ್ಕೋಬೇಕಲ್ಲ? 'ಬ್ಯಾಡಕನೊ ಮಾರಾಯ ಹಿಂಗೆ ಮಾಡಬ್ಯಾಡ ಕಣೊ. ನಿನ್ ಗೆಲ್ಲಿಸ್ದೋರ ಒಂದ್ಮಾತ ಕೇಳು. ಇಲ್ದಿದ್ರೆ ಅವ್ರುಗೆ ಅವಮಾನ ಮಾಡ್ದಂಗಾಯ್ತದೆ' ಅಂತ ಬುದ್ವಾದ ಹೇಳಾಕಿಲ್ವಾ ಅಂದ್ರೆ..... ಅಲ್ಲಿ ಕುಂತಿ ರೋರೂ ಬೋ ಮರ್ವಾದಸ್ಥರೇಯ. 'ಅದನ್ನೇ ಕೊಡದಕಡೆ ಇದ್ದು ತಾನೆ ಏನು ಮಾಡ್ತೀಯ ಬುಡಪ್ಪ' ಅಂತೇಳಿ ಅಹವಾಲ ಒಪ್ಕೊಂಡು 'ಹಂಗೋ ಮರ್ವಾದೆ ಕೊಡೋ ಕಡೆ ಹೋಗಿ ಮನ್ಸ ಅಂತಾಗು' ಅಂತೇಳಿದ್ರು.

ಈ ತರಕೆ ಈತರ ಕನ್ರಯಾ... ಅದ್ನೇ ರಾಜೀನಾಮೆ ಕೆರ್ದು ಬಿಸಾಕವ್ರೆ ಅಂದ್ರೆ ದರಿದ್ರದ ಜನ ನಂಬಕ್ಕೇ ತಯಾರಿಲ್ಲ. 'ಇದ್ದಿದ್ದಂಗೆ ಆಟೊಂತರ ಸಾಲಾವ ಏಕ್‌ದಂ ಹೆಂಗೆ ತೀರುಸ್ದ?' 'ಆ ಬ್ಯಾಂಕಲಿ ಅಷ್ಟು ಬಿದ್ದೈತಲ್ಲ, ಈ ಬ್ಯಾಂಕಲಿ ಇಷ್ಟದಲ್ಲ, ಅದೆಲ್ಲ ಏಕ್‌ದಂ ಹೆಂಗೆ ಬಂತು?' ಅಂತೆಲ್ಲ ಕೊಸ್ಚನ್ ಮಾಡ್ತಾ ಕುಂತ್ಕತವೆ. 'ವಸಿ ನಿದಾನ ಕನ್ರಯ್ಯಾ ಬ್ಯಾಂಕು ಅಂದ್ರೆ ಏನಂದ್ ಕಂಡಿದೀರಿ. ಈಗ ಮೊದ್ಲಂಗಲ್ಲ, ಆನ್‌ಲೈನು, ಗ್ರೀನ್‌ಲೈಟು ಅಂತ ಏನೇನೋ ಬಂದು ಯಾರ್ದೊ ದುಡ್ಡ ಇನ್ಯಾರ್ದೊ ಹೆಸರಿಗೆ ಜಮಾ ಮಾಡ್ತವೆ' ಅಂದ್ರೂ ಒಪ್ಕೊಲ್ಲರು. 'ಅನ್ಯಾಯದ ದುಡ್ಡ ವಾಪಸ್ಮಾಡ್ಲಿ' ಅಂತಾವೆ. 'ಆಸಾಮಿ ಹುಡುಕೋದು ಅಂದ್ರೆ ಏನನ್ಕಂಡಿ ದೀರಿ. ಅದು ಪುಗಸಟ್ಟೆ ಪುನಗಲ್ಲ ಕನ್ರೊ. ಹುಲ್ಲಿನ ಮೆದೇಲಿ ಸೂಜಿ ಹುಡುಕಂಗೆ ಅದು' ಅಂದ್ರೆ 'ಹಿಂಗಿಂಗಾಗದೆ ಅಂತ ಬರ್ದು ಸರ್ಕಾರಕ್ಕೆ ಜಮಾ ಮಾಡ್ಲಿ' ಅಂತಾವೆ. ಅಲ್ಲ ಸರಕಾರಕ್ಕೇ ಜಮಾ ಮಾಡಿದ್ರೂ ಅದೇನ್ ಮಾಡ್ತದೆ? ಅದೇನು ದುಡ್ಡ ತಿಂದತ್ತಾ? ಜನರಿಗೇ ಖರ್ಚು ಮಾಡ್ತದೆ. ಸರ್ಕಾರಕ್ಕೆ ಕೊಟ್ರೂ ತಿರ್ಗ ನಮ್ಗೇ ಬತ್ತದೆ. ಈ ಸುತ್ತು ಬಳಸು ಯಾಕೆ ಅಂತಾವ ಅವ್ರೇ ಇಟ್ಕಂಡವ್ರೆ ಅಂದ್ರೆ.... ಆಗದಂತೆ!

ಇಂತೋರ ಜೊತೆ ಏನ್ ಸಾಯಾನ ಹೇಳು?

ಸುಮ್‌ಸುಮ್‌ನೆ ಮಾತಾಡ್ತೀರಿ

ಇದೇ ನನಗಾಗಲ್ಲ ಅನ್ನೋದು. ಜನ ಸುಮ್‌ಸುಮ್‌ನೆ ಮಾತಾಡ್ತಾರೆ. ಎಲುಬಿಲ್ಲದ ನಾಲಗೆ. ಹೆಂಗೆ ಅಂದ್ರೆ ಹಂಗೆ ಹೊರಳಿಸ್ತಾರೆ. ಅದ್ಯಾವುದೋ ಇಂಗ್ಲಿಷ್ ನಿಯತಕಾಲಿಕದಲ್ಲಿ ಭ್ರಷ್ಟಾಚಾರದಲ್ಲಿ ಕರ್ನಾಟಕ ದೇಶಕ್ಕೆ ನಂ. 1 ಸ್ಥಾನದಲ್ಲಿದೆ ಅಂತ ಬರ್ದದಂತೆ. ಅದನ್ನೇ ಹಿಡ್ಕಂಡು 'ಅಯ್ಯೋ ಕರ್ನಾಟಕದೋರು ತಲೆ ಎತ್ತದಂಗಾಗದಲ್ಲ' ಎಂದೆಲ್ಲ ನರಳ್ತ ಕೂಗಾಡ್ತಿದಾರೆ. ಅಲ್ಲ ಇದರಲ್ಲಿ ಅವಮಾನವಾಗುವಂತಹದ್ದು ಏನಿದೆ ಅಂತಾನೆ ತಿಳಿವಲ್ದು. ಯಾವುದರಲ್ಲೂ ಫಸ್ಟ್ ಇರ್ಲಿಲ್ಲ, ಇದ್ರಲ್ಲಾದ್ರೂ ಬಂದ್ವಲ್ಲ ಅಂತ ಖುಷಿ ಪಡೋದು ಬಿಟ್ಟು ಹಿಂಗೆ ಅಳು ಮುಂಜಿ ತರ ಮುಖ ಮಾಡೋದು ತರವಲ್ಲ ಬಿಡಿ. ಇದನ್ನ ಕಾರ್ಮೋಡದಲ್ಲಿನ ಬೆಳ್ಳಿಗೆರೆ ತರಹ ಕಾಣಬೇಕು. ಹೇಗೆಂದರೆ....



ನಿಷ್ಠೆ ಬದಲಾವಣೆ ಅರ್ಥಾತ್ ಮಾರಾಟಕ್ಕೆ ಒಡ್ಡಿಕೊಳ್ಳುವ ಕ್ರಿಯೆಗೆ ಬರೋಣ. 1984 ರಲ್ಲಿ ಶಾಸಕರ ಮಾರುಕಟ್ಟೆ ದರ ಎಷ್ಟಿತ್ತು ಅಂದರೆ...... ಈಗಿನ ಶಾಸಕರು ಹಾಗಿರಲಿ, ಶಾಲಾ ಬಾಲಕರೂ ಕೇಳಿದರೆ ಪಕಪಕನೆ ನಗುವಂತಿತ್ತು.... ಅಂದರೆ ಜುಜುಬಿ ಎರಡು ಲಕ್ಷ! ಅಂದಿನ ರಾಮಕೃಷ್ಣ ಹೆಗಡೆ ಸರ್ಕಾರ ಉರುಳಿಸಲು ವಿರೋಧ ಪಕ್ಷದ ಶಾಸಕಾಂಗ ನಾಯಕರಾಗಿದ್ದ ವೀರಪ್ಪ ಮೊಯ್ಲಿಯವರು ಭೈರೇಗೌಡರಿಗೆ ನೀಡಲು ಸಿದ್ಧರಿದ್ದ ಮೊತ್ತ ಅಷ್ಟೆ!

ಈಗಿನ ಖರೀದಿ ಬೆಲೆ ನೋಡಿ.

ಸುರೇಶ್ ಗೌಡ-ಶ್ರೀನಿವಾಸ್ ಜುಗಲ್ ಬಂದಿ ಬಂದಿತ್ತಲ್ಲ ಟಿವಿಲಿ... ಅದರಂತೆ 25 ಕೋಟಿ!

ಅಂದರೆ 1984 ಕ್ಕಿಂತ 1250 ಪಟ್ಟು ಹೆಚ್ಚು!

26 ವರ್ಷಗಳಲ್ಲಿ ಶಾಸಕರ ರೇಟು 1250 ಪಟ್ಟು ಹೆಚ್ಚಿದೆ! ಸ್ವಲ್ಪ ಚೌಕಾಶಿ ನಡೆದು ವ್ಯವಹಾರ ಕುದುರಿದ್ದರೆ ಇನ್ನೂ ಏರುತ್ತಿತ್ತೋ ಏನೋ!

ಇದು ಸಾಧನೆ ಅಲ್ಲವೇನು? ಇದು ಸಾಧ್ಯವಾಗಿರೋದು ನಂ. 1 ಸ್ಥಾನ ಪಡೆಯಲು ಶ್ರಮಿಸಿದ ಫಲದಿಂದ!

ಜನರು ಇದನ್ನು ಅರಿತುಕೊಳ್ಳಬೇಕು. ವೃಥಾ ಆರೋಪ ಮಾಡಬಾರದು.

ಅಸಲಿಯೊ? ನಕಲಿಯೊ?

ಸಿಡಿ ವೀಕ್ಷಿಸಿದರೆ ಶಾಸಕರ ಖರೀದಿ ವ್ಯವಹಾರ ಅನ್ನುವುದು ಸಂತೆಯಲ್ಲಿ ಸೀಗಡಿ, ಕರಿಮೀನಿನ ವ್ಯಾಪಾರ ಇದ್ದ ಹಾಗೆ ಇದೆಯಲ್ಲಾ ಎಂದು ಪ್ರಜ್ಞಾವಂತ ಜನತೆ ಮಮ್ಮಲ ಮರುಗಬೇಕಾಗಿಲ್ಲ, ಯಾಕೆಂದರೆ ಸುರೇಶ್ ಗೌಡ-ಶ್ರೀನಿವಾಸ್ ಜುಗಲ್ ಬಂದಿ ಸಿಡಿ ನಕಲಿಯಂತೆ! ಶ್ರೀನಿವಾಸ್ ಅವರೇನೋ 'ಇಲ್ಲ ಇಲ್ಲ ನಾವು ಅಸಲಿ ಗಿರಾಕಿಗಳು. ನಕಲಿ ಮಾಲ ನಾವು ಬಿಕರಿ ಮಾಡೋದಿಲ್ಲ, ಅದೇನಿದ್ರೂ ಬಿಜೆಪಿ ಬಾಬತ್ತು' ಅಂದಿದ್ದಾರೆ. ಮಾತಿನ ಮಲ್ಲರಾದ ಸುರೇಶ್ ಗೌಡ್ರೂ 'ಜೆಡಿಎಸ್‌ನ ವ್ಯವಹಾರವೇ ನಕಲಿ. ಯಾವ್ದೊ ಮಿಮಿಕ್ರಿ ಗಿರಾಕಿ ಎಳ್ಕಂಬಂದು ಮಾಡವ್ರೆ' ಎಂದು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ. ಸಿಡಿ ನೋಡಿದವರಿಗೆ ಥೇಟ್ ಗೌಡ್ರೆ ಮಾತನಾಡಿದಂತೆ ತೋರುತ್ತೆ, ಆ ಧ್ವನಿ, ಮಾತಿನ ವೈಖರಿ ಎಲ್ಲ ಹಾಗೇ ಇದೆ. ಅಂದಮೇಲೆ ಆತ ಎಂತಹ ಅದ್ಭುತ ಮಿಮಿಕ್ರಿ ಕಲಾವಿದನಿರಬೇಕು! ಇಂತಹ ಪ್ರತಿಭೆ ಪುರಸ್ಕಾರಕ್ಕೆ ಯೋಗ್ಯವೇ ಸರಿ. ಹೇಗಿದ್ದರೂ ನವೆಂಬರ್ ಒಂದು ಹತ್ತಿರ ಬರುತ್ತಿದೆ. ಸನ್ಮಾನ್ಯ ಗೌಡ್ರು ಈ ಕಲಾವಿದನ್ನ ಪತ್ತೆಹಚ್ಚಿ ಅವನಿಗೆ ರಾಜ್ಯೋತ್ಸವ ದಯಪಾಲಿಸುವರೆ ನೋಡಬೇಕು! ಇರಲಿ.

ಸನ್ಮಾನ್ಯ ಯಡ್ಯೂರಪ್ಪನವರು ತಮ್ಮ ಬಿಡು ದೇವಸ್ಥಾನದ ದರ್ಶನಗಳ ನಡುವೆಯೂ ಸಿಡಿ ಚಿಂತನಾಲಹರಿ ಹರಿಸಿರುವುದು ಪ್ರಜ್ಞಾವಂತ ನಾ ಪುಣ್ಯ. ಅವರು ಈ ಸಿಡಿ ಅಸಲಿಯೋ ನಕ ಎಂಬುದನ್ನು ಸಂಶೋಧನೆ ಮುಖಾಂತರ ಪತ್ತೆ ನಿವೃತ್ತ ನ್ಯಾಯಾಧೀಶರ ನೇಮಕ ಮಾಡಲು ನಡೆಸಿದ್ದಾರಂತೆ. ಅದು ಚಿಂತನೆ ಅಷ್ಟೆ ಎಂದು ವ್ಯಂಗ್ಯದ ನಗೆ ಮಾತು ಆಡುವಂತಿಲ್ಲ. ಮಾಡಿ ಮಾಡಿಸಿಯಾರು. ಭಾಜಪ ಚಿಂತನೆಗಳಿಂದ ಪ್ರಭಾ ರುವ ನಿವೃತ್ತ ನ್ಯಾಯಾಧೀಶರ ಬರ ಖಂಡಿತ

ನ್ಯಾಯಾಧೀಶರಿಂದ ಇದು ಆಗದ ಇದಕ್ಕೇನಿದ್ದರೂ ಅನುಭವಿಗಳೇ ಬೇಕು ಎನ್ನು ಇದ್ದಾರೆ. ಇದೂ ನಿಜವಿರಬಹುದು. ಅಂತ ಜನಾರ್ದನ ರೆಡ್ಡಿ ಆಗಬಹುದೆ ಎಂದು ಬಯಸುತ್ತೇನೆ. ಯಾಕೆಂದರೆ ಅವರು ಸಿಡಿ ವ್ಯ ಚತುರ. ತ್ಯಾಜ್ಯವಸ್ತುಗಳಿಗೆ ಕಳಸಪ್ರಾಯವಾಗಿದ್ದ ಸಿಡಿ ಸುಪ್ರೀಂಕೋರ್ಟ್‌ಗೇರಿಸಿದ ಕೀರ್ತಿ ಅವರ ಹೆಸರ ಆಗಬಹುದು ಎಂದಾದಲ್ಲಿ ಅವರೀಗಾಗಲೇ ನೀಡಿದ್ದಾರೆ 'ಇದು ನಕಲಿ ಸಿಡಿಯೇ' ಎಂಬುದ

ಈ ತೀರ್ಪು ಕುರಿತು ಅಪೀಲು ಹೋಗುವಂತಿಲ್ಲ. ಜನಾರ್ದ ರೆಡ್ಡಿ ಅಂದರೆ ಏನು ಎಂಬ ಸಂಪೂರ್ಣ ಮಾಹಿತಿ ಕೊ ಇರುವವರು ಮಾತ್ರ ಇಂತ ದುಸ್ಸಾಹಸಕ್ಕೆ ಕೈಹಾಕುವರು ಇಂತಹ ಅಜ್ಞಾನ ನೀಗಿಸುವ ಸಲುವಾಗಿ ವಿವರ ನೀಡುತ್ತೆ ಅವರ ಮನೆಯಲ್ಲಿ 'ಕಪ್ಪು ಕಾಲುಮುರಿದುಕೊಂಡುಬಿದ್ದ ದಾಸಿ ತರಹ ಸೇವೆಗೆ ಸಿದ್ಧಳಿದ್ದಾಳೆ ಅಂತಷ್ಟೇ ತಿಳಿದಿರುವುದು. ಆದರೆ ಅ ಪ್ರಭಾವೀ ವಲಯ ಇಷ್ಟಕ್ಕೆ ಮಾತ್ರ ಸೀಮಿತಗೊಂಡಿಲ್ಲ. ಹರಿಶ್ಚಂದ್ರ'ನೂ ಅವರ ಮ 'ಕಾಲೊರಸು' ಆಗಿಬಿದ್ದಿದ್ದಾನ ಸತ್ಯದಲ್ಲೇ ಕಾಲೊರಿಸಿಕೊಳ ರೆಡ್ಡಿ ಮಾತು ಅಂದರೆ....

ಈ ಸಿಡಿಯ ವಿಚಾರ ಆಯಿತು. ಅ ರಂಜನ್-ಕುಮಾರಸ್ವಾಮಿ ಸಿಡಿ ಕುರಿತ ಸನ ಅಭಿಪ್ರಾಯವೇನೋ ಎನ್ನುವಿರಾ?

ಸನ್ಮಾನ್ಯರು ಅದನ್ನಿನ್ನೂ ಪರಾಂಬರಿಸಿಲ್ಲ!

ಅಂದಮೇಲೆ ಅದು ಅಸಲ ಅಸಲಿ!

ರೆಡ್ಡಿ ಅವ್ನೆ ಸೀಟ್ ಮಾರಿಬಿಡಿ

ಕಳೆದ ಸಂಚಿಕೆಯಲ್ಲಿನ ಮುಖಪುಟ ವರದಿಗೆ ನನ್ನ ಈ ಪ್ರತಿಕ್ರಿಯೆ:

ಎಕ್ಕ ರಾಜ ರಾಣಿ ಎಡ್ಡಿಯ ಕೈಯೊಳಗೆ
ಹಿಡಿ ಮಣ್ಣು ಜನರ ಬಾಯೊಳಗೆ
ಆಟ ಆಡಬೇಡ್ವೊ ನಮ್ಮ ಜೊತೆ, ಸ್ವಲ್ಪ ತಡಿ
ಕೈ ಮುಗಿವೆ ಮನೆಗೆ ನಡಿ

ಒಳ್ಳೆ ರೇಟು ಸಿಕ್ತು ಅಂದ್ರೆ
ಒಳ್ಳೆ ರೇಟು ಸಿಕ್ತು ಅಂದ್ರೆ
ಲದ್ದಿ ಕೂಡ ಪ್ರಿಯವಾಗುವುದು
ಸತ್ತರೂ ತೊಲಗುವುದಿಲ್ಲ ಬೋಳಿಮಗಂದು
ನಾವು ಓಟು ಹಾಕಬೇಕು ದೇವರನ್ನೇ ನೆಚ್ಚಿಕೊಂಡು

ಒಳ್ಳೆ ಪಾರ್ಟಿ, ಒಳ್ಳೆ ಪಾರ್ಟಿ
ಒಳ್ಳೆ ಪಾರ್ಟಿ ಎಂದುಕೊಂಡು ಎಂದಿನಲಿ
ನೋಡಿದೆವು ಆಪರೇಷನ್ ಕಮಲ ಎಂಬ ಸುಡುಗಾಡನ್ನು
ಕಂತ್ರಿ ಕೆಲಸಗಳನ್ನು ಕಂತ್ರಿಗಳು ಮಾಡಿಕೊಂಡು

ರೇಗ ಬೇಡ, ಅಷ್ಟು ಬೇಗ ರೇಗ ಬೇಡ ಸ್ವಲ್ಪ ತಡಿ
ಸ್ಪೀಕರ್ ಅವ್ನೆ ಕೈ ಎತ್ತಿ ಹಿಡಿ

ಯಾರು ಇಲ್ಲಿ ಅಂದರ್ ಆದ್ರು
ಯಾರು ಇಲ್ಲಿ ಬಾಹರ್ ಆದ್ರು
ಹೇಳುವುದು ಹೇಗೆ ಎಮ್‌ಎಲ್‌ಎಗಳ ಲೆಕ್ಕ ಇಟ್ಟುಕೊಂಡು
ನಾವು ಓಟು ಹಾಕಬೇಕು ತಿಕ ಮುಚ್ಚಿಕೊಂಡು

ರಾಜ್ಯಕ್ಕೇಂತ, ರಾಜ್ಯಕ್ಕೇಂತ ಓಟು ಹಾಕುತ್ತೀವಿ
ಆದರೆ ಜೇಬಿಗೆಂತ, ಜೇಬಿಗೆಂತ
ಅವರು ಆಡುತ್ತಾರೆ
ಹೆದರೋದಿಲ್ಲ ಅವರು ಮಾನ ಹೋದ್ರೂ
ಪಾಪ ಚೆಡ್ಡಿಗಳು ಲಾಡಿಯನ್ನೇ ಕಳಕೊಂಡ್ರು

ಮಾನ ಹೋದ್ರೆ ಹೋಗ್ಲಿ ಬಿಡಿ,
ಮಾನ ಹೋದ್ರೆ ಹೋಗ್ಲಿ ಬಿಡಿ
ರೆಡ್ಡಿ ಅವ್ನೆ ಸೀಟ್ ಮಾರಿ ಬಿಡಿ

- ನಿರಂಜನ್ ಪಟೇಲ್, ಹುಣಸಿನಹಳ್ಳಿ

ಹೊಗಳಿಕೆ ತೆಗಳಿಕೆ

ಕಳೆದ ಸಂಚಿಕೆಯಲ್ಲಿ 'ಮರೆಯಾದ ಆದರ್ಶವಾದಿ ಯುವಕನೊಬ್ಬನ ಸುತ್ತ...' ಓದುತ್ತಾಹೋದಂತೆ ನನಗರಿವಿಲ್ಲದೆ ಕಣ್ಣಾಲಿಗಳು ತುಂಬಿಬಂದವು. ಗಂಟಲು ಕಟ್ಟಿತು. ಕ್ಷಣ ಮಾತು ನಿಲ್ಲಿಸಿ ಮೌನದಲ್ಲಿ ಕುಳಿತುಕೊಂಡೆ. ಏಕೆಂದರೆ ನಾನೂ ಕೂಡ ಈಗ್ಗೆ ಎರಡು ಮೂರು ವರ್ಷಗಳ ಹಿಂದೆ ನನ್ನ ಖಾಸಗಿ ಬದುಕಿನಲ್ಲಿ ಜರುಗಿದ ಬರ್ಬರ ಹಿಂಸೆಯನ್ನು ನಿಮ್ಮ ಮುಂದೆ ಹೇಳಿಕೊಂಡು ಹಗುರಾಗಲು ನಿಮ್ಮನ್ನು ಹುಡುಕಿ ದೂರದ ಬೆಂಗಳೂರಿಗೆ ಬಂದಿದ್ದೆ. ಆಗ ನೀವು ನನ್ನೊಂದಿಗೆ ಆಡಿದ ಕೆಲವು ಸಾಂತ್ವನದ ಮಾತುಗಳು ನನ್ನ ಬದುಕಿನ ದಿಕ್ಕನ್ನೇ ಬದಲಿಸಿ ಬಿಟ್ಟವು.

ನನ್ನೊಂದಿಗೆ ಇನ್ನಾರೂ ಇಲ್ಲ, ನಾನೊಬ್ಬನೆ ಇಲ್ಲಿ ಒಂಟಿ ಎಂದು ಕೈಚೆಲ್ಲಿ ಕೂಡುವ ಪ್ರಸಂಗ ಬಂದಾಗ ನನ್ನಂಥ ಹಾಗೂ ಸಂಗಮೇಶನಂಥ ಅಳುಕು ಮನಸ್ಸಿನವರಿಗೆ ನೆನಪಾಗುವುದು ಲಂಕೇಶ್ ಪತ್ರಿಕೆ. ಈ ಪತ್ರಿಕೆಯ ಲಂಕೇಶ್ ಮೇಷ್ಟ್ರು ಅದ್ಯಾಕೋ ನೊಂದವರೊಂದಿಗೆ ತಮ್ಮ ಬರ ಮೂಲಕ ಭಾವನಾತ್ಮಕ ಸಂಬಂಧಗಳನ್ನು ಹೊಂದಿದ್ದರು. ಬರಹಗಾರಿಕೆಯ ಪ್ರತಿಭೆ ಇದ್ದರೂ ಅದನ್ನು ಎಲ್ಲೂ ತೋರಿಸಿಕೊಳ್ಳುತ್ತಿರಲಿಲ್ಲ, ಬದಲಾಗಿ ಜನಸಾಮ ನೋವುಗಳನ್ನು ತನ್ನ ನೋವುಗಳೆಂದೇ ತಿಳಿದುಕೊಂಡು ಪ್ರತಿಕ್ರಿಯಿಸುವ ಧ ಅವರಲ್ಲಿ ಇತ್ತು. ಹೀಗಾಗಿಯೆ ಕರ್ನಾಟಕದ ಜನಸಾಮಾನ್ಯ 'ಲಂಕೇಶ್ ಪತ್ರಿ ಲಂಕೇಶರನ್ನು ಹಚ್ಚಿಕೊಂಡಿದ್ದರು.

ಲಂಕೇಶ ಪತ್ರಿಕೆಯನ್ನು ಓದುತ್ತಿರುವ ಬಹುತೇಕರಲ್ಲಿ ಅದೇಕೋ ಗೊತ್ತಿಲ್ಲ ಮನಸ್ಸು ನೆಲೆಗೊಂಡಿದೆ. ನ್ಯಾಯನಿಷ್ಠುರಿತನ ಇರುವುದರಿಂದ ಇಂದಿನ ಕಲ ಜಗತ್ತಿನೊಂದಿಗೆ ಹೊಂದಿಕೊಂಡು ಹೋಗುವುದು ಕಷ್ಟವಾಗುತ್ತದೆ. ಹೀಗಾಗಿ ಮನ ವಿಲವಿಲ ಒದ್ದಾಡಿ ಮಾನಸಿಕ ಹಿಂಸೆಯನ್ನು ಅನುಭವಿಸುತ್ತಾರೆ. ಬಹುಶಃ ಹುಬ್ಬ ಸಂಗಮೇಶ ಇಂಥವೇ ದ್ವಂದ್ವಗಳನ್ನು ತುಂಬಿಕೊಂಡು ನಿಮ್ಮನ್ನು ಹು ಬಂದಿರಬಹುದೇನೋ!?

ನೀವು ಈ ಸಂಗಮೇಶನಿಗೆ ಸಿಕ್ಕಿದ್ದರೆ ಆತ ಖಂಡಿತಕ್ಕೂ ಆತ್ಮಹತ್ಯೆಯಂಥ ಹೇಡಿ ಕೈ ಹಾಕುತ್ತಿರಲಿಲ್ಲ, ಶಿವನೊಲಿಸಬಂದ ಪ್ರಸಾದ ಕಾಯವ ಕೆಡಿಸಲಾಗದು ಎಂ ಅದನ್ನು ಸವೆಯಿ ಬಳಸಲು ಖಂಡಿತ ಮುಂದಾಗುತ್ತಿದ್ದ.

ಪತ್ರಿಕೆಯ ಇಂಥ ಸೂಕ್ಷ್ಮ ಮನಸ್ಸುಗಳಿಗೆ ಈ ಪತ್ರದ ಮೂಲಕ ನಾನು ಹೇಳುವು ನಿಮ್ಮ ಮನಸ್ಸಿನೊಂದಿಗೆ ಸಮ್ಮಿಳಿತಗೊಳ್ಳುವ ಸಾಕಷ್ಟು ಜನ ಇಡೀ ರಾಜ್ಯದ ತ ಇದ್ದೇವೆ. ಪತ್ರಿಕೆಯ ಬಳಗ-ಓದುಗರು ಸಾಕಷ್ಟು ಸಂಖ್ಯೆಯಲ್ಲಿ ಇರುವುದರಿಂದ ಒಂಟಿ ಹೇಗಾಗುತ್ತೀರಿ? ಯಾರೇನೆಂದರೂ ಓರಂತಿಪ್ಪುದೆ ಸಮತೆ ಎಂಬಂತೆ ಜೀವನ ಮಾಡಿ. ಬದುಕು ಯಾರ ಮೆಚ್ಚುಗೆಗಾಗಿ ಅಲ್ಲ ಎಂಬುದನ್ನು ಮೊ ತಿಳಿದುಕೊಳ್ಳೋಣ. ಕೊಟ್ಟ ಕುದುರೆಯ ನೇರದವ ವೀರನೂ ಅಲ್ಲ, ಧೀರರೂ ಎಂದು ಶರಣರು ಹೇಳಿದಂತೆ ಬಾಳಿ ಬದುಕೋಣ. ಇನ್ನೊಬ್ಬರ ಬದುಕಿಗೆ ನೆಲೆಯಾಗು

- ಹೆಸರು ಬೇಡ, 'ಲಂಕೇಶ್' ಓ

ಸಂಗಮೇಶನ ಬಗ್ಗೆ ಓದಿ ತುಂಬಾ ಬೇಸರವಾಯಿತು. ನೀವು ಆತನ ಬರೆದದ್ದು ಮನಮುಟ್ಟುವಂತಿತ್ತು. ಈ ಯುವಕರು ಯಾಕೆ ಹೀಗೆ ಆತ್ಮಹತ್ಯೆಗೆ ಗುತ್ತಾರೆ ಎಂದು ಅರ್ಥವಾಗುವುದಿಲ್ಲ. ಆದರೆ ನಮ್ಮವನೊಬ್ಬನನ್ನು ಕಳೆದು ಕೊಂ ಅನ್ನಿಸಿತು ಆತನ ಸಾವಿನ ಬಗ್ಗೆ ಓದಿದಾಗ. ಆತನ ತಂದೆ ಮತ್ತು ತಾಯಿಗೆ ಚಿಂತಿಸುತ್ತಿದ್ದೇನೆ.

- ಶಶಿಧರ ಹಮ್ಮ್ಯಾ ದಿ. ಕುಂದ

...ಜಾ ಗಾಂಧಿ ಗಾಯಬ್

...ಾರು ಮಳೆ' ಸುಂದರಿ ಪೂಜಾ ಗಾಂಧಿ ...ದ್ದಾಳೆ

...ರ್ಷದ ಹಿಂದೆ ಅನಿರೀಕ್ಷಿತವಾಗಿ ಕನ್ನಡ ...ಗಂತದಲ್ಲಿ ಉದಯಿಸಿದ ತಾರೆ ಪೂಜಾ ...ಗಾರು ಮಳೆ' ಚಿತ್ರ ಹೇಗೆ ನಾಯಕ ನಟ ... ನಿರ್ದೇಶಕ ಯೋಗರಾಜ್ ಭಟ್ಟರ ಅದೃಷ್ಟದ ...ಸಿತೋ ಅದೇ ರೀತಿ ಪಂಜಾಬಿನಿಂದ ಬಂದ ...ಜಾ ಗಾಂಧಿಗೂ ಅದೃಷ್ಟ ಖುಲಾಯಿಸಿತು. ...ಮುಂಗಾರು ಮಳೆ' ಚಿತ್ರ ಬಿಡುಗಡೆಯಾದಾಗ ... ಬಗ್ಗೆ ಗಾಂಧಿನಗರದ ಜನರಿಗೆ ಒಂದಿಷ್ಟು ... ಆಕೆ ಕುಳ್ಳಿ ಎಂದರು ಕೆಲವರು. ಆಕೆಯದ್ದು ...' ಎಂದು ಕೆಲವರು ಹೀಯಾಳಿಸಿದರು. ... 'ಆಕೆಗೆ ನಟನೆ ಅಷ್ಟೇನು ಬರೋಲ್ಲ' ...ಷ್ಟೇ ಏಕೆ, 'ಮುಂಗಾರು ಮಳೆ' ಚಿತ್ರದಲ್ಲಿ ...ಯ ಬದಲು ನಾಯಕಿಯಾಗಿ ರಮ್ಯಾ ...ಚಿತ್ರದ ಖದರೇ ಬೇರೆಯಾಗುತ್ತಿತ್ತು ಎಂದು ...ಷ್ಯವನ್ನು ನುಡಿದಿದ್ದರು. ಇವೆಲ್ಲ ಟೀಕೆಗಳನ್ನು ...ಪಂಜಾಬಿ ಹುಡುಗಿ ಒಂದೇ ಚಿತ್ರಕ್ಕೆ ವಾಪಸ್ ...ಎಂದು ಎಲ್ಲರೂ ಭಾವಿಸಿದ್ದರು.

...ಾವಾಗ ಬಾಕ್ಸ್ ಆಫೀಸ್‌ನಲ್ಲಿ 'ಮುಂಗಾರು ... ಆಯಿತೋ ಆಗ ಪೂಜಾಳನ್ನು ಟೀಕೆ ... ಗಾಂಧಿನಗರದ ಜನ ಆಕೆಯ ಕಾಲ್‌ಶೀಟ್ ...ಸುತ್ತ ಗಿರಕಿ ಹೊಡೆಯಲಾರಂಭಿಸಿದರು. ...ದ್ದೆತ್ತಿನ ಬಾಲ ಹಿಡಿಯುವುದು ನಮ್ಮವರ ...ತಾನೆ?

...ಪೂಜಾ ಗಾಂಧಿ ಲೈಮ್‌ಲೈಟಿಗೆ ಬಂದಿದ್ದೇ ...ಮಾಲಾಶ್ರೀಯನ್ನು ನೆನಪಿಸುವ ರೀತಿಯಲ್ಲಿ ...ಳೋ ಎಂದೆನಿಸಲು ಆರಂಭವಾಯಿತು. ...ಧಿನಗರದ ಬಹುತೇಕ ಎಲ್ಲಾ ನಿರ್ಮಾಪಕರು ...ಕರು 'ಪೂಜಾ ಮಂತ್ರ' ಪಠಿಸಲು ಆರಂಭಿಸಿ...

...ಯಶಸ್ಸು ಮತ್ತು ನಾಗಾಲೋಟಕ್ಕೆ ಹಲವಾರು ...ದ್ದವು. ಮೊದಲನೆಯದಾಗಿ, ಈ ಪಂಜಾಬಿ ...ದಲ ದಿನದಿಂದಲೇ ತೊದಲು ಕನ್ನಡ ನುಡಿ ...ಡುತ್ತಾ ಕನ್ನಡಿಗರ ಮೆಚ್ಚುಗೆಗೆ ಪಾತ್ರಳಾದಳು. ...ಮ್ಮ ಕನ್ನಡದ ಹುಡುಗಿಯರ ತರಹ ...ರ ತೋರಿಸದೇ ನಿರ್ಮಾಪಕ ಕೊಟ್ಟಿದ್ದನ್ನು ...ಯ ಸುತ್ತ ನಿರ್ಮಾಪಕರು ಮುತ್ತಿಗೆ ಹಾಕಲು ...ು. ಆಕೆಯ ಮತ್ತೊಂದು ವಿಶೇಷತೆಯೆಂದರೆ ...ನಟರುಗಳೊಂದಿಗೆ ಮಾತ್ರವಲ್ಲ, ಉದ್ಯಮಕ್ಕೆ ...ಲಿಟ್ಟ ಚಿಂಟು ಪಿಂಟು ಹೀರೋಗಳ ಜೊತೆ ...ದೆ ಗರ್ವವಿಲ್ಲದೆ ಮರ ಸುತ್ತಲು ಒಪ್ಪಿಕೊಳ್ಳು...

...ೋಡುತ್ತಿದ್ದಂತೆ ಪೂಜಾ ಗಾಂಧಿ ಕನ್ನಡದ ...ಯಕಿಯಾಗಿದ್ದ ರಮ್ಯಾಳನ್ನು ಕೂಡಾ ಓವರ್‌ಟೇಕ್ ... ಬೇಡಿಕೆಯ ನಟಿ ಎನ್ನಿಸಲಾರಂಭಿಸಿದಳು.

ಅಷ್ಟೇ ಅಲ್ಲ, ಆಕೆ ಜನಪ್ರಿಯ ನಾಯಕಿಯಾಗಿದ್ದರೂ ಪುನೀತ್ ರಾಜ್‌ಕುಮಾರ್ ನಟಿಸಿದ 'ಮಿಲನ' ಚಿತ್ರದಲ್ಲಿ ಅತಿಥಿ ನಟಿಯಾಗಿ ಕಾಣಿಸಿಕೊಂಡು ತನ್ನ ಪ್ರತಿಸ್ಪರ್ಧಿಗಳು ಬೆಚ್ಚಿಬೀಳುವಂತೆ ಮಾಡಿದಳು. ಆಕೆಯ ಅದೃಷ್ಟ ಹೇಗಿತ್ತೆಂದರೆ ಆ ಚಿತ್ರದಲ್ಲಿ ಪುನೀತ್ ಜೊತೆ ಆಕೆ ನರ್ತಿಸಿದ್ದ "ನಿನ್ನಿಂದಲೇ ನಿನ್ನಿಂದಲೇ ಕನಸೊಂದು ಶುರುವಾಗಿದೇ" ಹಾಡಂತೂ ಕರ್ನಾಟಕದ ಮನೆ ಮಾತಾಯಿತು. 'ಮುಂಗಾರು ಮಳೆ' ಚಿತ್ರತಂದಷ್ಟೇ ಜನಪ್ರಿಯತೆಯನ್ನು 'ಮಿಲನ'ದ ಈ ಹಾಡೊಂದೇ ಆಕೆಗೆ ತಂದು ಕೊಟ್ಟಿತು ಎಂದರೆ ತಪ್ಪಾಗಲಾರದು.

ಹೀಗೆ ಪಂಜಾಬಿನ ಈ ಹುಡುಗಿ ಕರ್ನಾಟಕದ ಕಲಾಭಿಮಾನಿಗಳ ಮೆಚ್ಚಿನ ತಾರೆಯಾಗಿ ಬೆಳೆದುನಿಂತಳು. ಆರಂಭದಲ್ಲಿ ಗಣೇಶ್ ಜೊತೆ ನಾಯಕಿಯಾಗಿ ಕಾಣಿಸಿಕೊಂಡ ಪೂಜಾ ಗಾಂಧಿ ಆನಂತರ ಉಪೇಂದ್ರ, ಜಗ್ಗೇಶ್, ಪುನೀತ್ ರಾಜ್‌ಕುಮಾರ್, ಶ್ರೀನಗರ ಕಿಟ್ಟಿ... ಹೀಗೆ ಬಹುತೇಕ ಎಲ್ಲಾ ಹೀರೋಗಳ ಜೊತೆ ನಟಿಸಿ ಮನ ಗೆದ್ದಳು. ಇದೇ ಸಂದರ್ಭದಲ್ಲಿ ಸುನೀಲ್ ಸಮೇತ ಅನೇಕ ಅಪರಿಚಿತ ಮತ್ತು ಉದಯೋನ್ಮುಖ ನಾಯಕರ ಜೊತೆ ಕೂಡಾ ಆಕೆ ನಟಿಸಿದಳು.



ಬಹುಶಃ ಹೊಸಬರೊಂದಿಗೆ ನಟಿಸುವ ಪೂಜಾ ಗಾಂಧಿಯ ನಿರ್ಣಯವೇ ಆಕೆಯ ವೃತ್ತಿಜೀವನಕ್ಕೆ ಮುಳುವಾಯಿತು ಎಂದರೂ ತಪ್ಪಾಗಲಾರದು. ಏಕೆಂದರೆ ಹೊಸ ಹೀರೋಗಳ ಜೊತೆ ಪೂಜಾ ಗಾಂಧಿ ನಟಿಸಿದ ಚಿತ್ರಗಳೆಲ್ಲವೂ ಸಾಲುಸಾಲಾಗಿ ನೆಲಕಚ್ಚಿದವು. ಆ ಮೂಲಕ ಕನ್ನಡ ಚಿತ್ರರಂಗದ ದಿಗಂತದಲ್ಲಿ ಕಾಣಿಸಿಕೊಂಡ ಪೂಜಾ ಗಾಂಧಿ ಎಂಬ ನಕ್ಷತ್ರ ನೆಲಕ್ಕುರುಳಿತು.

ಪೂಜಾ ಗಾಂಧಿ ಕನ್ನಡದ ನಾಯಕ ನಟರಿಗೆ ಅಥವಾ ಪ್ರೇಕ್ಷಕರಿಗೆ ಇಷ್ಟವಾಗುತ್ತಿದ್ದಳೋ ಇಲ್ಲವೋ ಆದರೆ ನಿರ್ಮಾಪಕರ ಪಾಲಿಗಂತೂ ಆಕೆ ಅಚ್ಚುಮೆಚ್ಚಿನ ನಟಿಯಾಗಿದ್ದಳು. ಹೀಗಾಗಿ ತನ್ನ ಕಾಲ್‌ಶೀಟ್ ಕೇಳಿಕೊಂಡು ಬಂದ ಯಾವುದೇ ನಿರ್ಮಾಪಕರಿಗೆ ಆಕೆ "ನೋ" ಎಂದಿದ್ದೇ ಇಲ್ಲ, ಹಾಗೆ ನೋ ಎನ್ನಲು ಆಕೆ ಕಲಿಯದೇ ಇದ್ದಿದ್ದರಿಂದಲೂ ಆಕೆಯ ಹಲವಾರು ಚಿತ್ರಗಳು ಬಾಕ್ಸ್ ಆಫೀಸಿನಲ್ಲಿ ಮುಗ್ಗರಿಸಿದವು.

ಬಹುಶಃ ತನ್ನ ವೃತ್ತಿಜೀವನದ ಅಧ್ಯಾಯ ಮುಗಿಯುತ್ತಾ ಬಂದಿದೆ ಎಂದು ಆಕೆಗೆ ಅನಿಸಿತೋ ಏನೋ? ಆ ಕಾರಣಕ್ಕೆ ಆಕೆ ಕಾಲೇಜು ಓದುತ್ತಿದ್ದ ತನ್ನ ತಂಗಿ ರಾಧಿಕಾ ಗಾಂಧಿಯನ್ನು ಚಿತ್ರರಂಗಕ್ಕೆ ಪರಿಚಯಿಸಿದಳು. ಮಾಲಾಶ್ರೀ ಕೂಡಾ ತನ್ನ ವೃತ್ತಿ ಜೀವನ ಇಳಿಮುಖವಾಗುತ್ತಿದ್ದ ಸಂದರ್ಭದಲ್ಲಿ ಇದೇ ರೀತಿ ತನ್ನ ತಂಗಿ ಭಾರತಿಯನ್ನು ಚಿತ್ರರಂಗಕ್ಕೆ ಕರೆದುಕೊಂಡು ಬಂದಿದ್ದರು. ಅಂದು ಮಾಲಾಶ್ರೀಗೆ ಏನಾಯಿತೋ ಇಂದು ಪೂಜಾಗಾಂಧಿಗೂ ಅದೇ ಆಯಿತು. ಏಕೆಂದರೆ ರಾಧಿಕಾಳ ಆಗಮನದಿಂದ ಪೂಜಾಗೇನು ಲಾಭವಾಗಲಿಲ್ಲ, ಅಥವಾ ಪೂಜಾಳ ತಾರಾ ವರ್ಚಸ್ಸು ಆಕೆಯ ತಂಗಿ ರಾಧಿಕಾಳಿಗೂ ಸಹಾಯಕವಾಗಲಿಲ್ಲ. ಹೀಗಾಗಿ "ಗಾಂಧಿ ಸಹೋದರಿಯರು" ನಿಧಾನವಾಗಿ ಗಾಂಧಿನಗರದಲ್ಲಿ ಮಾಯ ವಾಗ ತೊಡಗಿದರು.

ಸದ್ಯಕ್ಕೆ ಪೂಜಾ ಗಾಂಧಿ ಕಸ್ತೂರಿ ಚಾನಲ್‌ನವರು ನಿರ್ಮಿಸುತ್ತಿರುವ ಚಿತ್ರಕ್ಕಾಗಿ ನಾಯಕನ ತಲಾಶ್ ನಡೆಸುವ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಾರೆ. ಅದರ ಹೊರತಾಗಿ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಏಡ್ಸ್ ಜಾಗೃತಿಯ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಉಳಿದಂತೆ ಒಂದು ಕಡೆ ಚಪ್ಪಲಿಗೆ, ಮತ್ತೊಂದು ಕಡೆ ತುಪ್ಪಕ್ಕೆ ರೂಪದರ್ಶಿಯಾಗಿ ಟಿವಿ ಜಾಹೀರಾತುಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.


ಕನ್ನಡ ಚಿತ್ರರಂಗದಲ್ಲಿ ಈಗ ಯುವ ನಾಯಕಿಯರ ದಂಡೆ ತುಂಬಿಹೋಗಿದೆ. ಬೊಗಸೆ ಕಣ್ಣುಗಳ ಐಂದ್ರಿತಾ ರೈ, ರಾಧಿಕಾ ಪಂಡಿತ್, ಹರಿಪ್ರಿಯಾ, ಶರ್ಮಿಳಾ ಮಾಂಡ್ರೆ ಮೊದಲಾದ ಯುವ ನಾಯಕಿಯರ ಆಗಮನದ ನಂತರ ಪೂಜಾ ಗಾಂಧಿ ಅವರಿಗೆ ಹೋಲಿಸಿದರೆ ವಯಸ್ಸಾದವರಂತೆ ಕಾಣಿಸುತ್ತಿದ್ದಾರೆ. ಅದರ ಜೊತೆಗೆ ಪೂಜಾ ಅಡ್ಡಾದಿಡ್ಡಿಯಾಗಿ ದಪ್ಪವಾಗಿರುವುದೂ ಆಕೆಯ ವೃತ್ತಿ ಜೀವನದ ಬೆಳವಣಿಗೆಗೆ ಅಡ್ಡಿಯಾಗಿದೆ.

ಆದರೆ ಪೂಜಾ ನಾಲ್ಕು ವರ್ಷಗಳ ತನ್ನ ರಾಜ್ಯಭಾರದಲ್ಲಿ ಕರ್ನಾಟಕದ ಜನತೆಯ ಮನಸ್ಸನ್ನು ಗೆದ್ದಿದ್ದಾಳೆ ಮಾತ್ರವಲ್ಲ ಗಾಂಧಿನಗರದ ಕಠೋರ ಜನರ ಮನಸ್ಸನ್ನೂ ಗೆದ್ದಿರುವುದು ವಿಶೇಷ. ಈಗ ಸದ್ಯಕ್ಕೆ ಈ ಪಂಜಾಬಿ ಹುಡುಗಿ ಅಚ್ಚ ಕನ್ನಡಿಗಳಂತೆ ರಾಗಿ ಮುದ್ದೆ ಊಟವನ್ನು ಮಾಡುತ್ತಿದ್ದಾಳೆ. ಕನ್ನಡಕ್ಕೆ ಬಂದ ಬಹುತೇಕ ನಾಯಕಿಯರು, ಇಲ್ಲಿಯ ನಾಯಕರು ಅಥವಾ ನಿರ್ಮಾಪಕರನ್ನು ಮದುವೆಯಾಗಿ ಕನ್ನಡದ ಸೊಸೆಯಾದ ದೊಡ್ಡ ಪಟ್ಟಿಯನ್ನು ನೋಡಿದರೆ ಪೂಜಾ ಗಾಂಧಿಯು ಕೂಡಾ ಕರ್ನಾಟಕದ ಸೊಸೆಯಾಗಿ ಇಲ್ಲಿಯೇ ಇದ್ದರೂ ಆಶ್ಚರ್ಯಪಡುವಂತಿಲ್ಲ.

• ಸದಾಶಿವ ಶೆಣೈ
shenoylankesh@gmail.com

...ರಣನಿಗೆ ತಪರಾಕಿ...

...ವರೆಗೂ ಕನ್ನಡ ಚಿತ್ರರಂಗದ ಹೀರೋಗಳ ...ೀರೋಯಿನ್‌ಗಳ ನಖರಾಗಳು, ನಿರ್ದೇಶಕರ ...ನಿರ್ಮಾಪಕರ ಅಧ್ವಾನಗಳಷ್ಟೇ ಸುದ್ದಿಯಾಗು...ಗ ನಟಿ ಶೃತಿಯ ಅಣ್ಣಾ ಕಂ ಕಾಮಿಡಿ ನಟ ... ಸಣ್ಣ ರಾದ್ಧಾಂತ ಮಾಡಿ ...ಸುದ್ದಿ ಬಂದಿದೆ.



...ಾಬು ತಮ್ಮ ...ಮತ್ತೊಂದು ಮದುವೆನಾ' ...ಗೆ ಲೀಡ್ ಪಾತ್ರ ...ಸಾಮಾನ್ಯವಾಗಿ ...ಾಮಿಡಿ ನಟರು ಒಂದು ...ಸಂಭಾವನೆ ಎಂಬುದರ ...ದ ಲೆಕ್ಕದಲ್ಲಿ ಪಗಾರ ...ಾಗೆ ಶರಣ್ ... ದಿನಕ್ಕೆ ಒಂದು ಲಕ್ಷ ...ಭಾವನೆಯನ್ನು ಡಿಮ್ಯಾಂಡ್ ...ಅದರೆ ಕಡೆಗೆ ಚೌಕಾಶಿ ಮಾಡಿ ...ತ್ತು ಸಾವಿರಕ್ಕೆ ಒಪ್ಪಿಕೊಳ್ಳುತ್ತಾನೆ.

...ನು ಮದುವೆನಾ' ಚಿತ್ರಕ್ಕೆ ಶರಣ್‌ನಿಂದ ...ಳ ಕಾಲ್‌ಶೀಟ್ ಪಡೆಯಲಾಗಿತ್ತು, ಎಂದಿನಂತೆ ...ಂಭತ್ತು ದಿನಗಳ ನಟನೆಗೆ ಶರಣ್ ಒಂಭತ್ತು ಲಕ್ಷ ಕೇಳಿದ್ದ. ಕಡೆಗೆ ಏಳೂವರೆ ಲಕ್ಷಕ್ಕೆ ನಿರ್ಮಾಪಕರೊಂದಿಗೆ ಒಪ್ಪಂದ ಮಾಡಿಕೊಂಡಿದ್ದ. ಆದರೆ ಚಿತ್ರೀಕರಣದ ಆರಂಭದಲ್ಲೇ ಶರಣ್ "ನನ್ನ ಪಾಲಿನ ಎಲ್ಲಾ ದುಡ್ಡು ಕೊಟ್ಟು ಬಿಡಿ. ನನಗೆ ತುಂಬಾ ಹಣದ ತೊಂದರೆ ಇದೆ. ನನ್ನ ಮನೆಯ ರಿಜಿಸ್ಟ್ರೇಷನ್ ಬೇರೆ ಮಾಡಿಸಬೇಕು" ಎಂದು ನಿರ್ಮಾಪಕ ಉಮೇಶ್ ಬಣಕಾರ್‌ರನ್ನು ವಿನಂತಿಸಿಕೊಂಡಿದ್ದ. ಯಾವತ್ತಿದ್ದರೂ ಕೊಡಲೇ ಬೇಕಲ್ಲ ಎಂದು ಬಣಕಾರ್ ಐದು ಲಕ್ಷವನ್ನು ಕ್ಯಾಷ್ ರೂಪದಲ್ಲೂ ಮಿಕ್ಕ ಎರಡೂವರೆ ಲಕ್ಷವನ್ನು ಚೆಕ್ ಮೂಲಕ ಕೊಟ್ಟಿದ್ದರು. ಆದರೆ ಚೆಕ್ ಮೂಲಕ ಕೊಟ್ಟಿದ್ದ ಎರಡೂವರೆ ಲಕ್ಷ ರೂಪಾಯಿಗಳ ಮೇಲೆ ಬ್ಯಾಂಕ್‌ನವರು ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಟಿಡಿಎಸ್ ಎಂದು ಕಟ್ ಮಾಡಿದರು. ಆ ಹಣ ಆಡಿಟ್ ಆದ ನಂತರವೇ ಟಿಡಿಎಸ್ ಸರ್ಟಿಫಿಕೇಟ್ ಬಂದು, ಐಟಿ ಡಿಪಾರ್ಟ್‌ಮೆಂಟಿನಿಂದ ಆ ಹಣ ವಾಪಸ್ ಬರುತ್ತದೆ. ಆದರೆ ಇದಕ್ಕೆಲ್ಲಾ ಕಾಯದ ಶರಣ್ ಇದ್ದಕ್ಕಿದ್ದ ಹಾಗೆ "ನನಗೆ ಈಗಲೇ ಟಿಡಿಎಸ್ ಸರ್ಟಿಫಿಕೇಟ್ ಕೊಡಿ ಅಥವಾ ಇಪ್ಪತ್ತೈದು ಸಾವಿರ ರೂಪಾಯಿ ಕ್ಯಾಷ್ ಕೊಡಿ" ಎಂದು ಡಿಮ್ಯಾಂಡ್ ಮಾಡಿದ್ದಾನೆ. ದುಡ್ಡನ್ನಷ್ಟೇ ಕೇಳಿದ್ದಿದ್ದರೆ, ಏಳೂ ಕಾಲು ಲಕ್ಷ ರೂಪಾಯಿ ಸಂಭಾವನೆ ಕೊಟ್ಟ ನಿರ್ಮಾಪಕನಿಗೆ ಇಪ್ಪತ್ತೈದು ಸಾವಿರಗಳ ಮೊತ್ತವನ್ನು ಶರಣ್ ಕೈಗೆ ತುರುಕುವುದರಲ್ಲಿ ತಕರಾರೇನೂ ಇರಲಿಲ್ಲ. ಆದರೆ ಅನಂತ್ ನಾಗ್, ತಾರಾ, ಚಿತ್ರದ ನಾಯಕ ನವೀನ್‌ಕೃಷ್ಣ ಸೇರಿದಂತೆ ಪ್ರತಿಯೊಬ್ಬರಿಗೂ ಟಿಡಿಎಸ್ ಡಿಡೆಕ್ಟ್ ಆಗಿದೆ. ಆದರೂ ಅವರೆಲ್ಲರೂ ಯಾವುದೇ ತಕರಾರಿಲ್ಲದೆ ತಂತಮ್ಮ ಪಾಲಿನ ಡಬ್ಬಿಂಗ್ ಮಾಡಿಹೋಗಿದ್ದಾರೆ.



ಆದರೆ ಶರಣ್ ಹಾಗೆ ಮಾಡದೆ ರಾದ್ಧಾಂತ ಮಾಡಿದ್ದಾನೆ. ಮೊನ್ನೆ ದಿನ ಶರಣ್ ಪಾಲಿನ ಡಬ್ಬಿಂಗ್‌ಗಾಗಿ ಕರಿಸುಬ್ಬು ಅವರ ಬಾಲಾಜಿ ಸ್ಟುಡಿಯೋವನ್ನು ಬುಕ್ ಮಾಡಲಾಗಿತ್ತು, ಅಂದು ಶರಣ್ ಮೊಬೈಲ್‌ಗೆ ಫೋನು ಮಾಡಿದರೆ 'ಕರೆ ಮಾಡಿದ ಚಂದಾದಾರರು ನಿಮ್ಮ ಕರೆಯನ್ನು ಸ್ವೀಕರಿಸುತ್ತಿಲ್ಲ' ಎಂದು ಉತ್ತರ ಬಂದಿದೆ. ಕಡೆಗೆ ಶರಣ್ ಪತ್ನಿ ಕಾಲ್ ರಿಸೀವ್ ಮಾಡಿ "ಅವ್ರು ಹೊರಗಡೆ ಹೋಗಿದ್ದಾರೆ. ಹೋಗೋಕೆ ಮುಂಚೆ ಮೊಬೈಲನ್ನು ಟಾಯ್ಲೆಟ್ಟಲ್ಲಿ ಬಿಟ್ಟುಹೋಗ್ಬಿಟ್ಟಿದಾರೆ" ಎಂದಿದ್ದಾರೆ. ಅದನ್ನು ಕೇಳಿ ನಿರ್ಮಾಪಕ ಬಣಕಾರ್ ಕುದ್ದುಹೋಗಿದ್ದಾರೆ. ತಕ್ಷಣ ನಾಗರಬಾವಿ ಹೆಲ್ತ್ ಲೇಔಟ್‌ನಲ್ಲಿರುವ ಶರಣನ ಮನೆಗೆ ತಮ್ಮವರನ್ನು ಕಳಿಸಿ, ಶ್ರೀಮಾನ್ ಶರಣರನ್ನು ಎತ್ತಾಕಿಕೊಂಡು ಬಂದು, ಮಂಗಳಾರತಿ ಎತ್ತಿ ಆತನಿಂದ ಡಬ್ಬಿಂಗ್ ಮಾಡಿಸಿದ್ದಾರೆ.

ದುಡ್ಡಿನ ವಿಚಾರದಲ್ಲಿ ಶರಣ್ ಸಿಕ್ಕಾಪಟ್ಟೆ ನಖರಾ ಮಾಡುತ್ತಾನೆ ಎಂಬುದು ಬಹುತೇಕ ನಿರ್ಮಾಪಕರ ಆರೋಪ. ಮೊದಲೇ ಬುಡ ಕಿತ್ತುಕೊಳ್ಳುತ್ತಿರುವ ಚಿತ್ರರಂಗದಲ್ಲಿ, ಧನದಾಹಿ ಹೀರೋಗಳಂತೆ ಪೋಷಕನಟರೂ ಕಾಸಿಗಾಗಿ ಎದೆ ಮೇಲೆ ಕೂತರೆ ನಿರ್ಮಾಪಕರ ಪಾಡು ಏನಾಗಬೇಡ? ●

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/-

ಎಂದಿರನ್‌ನನ್ನು ಬಗ್ಗುಬಡಿದ ಜಾಕಿ!

ಅಬ್ಬಾ.. ಇದು ನಿಜಕ್ಕೂ ಪವರ್‌ಸ್ಟಾರ್‌ನ ಒರಿಜಿನಲ್ ಪವರ್...!

ಸೂಪರ್‌ಸ್ಟಾರ್ ರಜನೀಕಾಂತ್‌ರ 'ಎಂದಿರನ್' ಬಾಕ್ಸಾಫೀಸಿನಲ್ಲಿ ಖಂಡಿತವಾಗಿಯೂ ದುಡ್ಡು ದೋಚುತ್ತಿದೆ ಎಂಬ ಭಯಕ್ಕೆ ಬಿದ್ದು ದಕ್ಷಿಣ ಭಾರತದ ದೊಡ್ಡ ನಿರ್ಮಾಪಕರು ಮತ್ತು ಡೈರೆಕ್ಟರುಗಳು ಕೋಟ್ಯಂತರ ರೂಪಾಯಿ ಬಜೆಟ್‌ನಲ್ಲಿ ನಿರ್ಮಿಸಿದ್ದ ತಮ್ಮ ಚಿತ್ರಗಳನ್ನು ತೆರೆಗೆ ತರಲು ಹೆದರಿ ಸೈಲೆಂಟಾಗಿ ಕುಂತಿದ್ದರು.

ಕನ್ನಡದಲ್ಲೂ ಹಲವಾರು ಸಿನಿಮಾಗಳು 'ಎಂದಿರನ್' ಜೊತೆ ಪೈಪೋಟಿಗೆ ನಿಲ್ಲುವುದು ಬೇಡ ಎಂದು ತೆಪ್ಪಗಿದ್ದವು. ಆದರೆ 'ಎಂದಿರನ್' ಬಿಡುಗಡೆಯಾದ ಒಂದೇ ವಾರಕ್ಕೆ ತೆರೆಗೆ ಬಂದು, ಇನ್ನೂರು ಕೋಟಿ 'ಎಂದಿರನ್' ಸಿನಿಮಾದ ಮುಂದೆ ಎದೆಯೊಡ್ಡಿ ನಿಂತಿದ್ದು ನಾಲ್ಕು ಕೋಟಿ ಕಿಮ್ಮತ್ತಿನ ಪುನೀತ್ ರಾಜ್‌ಕುಮಾರ್ ನಟಿಸಿರುವ 'ಜಾಕಿ' ಮಾತ್ರ.

'ಎಂದಿರನ್'ನ ಕರ್ನಾಟಕದ ಹಂಚಿಕೆಯನ್ನು 'ವಾರಸ್ದಾರ' ಚಿತ್ರದ ನಿರ್ದೇಶಕ ಗುರುದೇಶಪಾಂಡೆ ಮಧ್ಯಸ್ಥಿಕೆ ವಹಿಸಿ ತಮ್ಮ ಸ್ನೇಹಿತರಾದ ಮುನಿರಾಜು, ಶ್ರೀಕಾಂತ್ ಮತ್ತು ಮೋಹನ್‌ರಿಗೆ ಬರೋಬ್ಬರಿ ಎಂಟೂವರೆ ಕೋಟಿ ರೂಪಾಯಿಗಳಿಗೆ ನಿರ್ಮಾಪಕ ಸನ್ ಪಿಕ್ಚರ್ಸ್‌ನವರಿಂದ ಕೊಡಿಸಿಕೊಟ್ಟಿದ್ದರು. ಎರಡೂವರೆ ವರ್ಷಗಳಷ್ಟು ಕಾಲ ನಿರ್ಮಾಣಗೊಂಡಿದ್ದ 'ಎಂದಿರನ್' ಹುಟ್ಟುಹಾಕಿದ್ದ ನಿರೀಕ್ಷೆ, ರಜನಿಯ ಕ್ರೇಜು- ಎಲ್ಲಾ ಸೇರಿದರೆ ಎಷ್ಟೇ ಬಂಡವಾಳ ಹೂಡಿದರೂ ಅದು ವಾಪಾಸು ಬರುತ್ತದೆ ಮತ್ತು ಒಂದೇ ಏಟಿಗೆ ಕೋಟಿಗಟ್ಟಲೆ ಲಾಭವನ್ನು ಬಾಚಿ ಬಹುದು ಎಂಬುದು ಈ ವಿತರಕರ ನಂಬಿಕೆಯಾಗಿತ್ತು.

ಆದರೆ ಅವರ ಈ ನಂಬಿಕೆ ಮತ್ತು ನಿರೀಕ್ಷೆಗಳು ಈ ಬಾರಿ ಕೈ ಕೊಟ್ಟಿವೆ. ರಜನಿಕಾಂತ್ ಇದ್ದ ಮಾತ್ರಕ್ಕೆ ಜನ ಸಿನಿಮಾ ನೋಡಿಬಿಡುತ್ತಾರೆ ಎಂಬ ಚಿತ್ರರಂಗದವರ ಕಲ್ಪನೆ ಕರ್ನಾಟಕದ ಮಟ್ಟಿಗೆ ಅಕ್ಷರಶಃ ಮಣ್ಣುಮುಕ್ಕಿದೆ. 'ಎಂದಿರನ್' ಬಿಡುಗಡೆಯಾಗಿ ನಾಲ್ಕು ವಾರಗಳಾಗಿದ್ದರೂ ಅದರ ಕಲೆಕ್ಷನ್ ಆರು ಕೋಟಿ ರೂಪಾಯಿ ಮೀರಿಲ್ಲ, ಅದು ಇನ್ನೂ ನಾಲ್ಕೈದು ವಾರ ಓಡಿದರೆ ಮಾತ್ರ ವಿತರಕರ ದುಡ್ಡು ವಾಪಸ್ ಬರಬಹುದು. ಆದರೆ ನವೆಂಬರ್ ಒಂದರಿಂದ ಬಹುತೇಕ ಚಿತ್ರ ಮಂದಿರಗಳಲ್ಲಿ ಒಂದು ತಿಂಗಳ ಕಾಲ ಕನ್ನಡ ಸಿನಿಮಾಗಳನ್ನು ಮಾತ್ರ ಪ್ರದರ್ಶಿಸಬೇಕು ಎಂಬ ತೀರ್ಮಾನವಿರುವುದರಿಂದ ಕುಂಟುತ್ತಾ ಓಡುತ್ತಿರುವ 'ಎಂದಿರನ್' ಚಿತ್ರದ ಕಾಲುಮುರಿದಂತಾಗಿದೆ.



ಈ ಮಧ್ಯೆ 'ಎಂದಿರನ್' ಚಿತ್ರದ ಅಬ್ಬರದ ನಡುವೆಯೇ ಬಿಡುಗಡೆಗೊಂಡ 'ಜಾಕಿ' ನಿರೀಕ್ಷೆಯನ್ನೂ ಮೀರಿ ಕಲೆಕ್ಷನ್ ಮಾಡಿದೆ. ಬರೀ ಕನ್ನಡದ ಪ್ರೇಕ್ಷಕರು ಮಾತ್ರವಲ್ಲದೆ, ತೆಲುಗು, ತಮಿಳು ಸಿನಿಮಾ ಅಭಿಮಾನಿಗಳೂ 'ಜಾಕಿ'ಯನ್ನು ನೋಡಲು ಮುಗಿಬೀಳುತ್ತಿದ್ದಾರೆ. ಹೀಗಾಗಿ ಬಿಡುಗಡೆಯಾದ ಮೊದಲ ವಾರವೇ 'ಜಾಕಿ' ಆರು ಕೋಟಿಗಳ ಕಲೆಕ್ಷನ್ ಮಾಡಿದೆ. ಎರಡನೇ ವಾರ ಇನ್ನೂ ನಾಲ್ಕು ಕೋಟಿ ಬಂದು ವಿತರಕರಿಗೆ ಎಪ್ಪತ್ತು ಪರ್ಸೆಂಟ್‌ಗಿಂತಲೂ ಅಧಿಕ ಶೇರು ಬಂದಿದೆ. ಜೊತೆಗೇ ಮೂರು ಮತ್ತು ನಾಲ್ಕನೇ ವಾರಕ್ಕೆ ಐದು ಕೋಟಿಯ ವಹಿವಾಟಂತೂ ಗ್ಯಾರೆಂಟಿ. ಹೀಗಾಗಿ 'ಜಾಕಿ'ಯ ಮೇಲೆ ಕಾಸು ಹಾಕಿದ್ದ ಎಲ್ಲ ವಿತರಕರೂ ಈಗಾಗಲೇ ಸೇಫ್ ಜೋನ್ ತಲುಪಿದ್ದಾರೆ.

ಅಂದರೆ, ಕರ್ನಾಟಕದ ಮಟ್ಟಿಗೆ ಸೂಪರ್ ಸ್ಟಾರ್ ರಜನೀಕಾಂತ್ ಅವರ 'ಎಂದಿರನ್' ಸೋತಿದ್ದು, ಪುನೀತ್ ರಾಜ್‌ಕುಮಾರ್ ಅವರ 'ಜಾಕಿ' ಸಕತ್ತಾಗಿ ಗೆಲುವು ಸಾಧಿಸಿದೆ!!

ಪುನೀತ್ ಪವರ್!

ಪುನೀತ್ ರಾಜ್‌ಕುಮಾರ್ ಇಲ್ಲಿಯತನಕ ನಟಿಸಿರುವ ಬಹುತೇಕ ಚಿತ್ರಗಳು ಸೂಪರ್‌ಹಿಟ್ ಆಗಿವೆ. ಇಂತಹ ಯಶಸ್ಸಿನ ನಡುವೆಯೂ ಪುನೀತ್ ತಮ್ಮ ವ್ಯಕ್ತಿತ್ವದಲ್ಲಾಗಲಿ, ಪ್ರವೃತ್ತಿಯಲ್ಲಾಗಲಿ ಯಾವುದೇ ಬದಲಾವಣೆಯನ್ನು ಮಾಡಿಕೊಳ್ಳದೆ, ನಟನೆಯಲ್ಲಿ ಮಾತ್ರ ಚಿತ್ರದಿಂದ ಚಿತ್ರಕ್ಕೆ ಮಾಗುತ್ತಿರುವ ನಟರಾಗಿದ್ದಾರೆ. "ನಾನು ನೋಡೋದಕ್ಕೆ ಅಷ್ಟೇನೂ ಸುಂದರವಾಗಿಲ್ಲ" ಎಂದು ಹೇಳಿಕೊಳ್ಳುತ್ತಲೇ ಬಾಕ್ಸ್ ಆಫೀಸ್‌ನ ಕಿಂಗ್ ಎನಿಸಿಕೊಂಡಿದ್ದಾರೆ ಪುನೀತ್.

ಕನ್ನಡದಲ್ಲಿ ಸದ್ಯ ಇರುವ ಹೀರೋಗಳ ಚಿತ್ರಗಳಿಗೆ ವಿತರಕರು ಮುಂಗಡ ಹಣವನ್ನು ನೀಡಿ ಹಂಚಿಕೆ ತೆಗೆದುಕೊಳ್ಳಲು ಮುಂದೆ ಬರುತ್ತಿಲ್ಲ, ಆದರೆ ಪುನೀತ್ ವಿಚಾರದಲ್ಲಿ ಮಾತ್ರ ಅದು ತದ್ವಿರುದ್ಧ. ಯಾಕೆಂದರೆ, ಪುನೀತ್ ಅಭಿನಯದ ಚಿತ್ರವೊಂದು ಸೆಟ್ಟೇರುತ್ತಿದ್ದಂತೇ ಆ ಚಿತ್ರದ ಹಂಚಿಕೆಗಾಗಿ ನಾ ಮುಂದು ತಾ ಮುಂದು ಎಂದು ಡಿಸ್ಟ್ರಿಬ್ಯೂಟರ್‌ಗಳು ನಿರ್ಮಾಪಕರ ಬೆನ್ನುಬೀಳುತ್ತಾರೆ.

ಪುನೀತ್ ಈವರೆಗೆ ನಟಿಸಿರುವ ಎಲ್ಲ ಚಿತ್ರಗಳ ಆಡಿಯೋಗಳು ಸೂಪರ್ ಹಿಟ್ ಆಗಿರುವುದರಿಂದ ಅವರ ಚಿತ್ರದ ಆಡಿಯೋ ಹಕ್ಕುಗಳಿಗೂ ಬಂಗಾರದ ಬೆಲೆ. 'ರಾಜ್' ಚಿತ್ರದ ಆಡಿಯೋ ಬಿಡುಗಡೆಯಾದಾಗ ಮೊದಲ ಬಾರಿಗೆ ಜನ ಚಿತ್ರಮಂದಿರಗಳ ಎದುರು ಟಿಕೆಟ್‌ಗಾಗಿ ಕ್ಯೂ ನಿಲ್ಲುವಂತೆ ಧ್ವನಿಸುರುಳಿಗಾಗಿ ಅಂಗಡಿಗಳ ಮುಂದೆ ಕ್ಯೂ ನಿಂತಿದ್ದರು. ಕನ್ನಡದಲ್ಲಿ ಆಡಿಯೋಗೆ ಮಾರ್ಕೆಟ್ಟೇ ಇಲ್ಲ ಎನ್ನುವ ಸ್ಥಿತಿಯಲ್ಲೂ 'ಜಾಕಿ' ಚಿತ್ರದ ಆಡಿಯೋ ಐವತ್ತೊಂಭತ್ತು ಲಕ್ಷಕ್ಕೆ ಸೇಲ್ ಆಗಿದೆ. ಇನ್ನು ಪುನೀತ್ ಅವರ ಸಿನೆಮಾಗಳ ಚಾನಲ್ ರೈಟ್ಸ್‌ನಿಂದಲೇ ಸಿನಿಮಾಕ್ಕೆ ಹೂಡಿದ ಅತಿ ಹೆಚ್ಚು ಪಾಲು ವಾಪಸ್ ಬಂದುಬಿಡುತ್ತದೆ.

ಆರಂಭದಿಂದಲೂ ಪುನೀತ್ ನಟಿಸಿದ ಕನ್ನಡ ಚಿತ್ರಗಳ ಡಬ್ಬಿಂಗ್ ರೈಟ್ಸ್‌ಗೆ ಪರಭಾಷೆಗಳಲ್ಲಿ ಭಾರೀ ಬೇಡಿಕೆ ಇದ್ದೇ ಇದೆ. ಈ ಹಿಂದೆ ಪುನೀತ್ ಅಭಿನಯಿಸಿದ್ದ 'ಬಿಂದಾಸ್', 'ಮಿಲನ', 'ಪೃಥ್ವಿ' ಮುಂತಾದ ಚಿತ್ರಗಳು ಮಲೆಯಾಳಂ ಭಾಷೆಗೆ ಡಬ್ ಆಗಿದ್ದವು. 'ಮಿಲನ' ಚಿತ್ರ ಕೇರಳದಲ್ಲೂ ಹಿಟ್ ಆಗಿತ್ತು, ಹೀಗಾಗಿ ಅವರ ಚಿತ್ರಗಳಿಗೆ ಹೊರ ರಾಜ್ಯಗಳಿಂದಲೂ ಆದಾಯ ಇದ್ದೇ ಇದೆ.



ಪುನೀತ್ ಭಟ್ಟರ ಕೈಯೊಳಗೆ!

ಕಳೆದ ಮೂರು ವರ್ಷಗಳಿಂದ ಒಂದೇ ಸಮನೆ 'ಜಸ್ಟ್ ಮಿಸ್' ಆಗುತ್ತಿದ್ದ ಪುನೀತ್-ಭಟ್ಟರ ಜೋಡಿ ಈಗ ಕೊನೆಗೂ ಜೊತೆಯಾಗುತ್ತಿದೆ. ಕನ್ನಡದ ಇವತ್ತಿನ ಸ್ಟಾರ್ ನಿರ್ದೇಶಕ ಯೋಗರಾಜ್ ಭಟ್ ಮತ್ತು ಪವರ್ ಸ್ಟಾರ್ ಪುನೀತ್ ಕಾಂಬಿನೇಷನ್ ಸತತ ಮೂರು ಬಾರಿ ಕೈತಪ್ಪಿತ್ತು. ಹಾಗೆ ನೋಡಿದರೆ 'ಮುಂಗಾರು ಮಳೆ'ಯಲ್ಲಿ ಗಣೇಶ್ ನಿರ್ವಹಿಸಿದ ಪಾತ್ರವನ್ನು ಪುನೀತ್ ಅವರೇ ನಿಭಾಯಿಸಬೇಕಿತ್ತು, ಆದರೆ ರಾಘವೇಂದ್ರ ರಾಜ್‌ಕುಮಾರ್‌ಗೆ 'ಮಳೆ' ಕಥೆ ಅಷ್ಟು ಒಪ್ಪಿಗೆಯಾಗಿರಲಿಲ್ಲ, ಬೇರೆ ಯಾವುದೇ ಹೀರೋ ಆಗಿದ್ದಿದ್ದರೆ "ಅಂಥಾ ಹಿಟ್ ಸಿನಿಮಾವನ್ನು ನಾನು ಬಿಡಬಾರದಿತ್ತು" ಎಂದು ಭಾವಿಸುತ್ತಿದ್ದರೇನೋ? ಆದರೆ ಪುನೀತ್ ಮಾತ್ರ "'ಮುಂಗಾರು ಮಳೆ'ಯಲ್ಲಿ ಗಣೇಶ್‌ನಂಥ ಹೊಸ ಹೀರೋ ನಟಿಸಿದ್ದೇ ಒಳ್ಳೆಯದಾಯ್ತು, ಬಹುಶಃ ನಾನು ಆ ಚಿತ್ರದಲ್ಲಿ ನಟಿಸಿದ್ದರೆ ಜನ ಅದನ್ನು ಈ ಮಟ್ಟಕ್ಕೆ ಸ್ವೀಕರಿಸುತ್ತಿದ್ದರೋ ಇಲ್ಲವೋ" ಎಂದಿದ್ದರು. ಆನಂತರ ಪುನೀತ್-ಭಟ್ ಕಾಂಬಿನೇಷನ್‌ನಲ್ಲಿ ರಾಕ್‌ಲೈನ್ ವೆಂಕಟೇಶ್ ನಿರ್ಮಾಣದಲ್ಲಿ 'ಲಗೋರಿ' ಚಿತ್ರ ಇನ್ನೇನು ಆರಂಭವಾಗೇಬಿಟ್ಟಿತು ಎನ್ನುವಾಗ ಮುಹೂರ್ತಕ್ಕೆ ಒಂದೆರಡು ದಿನಗಳ ಮುನ್ನ ಚಿತ್ರ ರದ್ದಾಗಿತ್ತು, ಹೀಗೆ ಮೇಲಿಂದ ಮೇಲೆ ಭಟ್ಟರ ಸಿನೆಮಾದಲ್ಲಿ ನಟಿಸುವ ಮತ್ತು ಪುನೀತ್ ಚಿತ್ರವನ್ನು ನಿರ್ದೇಶಿಸುವ ಅವಕಾಶಗಳು ಪರಸ್ಪರ ಕೈತಪ್ಪಿದ್ದವು.

ಆದರೆ ಈಗ ಬಂದಿರುವ ಸುದ್ದಿಯ ಪ್ರಕಾರ ಸದ್ಯದಲ್ಲೇ ಪುನೀತ್‌ರ ಸಿನಿಮಾವನ್ನು ಯೋಗರಾಜ್ ಭಟ್ ನಿರ್ದೇಶಿಸುವುದಾಗಿ ನಿಶ್ಚಯವಾಗಿದೆ. ಈಗಾಗಲೇ ಭಟ್ ಮೂರು ಕಥೆಗಳನ್ನು ರಾಘವೇಂದ್ರ ರಾಜ್ ಕುಮಾರ್‌ಗೆ ಹೇಳಿಯಾಗಿದೆ. ಅದರಲ್ಲಿ ಒಂದು ಸ್ಟೋರಿ ಲೈನ್‌ಅನ್ನು ರಾಘಣ್ಣ ಓಕೆ ಮಾಡಿದ್ದಾರೆ. ಸದ್ಯ ವಜ್ರೇಶ್ವರಿ ಕಂಬೈನ್ಸ್ ಅವರ ಹೋಂ ಬ್ಯಾನರ್‌ನಲ್ಲಿ ನಿರ್ಮಾಣವಾಗುತ್ತಿರುವ 'ನಾಡೋಡಿಗಳ್' ಚಿತ್ರದ ರಿಮೇಕ್ ನಂತರ ಭಟ್ಟರ ಸಿನಿಮಾ ಶುರುವಾಗಲಿದೆ. ಈ ಚಿತ್ರವನ್ನು ವಿತರಕ ಜಯಣ್ಣ ನಿರ್ಮಿಸುತ್ತಿದ್ದು, ಭಟ್ಟರೂ ಅದರಲ್ಲಿ ಪಾಲುದಾರಿಕೆ ಪಡೆಯುವ ಸಾಧ್ಯತೆಗಳಿವೆ.

ಈ ಹಿಂದೆ ಚಿತ್ರವೊಂದರ ನಿರ್ದೇಶನಕ್ಕೆ ಒಂದು ಕೋಟಿ ರೂಪಾಯಿಗಳ ಸಂಭಾವನೆ ಕೇಳುತ್ತಿದ್ದ ಭಟ್ಟರು ಈಗ ವ್ಯವಹಾರದ ವಿಚಾರದಲ್ಲಿ ಮತ್ತಷ್ಟು ಚುರುಕಾಗಿದ್ದಾರೆ. ಅದಕ್ಕೆ 'ಪಂಚರಂಗಿ' ಒಂದು ಉದಾಹರಣೆ. ಸ್ವತಃ ಭಟ್ಟರೇ ನಿರ್ಮಿಸಿದ್ದ ಈ ಚಿತ್ರಕ್ಕೆ ಒಂದೂವರೆ ಕೋಟಿಗಿಂತ ಹೆಚ್ಚು ಹಣ ಖರ್ಚಾಗಿರಲಿಲ್ಲ, ಆದರೆ ಚಾನೆಲ್ ರೈಟ್ಸ್‌ಗೆ ಒಂದೂಕಾಲು ಕೋಟಿ ಸಿಕ್ಕಿತ್ತು, ಆಡಿಯೋ ಕೂಡಾ ಒಳ್ಳೇ ರೇಟಿಗೆ ವ್ಯಾಪಾರವಾಗಿತ್ತು, ಅಲ್ಲಿಗೆ ಭಟ್ಟರು ಸಿನಿಮಾ ಬಿಡುಗಡೆಗೆ ಮುನ್ನವೇ ಲಾಭದಲ್ಲಿದ್ದರು. ಚಿತ್ರ ತೆರೆಗೆ ಬಂದು ಐವತ್ತು ದಿನ ಪೂರೈಸುವುದರೊಳಗಾಗಿ ಸುಮಾರು ಆರು ಕೋಟಿ ರೂಪಾಯಿಗಳ ವಹಿವಾಟು ನಡೆಸಿದೆ.

ಈಗ ಜಯಣ್ಣ ನಿರ್ಮಾಣದ, ಪುನೀತ್ ನಟಿಸಲಿರುವ ಚಿತ್ರಕ್ಕೂ "ನನಗೆ ಸಂಭಾವನೆ ಬೇಡ. ಬಂದ ಲಾಭದಲ್ಲಿ ಇಂತಿಷ್ಟು ಶೇರು ಕೊಟ್ಟುಬಿಡಿ ಸಾಕು" ಎಂಬ ಹೊಸ ಕರಾರನ್ನು ಭಟ್ ಮುಂದಿಟ್ಟಿದ್ದಾರೆ. ಪುನೀತ್-ಯೋಗರಾಜ್ ಭಟ್ ಕಾಂಬಿನೇಷನ್‌ನ ಚಿತ್ರ ಸೆಟ್ಟೇರುವ ಮುನ್ನವೇ ಅದರ ಮಾರಾಟದ ರೇಟು ಸುಮಾರು 30 ಕೋಟಿ ದಾಟುವ ಅಂದಾಜಿದೆ.

ಅಂದರೆ ಸಿನಿಮಾ ಸಿದ್ಧಗೊಳ್ಳುವ ಮುನ್ನವೇ ಪುನೀತ್-ಯೋಗರಾಜ್ ಭಟ್ ಜೋಡಿಯ ಚಿತ್ರ ಕನ್ನಡ ಸಿನಿಮಾರಂಗದಲ್ಲೇ ದಾಖಲೆ ಬರೆಯುವ ನಿರೀಕ್ಷೆ ಹುಟ್ಟಿಸಿದೆ!!



• ಅರುಣ್.ಜಿ
arunodayagc@gmail.com

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore